ಹೊಸ ಮನುಷ್ಯ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೧ ಅಕ್ಟೋಬರ್-೨೦೧೦ ಸಂಚಿಕೆ-೩



ಬಾಬರಿ ಮಸೀದಿ ಅಯೋಧ್ಯಾ ಸಮಸ್ಯೆ ಧರ್ಮನಿರಪೇಕ್ಷತೆಯ ಸತ್ವಪರೀಕ್ಷೆ

ಜನಪದ ವಿಚಾರದಲ್ಲಿ

ಅಕ್ಟೋಬರ್-೨೦೧೦

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಕ್ಟೋಬರ್ - ೨೦೧೦
ಸಂಪುಟ - ೧೧
ಸಂಚಿಕೆ - ೩

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ನಾಡ ನೇಸರ ಬಾಪೂ

ಕಾಳಶಕ್ತಿಯ ಕ್ರೂರ ದಾಳಿಗಾಹುತಿಯಾಗಿ
ನಾಡನೇಸರ ಬಾಪು ಮುಳುಗುತಿರಲು
ಹಾಳು ಹಾಳ್ ಸುರಿಯಿತಯ್
ಭುವಿಯ ಬಾಳೆಂಬುವುದು
ಎದೆಯಾಳದಳಲು ಹೊರಹೊಮ್ಮುತಿರಲು.

ಸಿಡಿಗುಂಡಿಗೊಡೆದ
ಕನ್ನಡಿಯಾದರೇನಂತೆ?
ನಾಡನೇಸರನಾತ್ಮಮಮರವಹುದು.
ನಕ್ಷತ್ರಗಳ ಪುಂಜವಾಗುತಲಿ
ರಂಜಿಸುತ ಬಾಳಿನೊಸಗೆಯ
ಬಯಸಿ ಬೆಳಗುತಿಹುದು.

ನಾಡನೇಸರನಿಂದ ಕದ್ದುಕೊಂಡಿಹ ಬೆಳಕ
ಬಂಡವಾಳದ ಥಳುಕಿನಾಟವೇನು!
ಬಿಳಿಯ ಟೋಪಿಯ ಬಂಟ-ಭಂಡ ಬಾಳಿನ
ನೆಂಟ-ಕಳ್ಳ ತಿಂಗಳಿನ ಚೆಲ್ಲಾಟವೇನು!

ಕತ್ತಲೆಯು ಗುಡಿಗಟ್ಟಿ ಬೆಳಕನೆಲ್ಲವ ಮೆಟ್ಟಿ
ದೈತ್ಯಶಕ್ತಿಯ ಬೆನ್ನು ತಟ್ಟಲೇನು?
ಮನುಜಮನ ಮುತ್ತಿರುವ
ಮಂಕುತನದಾವರಣ
ಹರಿದೊಗೆವ ಹೊಸಬೆಳಕು ಹುಟ್ಟದೇನು?

ಏನಾದರೇನಂತೆ? ಎದೆಗೆಡುವುದೇಕಂತೆ?
ಕತ್ತಲೆಗೆಬಹುದು ಕೊನೆಗಾಲ ತಾನು!
ಹೊಸದಿನದ ಹೊಸಬಾಳಿನಾಸೆಯನು
ತಾಳುತಲಿ,
ಹುರುಪಿನಿಂ ಬರದಿರನು ಕ್ರಾಂತಿಭಾನು!

- ಎಂ. ಅಕಬರ ಅಲಿ

ವಿಚಾರ ದೀಪ್ತಿ

ನಮ್ಮ ಪ್ರಜಾತಂತ್ರ ಬಂದೂಕಿಗೆ ಉತ್ತರಿಸುತ್ತದೆ, ಆದರೆ ಗಾಂಧೀಜೀಪ್ರೇರಿತರಾದ ಸತ್ಯಾಗ್ರಹಕ್ಕೆ ಅಲ್ಲ. ಮೇಧಾ ಪಾಟ್ಕರ್ ಜೊತೆ ಗಂಭೀರವಾಗಿ ತೊಡಗಿಕೊಂಡಿರುವ ಲೇಖಕಿ ಅರುಂಧತಿ ರಾಯ್‌ರವರಿಗೂ ಹೀಗೆಯೇ ಅನ್ನಿಸಿರಬಹುದು. ಆದರೆ ಹೀಗೆಯೇ ಅನ್ನಿಸಿತೆಂದರೆ ದುರದೃಷ್ಟವೇ ಸರಿ. ನಾವು ಹೋದ ಮೇಲೂ ಈ ಜೀವಜಗತ್ತು ಉಳಿದಿರುತ್ತದೆ ಎಂಬ ನಂಬಿಕೆ ನಮಗೆ ಇರಬೇಕು. ಅಹಿಂಸಾತ್ಮಕವಾದ ಹೋರಾಟದಲ್ಲಿ ನಮ್ಮ ವಿಚಾರಗಳಾದರೂ "ಮಣ್ಣಿನೊಳಗಿನ ಸಹಿಷ್ಣುತೆ ಕತ್ತಲಿನಲ್ಲಿ ಮೊಳಕೆಯೊಡೆಯಲು ಕಾಯುವ ಬೀಜದಂತೆ ಉಳಿದಿರುತ್ತದೆ" ಎಂಬ ಸಾವಧಾನವಿರುವ ನಾಗರಿಕ ಸಮಾಜವನ್ನು ನಾವು ಸೃಷ್ಟಿಸುತ್ತಲೇ ಇರಬೇಕಾಗುತ್ತದೆ. ಮಾವೋವಾದಿಗಳು ಮುಂದೆ ಕಟ್ಟಲಿರುವ ಪ್ರತಿವ್ಯಕ್ತಿಯ ಅಸ್ಮಿತೆಯನ್ನೇ ಅಳಿಸಿಹಾಕುವ ಬಿಗಿ ವ್ಯವಸ್ಥೆಗಾಗಿ ಸದ್ಯದಲ್ಲಿ ತೊಡಗುವ ಹಿಂಸೆಯನ್ನು ಮತ್ತು ಈಗಿರುವ ಕಾನೂನುಬದ್ಧವೆಂಬ ಭ್ರಮೆಯ ವ್ಯವಸ್ಥೆಯ ಹಿಂಸೆಯನ್ನೂ ಏಕಕಾಲದಲ್ಲಿ ಎದುರಿಸುವ ತ್ರಾಣ ನಮ್ಮದಾಗಬೇಕಿದೆ.

ಈ ಪ್ರಪಂಚ ಅಕ್ಷಯಪಾತ್ರೆಯಲ್ಲ. ಹಾಗೆಂದು ತಿಳಿಯುವವರು ಟೆಕ್ನಾಲಜಿಯನ್ನು ನಂಬಿರುವ ಕ್ಯಾಪಿಟಲಿಸ್ಟರು ಹಾಗೂ ಇವರಿಗೆ ವಿರೋಧಿಗಳೆಂಬಂತೆ ಕಾಣುವ ಕಮ್ಯೂನಿಸ್ಟ್ ಸರ್ಕಾರವನ್ನು ನಡೆಸಿದ ಸೋವಿಯತ್ತರು ಮತ್ತು ಈಗ ಚೀನೀಯರು ಅಂತಿಮವಾಗಿ ತುಳಿದದ್ದು ಇದೇ ಹಾದಿಯನ್ನೇ. ಈ ಎರಡೂ ಅಲ್ಲದ ಪರ್ಯಾಯವೊಂದು ಸಾಧ್ಯವೇ? ಇದು ಜಗತ್ತಿನಾದ್ಯಂತ ನಾಗರಿಕ ಸಮಾಜ ನಡೆಸುತ್ತಿರುವ ಹುಡುಕಾಟವಾಗಿದೆ. ಇದರ ಹಿಂದೆ ಮಾರ್ಕ್ಸ್ ನಡೆಸಿದ ಉತ್ಪಾದನಾ ಸಂಬಂಧಗಳ ನಿಷ್ಠುರ ವಿಶ್ಲೇಷಣೆಯಿದೆ. ಗಾಂಧೀಜಿ ಚಿಂತನೆಗನುಸಾರವಾದ ಉತ್ಪಾದನಾ ವಿಧಾನಗಳ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯ ಧ್ಯಾನ ಶೀಲ ಚಿಂತನೆಯಿದೆ.

– *ಯು.ಆರ್.ಅನಂತಮೂರ್ತಿ*

(ಸಾಭಾರ : ಪ್ರಜಾವಾಣಿ ದಿನ ಪತ್ರಿಕೆ)

ಬಾಬರಿ ಮಸೀದಿ-ಅಯೋಧ್ಯಾ ವಿವಾದ ಧರ್ಮನಿರಪೇಕ್ಷತೆಯ ಸತ್ವಪರೀಕ್ಷೆ

- ಸುರೇಂದ್ರ ಕೌಲಗಿ

ರಾಷ್ಟ್ರಜೀವನದಲ್ಲೊಮ್ಮೆ ಅದರ ಸತ್ವಪರೀಕ್ಷೆಯ ಕಾಲ ಬರುತ್ತದೆ. ಆಗ ಆ ರಾಷ್ಟ್ರದಲ್ಲಿಯ ಪ್ರಜೆಗಳ ಸಂಸ್ಕೃತಿ, ಚಿಂತನಾಶೀಲತೆ, ರಾಜಕೀಯ ಪ್ರಜ್ಞೆ, ರಾಷ್ಟ್ರದ ಒಗ್ಗಟ್ಟಿನ ಬಗ್ಗೆ ಇರುವ ಬದ್ಧತೆ, ಧರ್ಮಗುರುಗಳ ಪ್ರಭಾವ ಇತ್ಯಾದಿಗಳು ಒರೆಗಲ್ಲಿನ ಪರೀಕ್ಷೆಗೆ ಒಳಗಾಗುತ್ತವೆ. ಜೀವನದ ಕಠೋರ ವಾಸ್ತವಿಕತೆಯನ್ನು ಪ್ರಜೆಗಳು ಹೇಗೆ ಎದುರಿಸುತ್ತಾರೆ ಎಂಬುದರ ಸತ್ವಪರೀಕ್ಷೆ ಆಗುತ್ತದೆ. ಇಂಥ ಪರೀಕ್ಷೆಗಳು ರಾಷ್ಟ್ರಮಟ್ಟದಲ್ಲೂ, ಸಾಮ್ರಾಜ್ಯಗಳ ಮಟ್ಟದಲ್ಲೂ, ಆಗಿಹೋದ ಉದಾಹರಣೆಗಳು ಇವೆ. ಸಾಮ್ರಾಜ್ಯದ ಉದಾಹರಣೆಗಳನ್ನೇ ತೆಗೆದುಕೊಳ್ಳುವುದಾದರೆ, ರೋಮ್, ವಿಜಯನಗರ, ಇಂಗ್ಲೆಂಡ್, ರಷ್ಯಾ ಮುಂತಾದುವುಗಳು ನಮಗೆ ದೊರೆಯುತ್ತವೆ. ಈ ಎಲ್ಲಾ ಸಾಮ್ರಾಜ್ಯಗಳು ಒಂದು ಕಾಲಕ್ಕೆ ಉಚ್ಛ್ರಾಯ ಸ್ಥಿತಿ ತಲುಪಿದ್ದವು. ತಮ್ಮ ಆಂತರಿಕ ಸಾಂಸ್ಕೃತಿಕ, ರಾಜಕೀಯ ಕಾರಣಗಳಿಂದಾಗಿ; ಮಹತ್ವಾಕಾಂಕ್ಷೆಯ ಕಾರಣದಿಂದಾಗಿ ಅವನತಿಯನ್ನು ಕಂಡವು. ಮುಂದೆ ಅವು ತಲೆಯೆತ್ತಲೇ ಇಲ್ಲ.

ಇನ್ನು ದೇಶಗಳ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಅಫಘಾನಿಸ್ತಾನ, ಶ್ರೀಲಂಕಾ, ಬರ್ಮಾ, ಪಾಕಿಸ್ತಾನ, ಜಪಾನ್, ಈಜಿಪ್ತ್ ಮುಂತಾದವುಗಳು ನಮಗೆ ದೊರೆಯುತ್ತವೆ. ಈಗ ಭಾರತ ಅಂತಹ ಸತ್ವಪರೀಕ್ಷೆಗೆ ಒಳಗಾಗುವ ಕಾಲ ಬಂದಿದೆ. ಭಾರತ ಏಕಕಾಲಕ್ಕೆ ದೇಶವೂ ಹೌದು, ರಾಷ್ಟ್ರವೂ ಹೌದು. ವಿಸ್ತಾರವಾದ ಭೌಗೋಳಿಕ ಪ್ರದೇಶ, ವಿವಿಧ ಬಗೆಯ ಹವಾಮಾನ, ಹತ್ತಾರು ಮತಗಳು, ನೂರಾರು ಭಾಷೆಗಳು, ವೈವಿಧ್ಯಮಯ ಸಂಸ್ಕೃತಿಗಳು, ಶತಕೋಟಿಗೂ ಮೀರಿದ ಜನಸಂಖ್ಯೆ, ಮೂವತ್ತು ಸಾವಿರ ವರ್ಷಗಳಷ್ಟು ಪುರಾತನವಾದ ಸಂಸ್ಕೃತಿ, ಬಲಾಢ್ಯ ಸೇನಾಬಲ ಮತ್ತು ಶಸ್ತ್ರಬಲ ಮುಂತಾದ ಅಂಶಗಳೆಲ್ಲವೂ ಭಾರತವನ್ನು ಸಾಮ್ರಾಜ್ಯದ ವ್ಯಾಖ್ಯೆಗೆ ಒಳಪಡಿಸಿದೆ. ಭಾರತವು ಯಾವುದೇ ಪರದೇಶದ ಮೇಲೆ ದಾಳಿ ಮಾಡದೇ ಇರಬಹುದು. ಹೊರದೇಶದ ದಾಳಿಯನ್ನು ಎದುರಿಸುವ ಶಕ್ತಿಯನ್ನು ಹೊಂದಿದೆ. ಆರ್ಥಿಕವಾಗಿಯೂ ಸಾಕಷ್ಟು ಸದೃಢವಾಗಿದೆ. ಇಂಗ್ಲೆಂಡಿನಂಥ ಬಲಿಷ್ಠ ಸಾಮ್ರಾಜ್ಯದೊಂದಿಗೆ ತನ್ನದೇ ಆದ ವಿಶಿಷ್ಟ ಹೋರಾಟ ಪದ್ಧತಿಯಿಂದ ಬಿಡುಗಡೆಗೊಂಡಿದ್ದು ಇತಿಹಾಸ. ಬಿಡುಗಡೆಗೊಂಡು ಆರು ದಶಕಗಳು ಮಾತ್ರ ಕಳೆದಿದೆ. ಸಾವಿರಾರು ವರ್ಷಗಳಿಂದ ಸ್ವತಂತ್ರ್ಯವಾಗಿದ್ದು ಉನ್ನತ ಸಂಸ್ಕೃತಿಯನ್ನು ಹೊಂದಿದ್ದ ಭಾರತ ಜಾಗತಿಕ ಮಟ್ಟದ ಸ್ಥಿತ್ಯಂತರಗಳ

ಕಾರಣದಿಂದಾಗಿ ಬ್ರಿಟಿಷ್ ಸಾಮ್ರಾಜ್ಯದ ಹಿಡಿತಕ್ಕೆ ಒಳಗಾಗಬೇಕಾಯಿತು. ನೂರೈವತ್ತು ವರ್ಷಗಳ ಕಾಲ ಪಾರತಂತ್ರ್ಯವನ್ನು ಅನುಭವಿಸಬೇಕಾಯಿತು. ೧೯೪೭ರಲ್ಲಿ ಭಾರತ ಸ್ವಾತಂತ್ರ್ಯ ಪಡೆಯಿತು. ಸಾಂಸ್ಕೃತಿಕವಾಗಿ ಭಾರತ ಬಹು ಪುರಾತನ ದೇಶವಾಗಿದ್ದರೂ, ರಾಜಕೀಯವಾಗಿ ಹೊಸ ದೇಶವಾಯಿತು. ತನ್ನ ಹೊಸತನವನ್ನು ಪಡೆದು ಕೇವಲ ಆರು ದಶಕಗಳಾಗಿವೆಯಷ್ಟೆ. ದೇಶದ ಕಾಲಗುಣಿತದಲ್ಲಿ ಅರವತ್ತು ವರ್ಷಗಳು ತುಂಬ ಸಣ್ಣ ಕಾಲಮಾನ. ಅನಂತ ಕಾಲದ ಭಾಗವಾಗಿರುವ ದೇಶದ ಚರಿತ್ರೆಯಲ್ಲಿ ಅದರ ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ ಅಸ್ತಿತ್ವಕ್ಕೆ ಆಘಾತ ಉಂಟಾಗಬಹುದಾದಂಥ ಸನ್ನಿವೇಶ ಬಂದಿರುವುದು ಅದರ ಅಸ್ತಿತ್ವ ಪರೀಕ್ಷೆಯ ಕಾಲವಾಗಿದೆ. ಭಾರತ ತನ್ನ ಸ್ವಾತಂತ್ರ್ಯೋತ್ಸವದ ೬೩ನೇ ವರ್ಷವನ್ನು ಕಳೆದ ತಿಂಗಳಷ್ಟೇ ಸಂಭ್ರಮ ಮತ್ತು ಸಂತೋಷದಿಂದ ಹಾಗೂ ತನ್ನ ಉಜ್ವಲ ಭವಿಷ್ಯದ ಕನಸಿನೊಂದಿಗೆ ಆಚರಿಸಿತು. ತಾನು ಪಡೆದ ಸ್ವಾತಂತ್ರ್ಯ ತನ್ನ ಬಸಿರಿನಲ್ಲಿ ತನ್ನ ಅಸ್ತಿತ್ವಕ್ಕೇ ಮಾರಣಾಂತಕವಾಗಿ ಹೊರಬರುವ ಸಮಸ್ಯೆಗಳನ್ನಿಟ್ಟುಕೊಂಡಿದೆ ಎಂಬುದನ್ನು ಮರೆತಿತ್ತು. ಈಗ ಆ ಸಮಸ್ಯೆಗಳೂ ಹೊರಬಂದು ದೇಶದ ಸ್ವಾತಂತ್ರ್ಯದಷ್ಟೇ ಹಳೆಯದಾಗಿಬಿಟ್ಟಿವೆ. ಸ್ವತಂತ್ರ ದೇಶ ಬೆಳೆದಷ್ಟೂ ಆ ಸಮಸ್ಯೆಗಳೂ ಬೆಳೆಯುತ್ತಿವೆ. ಸ್ವತಂತ್ರ್ಯ ದೇಶವೊಂದೆಷ್ಟು ಉತ್ಸಾಹ, ನಿರ್ಭೀತ, ತಲ್ಲಣರಹಿತವಾಗಿರಬೇಕಾಗಿತ್ತೋ ಅಷ್ಟು ಉತ್ಸಾಹದಿಂದಲೂ, ನಿರ್ಭಯತೆಯಿಂದಲೂ, ನಿರಾತಂಕವಾಗಿಯೂ ಇತಿಹಾಸದ ಕಗ್ಗತ್ತಲೆಯ ಗವಿಯಲ್ಲಿ ಆತ್ಮಶ್ರೀಯ ಪ್ರಕಾಶದೊಂದಿಗೆ ಮುನ್ನಡೆಯುವ ಅದೃಷ್ಟವನ್ನು ಶಂಕಿಸುವಂತಹ ಕಾಲ ಭಾರತಕ್ಕೆ ಬಂದಿರುವುದು ಆತಂಕದ ಸಂಗತಿಯಾಗಿದೆ.

ಪ್ರತಿಯೊಂದು ದೇಶದ ಇತಿಹಾಸ ಚಕ್ರದಂತೆ ಸುತ್ತುತ್ತಿರುತ್ತದೆ. ಇತಿಹಾಸದಲ್ಲಿ ಯಾವುದೂ ಸ್ಥಿರವಲ್ಲ. ವ್ಯಕ್ತಿಗಳೂ ಬದಲಾಗುತ್ತಾರೆ, ಘಟನೆಗಳೂ ಬದಲಾಗುತ್ತಿರುತ್ತವೆ, ಜನರ ರೀತಿನೀತಿಗಳೂ ಬದಲಾಗುತ್ತಿರುತ್ತವೆ, ಸಮಾಜದ ಉನ್ನತಿ–ಅವನತಿ ನಡೆಯುತ್ತಿರುತ್ತದೆ. ಕಾಲವೆಂಬ ನಿರಂತರ ಚಲನಶೀಲತೆಯ ಕಾರಣದಿಂದುಂಟಾಗುವ ಏರುಪೇರುಗಳನ್ನು ದಾಖಲೆಗೊಳಿಸಿಕೊಳ್ಳುತ್ತಾ ಹೋಗುವ ಇತಿಹಾಸ ಪ್ರಚಲಿತ ಮಾನವೀಯ ಸಮಸ್ಯೆಗಳಿಗೆ ಎಷ್ಟು ಪ್ರಸ್ತುತ, ಎಷ್ಟು ಪ್ರಯೋಜಕ ಎಂಬ ಪ್ರಶ್ನೆ ಬಾಬರಿ ಮಸೀದಿ–ಅಯೋಧ್ಯಾ ವಿವಾದದ ಸಂದರ್ಭದಲ್ಲಿ ಉಂಟಾಗಿದೆ. ಐತಿಹಾಸಿಕ ಘಟನೆಗಳನ್ನು ಅವು ವ್ಯಕ್ತಿಜೀವನದಿಂದ ಪ್ರಾರಂಭಿಸಿ ಪ್ರಾಪಂಚಿಕದಲ್ಲೂ ಇರುವ ಸಮಸ್ಯೆಗಳನ್ನು ಇಂದಿನ ವೈಜ್ಞಾನಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಆಧುನಿಕ ಚಿಂತನೆಗಳ ಹಿನ್ನೆಲೆಯಲ್ಲಿ ಗಟ್ಟಿ ಆಧಾರವೆಂದಾಗಲೀ, ಪರಮಸಾಕ್ಷಿ ಎಂದಾಗಲೀ, ಭಾವಿಸುವುದು ಎಷ್ಟರ ಮಟ್ಟಿಗೆ ಸಾಧು ಎಂಬ ಪ್ರಶ್ನೆಯೂ ಉದ್ಭವವಾಗುತ್ತದೆ. ಸದಾ ಸಂಚಲನೆಯ ಜೀವನವೆಂಬ ನದಿಯಲ್ಲಿ ಉಂಟಾಗುವ ಏರಿಳಿತಗಳನ್ನು ದಾಖಲಿಸುವ ಇತಿಹಾಸ ಒಣಗಿದ ಕೊರಡಿನಂತೆ ಸ್ಪಂದನಾರಹಿತ.

ಇತಿಹಾಸ ಎಲ್ಲರೂ ತಿಳಿದಿರುವಂತೆ ಆಗಿಹೋಗಿರುವ ಘಟನೆಗಳ ದಾಖಲೆಯೇ ಹೊರತು ಮುಂದಿನ ಘಟನೆಗಳನ್ನು ನಿರೂಪಿಸುವ ಸಾಧನವೇನಲ್ಲ. ಭವಿಷ್ಯದ ಜೀವನವನ್ನು ಹಾಗೂ ಭವಿಷ್ಯದ ಸುಂದರ ಇತಿಹಾಸವನ್ನು ರೂಪಿಸಿಕೊಳ್ಳುವವರು ಜನರೇ. ಹಾಗೆ ಜೀವನವನ್ನು ರೂಪಿಸಿಕೊಳ್ಳುವ ಯಾನಕ್ಕೆ ಹೊರಡುವಾಗ ಅವರು ಮಾಡಬೇಕಾದ ಕೆಲಸವೇನೆಂದರೆ ಹಿಂದೆ ದಾಖಲಾಗಿರುವಂಥ ದುರ್ಘಟನೆಗಳು, ಮಾನವ ಕುಲದ ಹಿತಕ್ಕೆ ಮಾರಕವಾಗಿದ್ದಂಥ ಘಟನೆಗಳು ಮರುಕಳಿಸದಂತೆ ಎಚ್ಚರವಹಿಸುವುದು. ಗತಿಸಿದ ದುರ್ಘಟನೆಗಳೇ ಪುನಃ ಪುನಃ ಸಂಭವಿಸುವಂತೆ ಮಾಡಿದರೆ ಮನುಷ್ಯ ಈ ಸುಂದರ ವಸುಂಧರೆಯ ಮೇಲೆ ಜೀವಿಸುವ ತನ್ನ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಅಷ್ಟೇ ಅಲ್ಲ, ದಾನವನಾಗುತ್ತಾನೆ ಇಲ್ಲವೇ ಪಶುಸಮಾನನಾಗುತ್ತಾನೆ. ಇಂಗ್ಲಿಷರು ಹಿಂದಿನಂತೆಯೇ ಪುನಃ ತಮ್ಮ ಸಾಮ್ರಾಜ್ಯವನ್ನು ಕಟ್ಟುವ ಪ್ರಯತ್ನಮಾಡುವುದಾದರೆ, ಅಮೇರಿಕಾ ಎರಡನೇ ಮಹಾಯುದ್ಧದಲ್ಲಿಯಂತೆ ಅಣುಬಾಂಬ್ ಪ್ರಯೋಗಿಸುವುದಾದರೆ ಅವರನ್ನು ಮಾನವರೆಂದು ಕರೆಯಲು ಸಾಧ್ಯವೇ? ಅಂತೆಯೇ ನಾಲ್ಕುನೂರು ವರ್ಷಗಳ ಹಿಂದೆ ಮುಸಲ್ಮಾನ ದಾಳಿಕೋರರು ಮಾಡಿದ ತಪ್ಪನ್ನು ಮತ್ತು ಹದಿನೆಂಟು ವರ್ಷಗಳ ಹಿಂದೆ ಹಿಂದೂಗಳು ಮಾಡಿದ ತಪ್ಪನ್ನು ಪರಸ್ಪರ ನಿಂದನೆಗೂ, ದ್ವೇಷಕ್ಕೂ, ಕ್ರೌರ್ಯಕ್ಕೂ ಪರಿವರ್ತಿಸಿಕೊಳ್ಳುವವರನ್ನು ಮಾನವರೆಂದು ಕರೆಯಲು ಸಾಧ್ಯವೆ? ಇಸ್ಲಾಂ ಧರ್ಮ ಅಪಾಯದಲ್ಲಿದೆ ಎಂಬ ಗುಮ್ಮನನ್ನು ಹುಟ್ಟುಹಾಕಿ ತನ್ನ ಸ್ವಂತ ಅಧಿಕಾರಲಾಲಸೆಗಾಗಿ ಅತ್ಯಂತ ಪುರಾತನ ಸಂಸ್ಕೃತಿಯ ದೇಶವನ್ನು ವಿಭಜಿಸಿದ ಮೊಹಮ್ಮದ್ ಅಲಿ ಜಿನ್ನಾ ಈಗ ತನ್ನ ಗೋರಿಯಲ್ಲಿದ್ದಾರೆ. ಆದರೆ ವಿಭಜನೆಯ ಕಾರಣದಿಂದ ಒಂದು ನೂರು ಕೋಟಿ ಜನರು ಹೀನ ಕೋಮುಭಾವನೆಯ ಜೇಡನ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಕೋಮುದ್ವೇಷದ ಚಕ್ರವ್ಯೂಹದಲ್ಲಿ ಸುಲಭವಾಗಿ ಹೋಗಿ ಈಗ ಹೊರಬರಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾರೆ.

ಐತಿಹಾಸಿಕ ಘಟನೆಗಳ ಬಗ್ಗೆ ಸೇಡು ತೀರಿಸಿಕೊಳ್ಳುವುದೆಂದರೆ ತನ್ನ ಮುಖ ಕುರೂಪವಾಗಿದೆಯೆಂದು ಕನ್ನಡಿಯನ್ನು ಒಡೆದಂತೆ.

ಈಗ ಭಾರತ ಸ್ವತಂತ್ರ್ಯಗೊಂಡಿದೆ. ತನ್ನನ್ನು ಗಣರಾಜ್ಯವೆಂದು ಘೋಷಿಸಿಕೊಂಡಿದೆ. ಗಣರಾಜ್ಯದ ಆಧಾರಶಿಲೆಯನ್ನಾಗಿ ಧರ್ಮನಿರಪೇಕ್ಷ ನೀತಿಯನ್ನು ಘೋಷಿಸಿಕೊಂಡಿದೆ. ಅರವತ್ತು ವರ್ಷಗಳಷ್ಟು ಸಮಯವನ್ನು ಗಣರಾಜ್ಯವನ್ನೂ, ಧರ್ಮನಿರಪೇಕ್ಷ ನೀತಿಯನ್ನೂ ಬಲಿಷ್ಠಗೊಳಿಸುವುದಕ್ಕಾಗಿ ರಚನಾತ್ಮಕವಾಗಿ, ಸಕಾರಾತ್ಮಕವಾಗಿ ಉಪಯೋಗಿಸಿಕೊಳ್ಳಲಾಗಿದೆ. ಈ ಪ್ರಕ್ರಿಯೆಯಲ್ಲಿ ಹಿಂದೂ, ಮುಸಲ್ಮಾನ್, ಸಿಖ್, ಜೈನ, ಕ್ರೈಸ್ತ, ಬೌದ್ಧ ಮುಂತಾದ ಎಲ್ಲ ಧರ್ಮಗಳೂ ಎಡಪಂಥೀಯ, ಬಲಪಂಥೀಯ, ಮಧ್ಯಪಂಥೀಯ ರಾಜಕೀಯ ಪಕ್ಷಗಳೂ, ನ್ಯಾಯಾಂಗವೂ, ಕಾರ್ಯಾಂಗವೂ, ಬುದ್ಧಿಜೀವಿಗಳೂ

ಭಾಗವಹಿಸಿ ತಮ್ಮ ತಮ್ಮ ಯೋಗದಾನ ಮಾಡಿದ್ದಾರೆ. ಇದರಿಂದಾಗಿ ಗಣರಾಜ್ಯವೂ, ಧರ್ಮನಿರಪೇಕ್ಷ ನೀತಿಯೂ ಭಾರತದ ಉಸಿರಾಟವೇ ಆಗಿದೆ. ಇನ್ನು ದೇಶವಾಸಿಗಳು ಮಾಡಬೇಕಾದುದು ಈ ಉಸಿರಾಟಕ್ಕೆ ಧಕ್ಕೆ ಒದಗದಂತೆ ಎಚ್ಚರ ವಹಿಸುವುದು. ಗಣರಾಜ್ಯ ವ್ಯವಸ್ಥೆಯನ್ನೂ, ಧರ್ಮನಿರಪೇಕ್ಷ ನೀತಿಯನ್ನೂ, ಪ್ರಜಾಸತ್ತಾತ್ಮಕ ಆಡಳಿತ ಪದ್ಧತಿಯನ್ನೂ ಭಾರತ ಎಲ್ಲಿಯವರೆಗೆ ಅನುಸರಿಸುತ್ತದೋ ಅಲ್ಲಿಯವರೆಗೂ ಭಾರತದಲ್ಲಿರುವ ಎಲ್ಲ ಧರ್ಮೀಯರೂ, ಎಲ್ಲ ಭಾಷಿಕರೂ ತಮ್ಮ ಸ್ವಧರ್ಮಗಳ ಮೂಲಕ ಆತ್ಮೋನ್ನತಿಯನ್ನು ಕಾಣಬಹುದು. ಭಾರತವು ಸರ್ವತಂತ್ರ ಸ್ವತಂತ್ರವಾಗಿರುವುದು. ಮಹಾತ್ಮಾ ಗಾಂಧೀಜಿಯವರ ಪ್ರಕಾರ ಭಾರತದ ಸ್ವಾತಂತ್ರ್ಯ ಸತ್ಯದ ಒಂದು ಅಂಶವೇ ಆಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದಿರುವುದು ಇತಿಹಾಸದಲ್ಲಿ ದಾಖಲೆಗೊಂಡಿದೆ. ಇತಿಹಾಸದಲ್ಲಿ ಕಾಣಿಸಲಾಗುವ ಸಂಗತಿಗಳು ಸತ್ಯದ ಭಾಗವೇ ಆಗಿರುತ್ತದೆ. ಪ್ರಸಿದ್ಧ ಇತಿಹಾಸ ತಜ್ಞ ಡಾ.ಆರ್.ಸಿ.ಮಜುಂದಾರ್ ಹೇಳುವಂತೆ "ಇತಿಹಾಸವು ಯಾವುದೇ ಹೆದರಿಕೆ, ಮಾತ್ಸರ್ಯ, ವಿದ್ವೇಷ, ಉದ್ವೇಗ ಅಥವಾ ಪೂರ್ವಾಗ್ರಹಗಳಿಲ್ಲದೆ ಯಾವುದೇ ಅನ್ಯವಾದ ರಾಜಕೀಯ ಅಥವಾ ಮಾನವೀಯ ಅಂಶಗಳ ಪರಿಗಣನೆಗಳಿಲ್ಲದೆ ಸತ್ಯವನ್ನು ವ್ಯಕ್ತಪಡಿಸುವುದು". ಇತಿಹಾಸದ ಈ ವ್ಯಾಖ್ಯೆಯ ಪ್ರಕಾರ ಭಾರತದ ಸ್ವಾತಂತ್ರ್ಯ ಸತ್ಯವೇ ಆಗಿದೆ. ಆದ್ದರಿಂದ ಭಾರತದ ಸತ್ಯವಾದ ಈ ಸ್ವಾತಂತ್ರ್ಯವನ್ನು ಉಳಿಸುವುದು ಭಾರತದ ಎಲ್ಲ ಧರ್ಮೀಯರ ಮುಖ್ಯವಾಗಿ ಹಿಂದೂ-ಮುಸಲ್ಮಾನರ ಧಾರ್ಮಿಕ ಕರ್ತವ್ಯವಾಗಿದೆ. ಭಾರತದ ಅವಿಭಾಜ್ಯ ಅಂಗವಾಗಿರುವಂತೆ ಕಾಶ್ಮೀರದ ಮುಸ್ಲಿಮರ ಮೇಲೆ ಭಾರತೀಯ ಮುಸ್ಲಿಮರು ತಮ್ಮ ನೈತಿಕ ಶಕ್ತಿಯನ್ನು ಬೀರಬೇಕು. ಕಾಶ್ಮೀರದ ವಿಭಜನೆಯೆಂದರೆ ಭಾರತದ ಇನ್ನೊಂದು ವಿಭಜನೆಯೇ ಸರಿ. ಆಗ ಭಾರತದಲ್ಲಿರುವ ಹಿಂದೂ-ಮುಸ್ಲಿಮರಾದಿಯಾಗಿ ಭಾರತೀಯರೆಲ್ಲರೂ ತಮ್ಮ ಸ್ವಾತಂತ್ರ್ಯ ಕಳೆದುಕೊಂಡು ಇನ್ನೊಂದು ದೇಶದ ಪರಾಧೀನತೆಗೆ ಒಳಪಡಬೇಕಾಗುವುದೆಂಬ ಎಚ್ಚರ ಎಲ್ಲರಲ್ಲಿರಬೇಕಾದುದು ಅಗತ್ಯ.

ಬಾಬರಿ-ಅಯೋಧ್ಯೆ ವಿವಾದವಿರುವುದು ಮುಖ್ಯವಾಗಿ ಸ್ಥಳಕ್ಕೆ ಸಂಬಂಧಿಸಿದುದು. ಅದೂ ಕೂಡ ಕೇವಲ ಎರಡು ಎಕರೆಗೆ ಸೀಮಿತವಾಗಿದೆ. ವಿಶಾಲ ಭೌಗೋಳಿಕ ಪ್ರದೇಶವೇ ಎಲ್ಲ ಭಾರತೀಯರದ್ದಾಗಿರುವಾಗ, ಬಹಳಷ್ಟು ಕಡೆ ಮಂದಿರಗಳೂ, ಮಸೀದಿಗಳೂ, ಚರ್ಚುಗಳೂ ಇರುವಾಗ ಪುನಃ ಇನ್ನೊಂದು ಮಸೀದಿಯನ್ನೋ, ದೇವಸ್ಥಾನವನ್ನೋ ಕಟ್ಟುವುದಕ್ಕಾಗಿ ಧರ್ಮಗಳ ಹೆಸರಿನಲ್ಲಿ ರಕ್ತಪಾತ ಮಾಡುವುದು ಅರ್ಥಹೀನ, ತರ್ಕಹೀನ, ವಿಚಾರ ಹೀನ ಮಾರ್ಗ. ಭೂಮಿಗಾಗಿ ಇದೇ ಭಾರತದಲ್ಲಿ ಕುರುಕ್ಷೇತ್ರದಲ್ಲಿ ನಡೆದ ಯುದ್ಧದ ಕತೆ ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಭೂಮಿಯ ಒಡೆತನಕ್ಕಾಗಿ ಹೋರಾಟ ಬೇಕಾಗಿಲ್ಲ. ಕೇಂದ್ರ ಸರ್ಕಾರ ತನ್ನ ವಿಶೇಷ ಅಧಿಕಾರದ ಮೂಲಕ ವಿವಾದಿತ

ಭೂಮಿಯನ್ನು ತನ್ನ ವಶಕ್ಕೆ ತೆಗೆದುಕೊಂಡು ಸಮಸ್ತ ಭಾರತೀಯರಿಗೆ ಧರ್ಮ ನಿರಪೇಕ್ಷವಾಗಿ ಪ್ರಯೋಜನ ದೊರೆಯುವಂಥ ಯಾವುದಾದರೊಂದು ಯೋಜನೆಯನ್ನು ಸಂಸತ್ತಿನ ಏಕಮತ ನಿರ್ಣಯದೊಂದಿಗೆ ಅಲ್ಲಿ ಜಾರಿಗೆ ತರಬೇಕು.

ಭಾರತದೊಂದಿಗೆ ಸ್ವಾತಂತ್ರ್ಯ ಪಡೆದ ಪಾಕಿಸ್ತಾನ ತನ್ನ ದೇಶವನ್ನು ಇಸ್ಲಾಂ ದೇಶವೆಂದೇ ಘೋಷಿಸಿಕೊಂಡಿತು. ಆ ದೇಶದಲ್ಲಿ ಭಾರತದಲ್ಲಿರುವಷ್ಟು ವೈವಿಧ್ಯತೆ ಇಲ್ಲದಿದ್ದರೂ ಪ್ರಜಾಪ್ರಭುತ್ವವಿಲ್ಲ. ಶಾಂತಿ ಇಲ್ಲ. ದಿನಾಲೂ ರಕ್ತಪಾತವಿದೆ. ಆ ದೇಶದಲ್ಲಿಯ ಜನಸಂಖ್ಯೆಗಿಂತ ಹೆಚ್ಚು ಮುಸ್ಲಿಮರು ಭಾರತದಲ್ಲಿದ್ದಾರೆ. ಅವರು ಎಲ್ಲ ಪ್ರಕಾರದ ಧಾರ್ಮಿಕ, ರಾಜಕೀಯ ಮತ್ತು ಶೈಕ್ಷಣಿಕ ಸವಲತ್ತನ್ನು ಪಡೆದಿದ್ದಾರೆ. ಯಾವುದೇ ಕಾರಣದಿಂದಲೂ ಅವರಲ್ಲಿ ಕೀಳರಿಮೆ ಉಂಟಾಗದಂತೆ ಸರ್ಕಾರವು ಹಾಗೂ ಜನರೂ ಎಚ್ಚರವಹಿಸಿದ್ದಾರೆ. ರಾಷ್ಟ್ರ ನಿರ್ಮಾಣದ ಕಾರ್ಯದಲ್ಲೂ, ದೇಶರಕ್ಷಣೆಯ ಕಾರ್ಯದಲ್ಲೂ ಮುಸಲ್ಮಾನರು ಹಿಂದೂಗಳೊಂದಿಗೆ ಸರಿಸಮನಾಗಿ ನಿಂತು ಕೆಲಸಮಾಡುತ್ತಿದ್ದಾರೆ. ಅನೇಕ ಮುಸ್ಲಿಂ ಮಹಿಳೆಯರು ಬುರ್ಖಾ ಧರಿಸದೆ ಯಾವುದೇ ಆತಂಕವಿಲ್ಲದೆ, ಯಾವುದೇ ಸಮಯದಲ್ಲೂ ಬಹಿರಂಗವಾಗಿ ಓಡಾಡುತ್ತಾರೆ. ಭಾರತೀಯ ಮುಸಲ್ಮಾನರು ಪಾಕಿಸ್ತಾನದಲ್ಲಿರುವ ಮುಸ್ಲಿಮರಿಗೂ, ಮುಖ್ಯವಾಗಿ ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಮುಸ್ಲಿಮರಿಗೂ ತಾವು ಭಾರತದಲ್ಲಿ ಅನುಭವಿಸುತ್ತಿರುವ ಗಣರಾಜ್ಯ ವ್ಯವಸ್ಥೆಯ, ಧರ್ಮನಿರಪೇಕ್ಷತೆಯ, ಪ್ರಜಾಪ್ರಭುತ್ವದ ಬಗ್ಗೆಯೂ ಮನವರಿಕೆ ಮಾಡಿಕೊಡಬೇಕು. ಕಾಶ್ಮೀರ ಭಾರತದ ಎಲ್ಲ ರಾಜ್ಯಗಳಂತೆ ಅದೂ ಕೂಡ ಭಾರತ ಗಣರಾಜ್ಯದ ಭಾಗವಾಗಿರಬೇಕೆಂದು ಭಾರತೀಯ ಮುಸಲ್ಮಾನರು ಪಾಕ್ ಆಕ್ರಮಿತ ಕಾಶ್ಮೀರದ ಮುಸಲ್ಮಾನರಿಗೆ ಮಾಧ್ಯಮಗಳ ಮೂಲಕ ಮನವರಿಕೆ ಮಾಡಿಕೊಡುವ ಬಿರುಸಾದ ಚಳುವಳಿಯನ್ನು ನಡೆಸಬೇಕು. ವಿವೇಚನೆಯ ಸ್ವಚ್ಛ ತೊರೆ.

ಎಲ್ಲಿ ಜಡ ಸಂಪ್ರದಾಯ ಮರಳು ಬೀಳಿನಲಿ ಇಂಗಿಲ್ಲವೋ
ಎಲ್ಲಿ ಮನವನು ನೀನು ಹಬ್ಬಿ ಹರಡುವ
ಚಿಂತನಾ ಕಾರ್ಯಗಳಲಿ ಕರೆದೊಯ್ಯುತಿಹೆಯೋ
ಅಲ್ಲಿ, ಆ ಸ್ವಾತಂತ್ರ್ಯ ನಂದನದಿ ಈ ನನ್ನ ರಾಷ್ಟ್ರವನು ಎಚ್ಚರಿಸು
ಹೇ, ತಂದೆ

ಎಂಬುದಾಗಿ ಹಿಂದೂ-ಮುಸಲ್ಮಾನ-ಕ್ರೈಸ್ತರೆಲ್ಲರೂ ಕೂಡಿ ಹಾಡೋಣ.

* * *

ಸ್ವಾತ್ಮಶಿಕ್ಷಣವೇ ಸ್ವರಾಜ್ಯ

– ಎಸ್.ಸೂರ್ಯಪ್ರಕಾಶ ಪಂಡಿತ್

ಆಧುನಿಕ ಭಾರತದಲ್ಲಿ ಜನಮಾನಸದ ಮೇಲೆ ತುಂಬ ಪ್ರಭಾವವನ್ನು ಮೂಡಿಸಿರುವವರಲ್ಲಿ ಗಾಂಧೀಜಿ ಪ್ರಮುಖರು. ಜಗತ್ತಿನ ಶ್ರೇಷ್ಠ ಚಿಂತಕರ ಪಂಕ್ತಿಯಲ್ಲಿ ಅವರಿಗೊಂದು ಸ್ಥಾನವನ್ನು ಒದಗಿಸಿರುವ ಅವರ ವಾಙ್ಮಯವು ವಿಶಾಲವೃಕ್ಷದಂತೆ ವಿಸ್ತಾರವಾಗಿ ಹರಡಿಕೊಂಡಿದೆ. ಈ ಸಮಗ್ರ ಚಿಂತನೆಯ ಮೂಲವನ್ನಾಗಿ ನಾವು ಅವರ 'ಹಿಂದ್ ಸ್ವರಾಜ್'ನಲ್ಲಿ ಬೀಜರೂಪದಲ್ಲಿ ಕಾಣಬಹುದಾಗಿದೆ. ಗಾಂಧೀಜಿಯವರ ಭೂಮ ವ್ಯಕ್ತಿತ್ವದ ಸಿಂಧುತ್ವವನ್ನು ಎತ್ತಿ ಹಿಡಿಯುವ ಬಿಂದು ರೂಪದ ಈ ಕೃತಿಗೆ ಈಗ ನೂರು ವರ್ಷಗಳು ಸಂದಿವೆ. ಈ ಹಿನ್ನೆಲೆಯಲ್ಲಿ ಗಾಂಧೀತತ್ವಗಳ ಪುನರಾವಲೋಕನಕ್ಕೆ ಭೂಮಿಕೆಯೊಂದು ಒದಗಿದೆ.

ಗಾಂಧೀಜಿ ಇಂದು ನನಗೆ ಹೆಚ್ಚು ಪ್ರಸ್ತುತವಾಗಿ ಕಾಣುವುದು 'ಐತಿಹಾಸಿಕ ಗಾಂಧೀ' ಅಲ್ಲ; 'ಹಿಸ್ಟಾರಿಕಲ್-ಗಾಂಧೀ'ಗಿಂತಲೂ ನಮಗೆ ಹೆಚ್ಚು ಒದಗುವವರು 'ಮಿಥಿಕಲ್-ಗಾಂಧೀ'. ಗಾಂಧೀ ಇಂದು ಒಂದು 'ಮಿಥ್'ಆಗಿ ರೂಪಾಂತರಗೊಂಡಿರುವುದು ಸುಳ್ಳಲ್ಲ. (ಇಲ್ಲಿ 'ಮಿಥ್' ಎಂದರೆ ಊಹೆ, ಭ್ರಮೆ, ಇಲ್ಲದುದನ್ನು ಇದೆಯೆಂದು ಒಪ್ಪಿಕೊಳ್ಳುವಥದ್ದು- ಎಂಬಂಥ ಸಾಮಾನ್ಯಾರ್ಥಗಳಲ್ಲಿ ಅಲ್ಲ; ಪ್ರಜ್ಞಾಸ್ತರದ ಸಂಕೇತ ಎಂಬ ಅರ್ಥದಲ್ಲಿ, ಆನಂದ ಕುಮಾರಸ್ವಾಮಿ ಮುಂತಾದವರು ಬಳಸಿದ ನೆಲೆಯಲ್ಲಿ ಉಪಯೋಗಿಸಿದ್ದೇನೆ.) ಒಂದು ಮಿಥ್ ಕಟ್ಟಿಕೊಡುವ ಜೀವನಾದರ್ಶ, ಜೀವನ ಶ್ರದ್ಧೆ, ಜೀವನ ಪ್ರೀತಿ, ಜೀವೋತ್ಕರ್ಷಗಳನ್ನು ಗಾಂಧೀಯವರನ್ನು ವಿರೋಧಿಸುತ್ತಿರುವವರಾಗಲೀ, ಗಾಂಧೀಜಪವನ್ನಷ್ಟೇ ಮಾಡುತ್ತಿರುವವರಾಗಲೀ ಸರಿಯಾಗಿ ಕಂಡುಕೊಂ ಡಿಲ್ಲವೆನಿಸುತ್ತದೆ. ಸಾಮಾಜಿಕ ಜೀವನದಲ್ಲಿ ಚಿಗುರೊಡೆಯಬೇಕಾಗಿರುವ ಸರಳತೆ, ಪ್ರಮಾಣಿಕತೆ, ಮಾನವತೆಗಳಿಗೆ ಸಂಕೇತವಾಗಿ ಇಂದಿನ ಅಧಃಪತಿತ ಸಮಾಜವು ಗಾಂಧೀತತ್ವವನ್ನು ಬೀಜಾಕ್ಷರವನ್ನಾಗಿ -ದಿಟವಾಗಿ -ಸ್ವೀಕರಿಸುವ ಮೂಲಕ ತನ್ನ ಹಲವು ರೋಗಗಳನ್ನು ಗುಣಪಡಿಸಿಕೊಳ್ಳಲು ಸಾಧ್ಯವಿದೆ. ಆದರೆ ಗಾಂಧೀ ಮಂತ್ರವೂ ಕೂಡ ನಮ್ಮ ಅನ್ಯೆತಿಕತೆಯ ಒಂದು ಭಾಗವಾಗಿಯೇ ಚಲಾವಣೆಯಾಗುತ್ತಿರುವುದು ಇಂದಿನ ಸಮಾಜದ ವಾಸ್ತವ.

ಗಾಂಧೀಜಿಯವರ 'ಹಿಂದ್ ಸ್ವರಾಜ್' ಕೃತಿಯನ್ನು ಓದಿದ ಮೇಲೆ ಮೊದಲಿಗೆ ಮನಸ್ಸಿನಲ್ಲಿ ಮೂಡಿದ ಭಾವನೆಯೆಂದರೆ ನಾಚಿಕೆ; ಇಷ್ಟು ಮಹತ್ವಪೂರ್ಣ ಕೃತಿಯನ್ನು ಇದುವರೆಗೂ ಪೂರ್ಣವಾಗಿ ಓದಲಾಗಿರಲಿಲ್ಲವೆಂಬ ಸಂಕೋಚವುಂಟಾಯಿತು. ಗಾಂಧೀಜಿಯವರು ಒಬ್ಬ ಶ್ರೇಷ್ಠ ಚಿಂತಕರಾಗಿಯೂ ನಮಗೆ ಹೇಗೆ ಒದಗುತ್ತಾರೆಂಬುದೂ ದೃಢವಾಯಿತು. 'ಹಿಂದ್ ಸ್ವರಾಜ್' ಪ್ರಕಟವಾಗಿ ನೂರು ವರ್ಷಗಳ ತರುವಾಯವೂ ನಮಗೆ ಇದು ಅಂದಿಗಿಂತಲೂ ಇಂದು

ಹೆಚ್ಚು ಬೇಕಾದದ್ದು ಎಂದು ಎನಿಸುತ್ತಿರುವುದರಲ್ಲಿಯೇ ಈ ಕೃತಿಯ ಮಹತ್ವವು ಸ್ಪಷ್ಟವಾಗುತ್ತದೆ. ಇಲ್ಲೊಂದು ಮಾತನ್ನು ಹೇಳಿದರೆ ಯಾರೂ ಕೂಡ ಅದನ್ನು ಧಾರ್ಷ್ಟ್ಯ ಎಂದು ಭಾವಿಸುವುದಿಲ್ಲವೆಂದುಕೊಂಡಿದ್ದೇನೆ. 'ಹಿಂದ್ ಸ್ವರಾಜ್'ನ ಎಷ್ಟೋ ಮಾತುಗಳು 'ಅರೇ! ಇದು ನನ್ನದೇ ಮಾತು' ಎಂಬಂಥ ತಾದಾತ್ಮ್ಯವನ್ನು ನನ್ನಲ್ಲಿ ಒದಗಿಸಿದ್ದು ಸುಳ್ಳಲ್ಲ.

'ಗಾಂಧೀಯವರು ನಮಗೆ ಅನಿವಾರ್ಯ'-ಎಂದು ಹೇಳಿದ ಕೂಡಲೇ ನಮ್ಮಲ್ಲಿಯ ಒಂದು ಗುಂಪಿನ ಕಣ್ಣು ಕೆಂಪಾಗಬಹುದು, ಈ ಮಾತಿನ ಬಗ್ಗೆ ಅಸಹನೆಯುಂಟಾಗಬಹುದು, ಅಥವಾ 'ಈ ಮಾತನ್ನು ಹೇಳುತ್ತಿರುವವರಿಗೆ ಇತಿಹಾಸಪ್ರಜ್ಞೆಯೇ ಇಲ್ಲ' ಎಂದು ತಿರಸ್ಕಾರವೂ ಉಂಟಾಗಬಹುದು. 'ಗಾಂಧೀಜಿಯವರ ಮುಸ್ಲಿಂ ಓಲೈಕೆಯ ದೆಸೆಯಿಂದಾಗಿ ಭಾರತ ದೇಶದ ವಿಭಜನೆ ನಡೆಯಿತು' ಎನ್ನುವುದು ಗಾಂಧೀಜಿಯವರ ಮೇಲೆ ಇಂದು ಹೊರಿಸುವ ಅಪರಾಧಗಳಲ್ಲಿ ಒಂದು. ಗಾಂಧೀಯವರು ಮುಸ್ಲಿಮರ ಬಗ್ಗೆ ಮಾತನಾಡುವಾಗ ಯಾವುದೋ ಒಂದು ಅವ್ಯಕ್ತಭಾವದಿಂದ ಅವರನ್ನು ಓಲೈಸಲು ಮುಂದಾಗುತ್ತಾರೆಂಬುದು ದಿಟವೇ; ಅಂಥ ಸಂದರ್ಭಗಳಲ್ಲಿ ಅವರ ಎಷ್ಟೋ ನಿಲುವುಗಳು ಅಸಹಾಯವಾಗಿ ನಿಂತುಬಿಡುತ್ತವೆ ಎಂಬುದೂ ದಿಟವೇ. 'ಹಿಂದ್ ಸ್ವರಾಜ್'ನ 'ಹಿಂದೂ-ಮುಸಲ್ಮಾನ' ಎಂಬ ಅಧ್ಯಾಯದಲ್ಲೂ ನಾವು ಈ ಮನೋಧರ್ಮವನ್ನು ಧಾರಾಳವಾಗಿಯೇ ನೋಡಬಹುದೆನ್ನಿ.

ಇಲ್ಲಿ, ಸದ್ಯಕ್ಕೆ (ಕೇವಲ ತರ್ಕಕ್ಕಾಗಿ) 'ಭಾರತದ ವಿಭಜನೆಗೆ ಗಾಂಧೀಜಿಯವರೇ ಕಾರಣ' ಎಂಬುದನ್ನು ಒಪ್ಪೋಣ. ಹಾಗಾದರೆ, ಪಾಕಿಸ್ತಾನವು ಹುಟ್ಟಿಕೊಳ್ಳದಿದ್ದರೆ ಇಂದು ಭಾರತವನ್ನು ನಲುಗಿಸುತ್ತಿರುವ ಸಮಸ್ಯೆಗಳು ಯಾವುವೂ ಹುಟ್ಟಿಕೊಳ್ಳುತ್ತಿರಲಿಲ್ಲವೆ ಎಂಬ ಪ್ರಶ್ನೆ ಇಲ್ಲಿ ಏಳದಿದ್ದೀತೆ? ಪಾಕಿಸ್ತಾನವಲ್ಲದಿದ್ದರೆ ಇಂಥದೊಂದು ಬಾಹ್ಯಮೂಲದ ಸಮಸ್ಯೆಯು ಚೀನಾದಿಂದಲೋ ಇರಾನಿನಿಂದಲೋ ಮತ್ತಾವುದೋ ದೇಶದಿಂದ ಎದುರಾಗುವ ಅಪಾಯ ಇದ್ದೇ ಇದೆಯಲ್ಲವೆ? (ನಾನಿಲ್ಲಿ ದೇಶ ವಿಭಜನೆಯನ್ನು ಸಮರ್ಥಿಸುತ್ತಿದ್ದೇನೆಂದು ಭಾವಿಸಬಾರದು; ಸಮಸ್ಯೆಯೊಂದರ ಎಲ್ಲ ಮುಖಗಳನ್ನೂ ವಿಶ್ಲೇಷಿಸಬೇಕೆಂಬುದಷ್ಟೇ ಇಲ್ಲಿಯ ಕಾಳಜಿ.) ಭಾರತವನ್ನು ನಿತ್ಯವೂ ಕಿತ್ತುತಿನ್ನುತ್ತಿರುವ ಒಳಗಣ ಶತ್ರುಗಳ ನಿತ್ಯೋತ್ಸವಕ್ಕೆ ಕಾರಣರಾಗಿರುವವರು ಯಾರು? ರಾಷ್ಟ್ರದ ಪ್ರತಿ ಕ್ಷೇತ್ರದಲ್ಲೂ ದಟ್ಟವಾಗಿರುವ ಭ್ರಷ್ಟಾಚಾರ, ಅನೈತಿಕತೆ, ಪಾಶ್ಚಾತ್ಯೀಕರಣ ಮುಂತಾದ ನರಕಗಳ ಸೃಷ್ಟಿಗೆ ಮೂಲಕಾರಣ ಯಾರು? ದೇಶವಿಭಜನೆಯ ಜೊತೆಗೇ ನಮ್ಮ ಮನಸ್ಸುಗಳಲ್ಲೂ ಮೂಡಿರುವ ಒಡಕುಗಳ ಬೆಸುಗೆಗಾಗಿ ನಾವು ಇಂದು ಒಂದು ಪ್ರಾಮಾಣಿಕ ಅಭಿಯಾನವನ್ನು ಸಂಘಟಿಸಬೇಕಿದೆ. ಇಲ್ಲಿ ನಮ್ಮ ನೆರವಿಗೆ ಬರುವವರು ಗಾಂಧೀಜಿ. ಬ್ರಿಟಿಷರು ಭಾರತದಲ್ಲಿದ್ದಾಗಲೂ ಗಾಂಧೀಜಿಯವರು ನಮ್ಮ ನಿಜವಾದ ಶತ್ರುಗಳನ್ನಾಗಿ ಕಂಡದ್ದು ಒಳಗಣ ನಮ್ಮ ಪ್ರವೃತ್ತಿಗಳನ್ನೇ ಹೌದು ಎಂಬುದು ಇಲ್ಲಿ ಮುಖ್ಯವಾಗುತ್ತದೆ. " ಇಂಗ್ಲಿಷರು ಇಲ್ಲಿ ತಾವಾಗಿ ಇಲ್ಲ, ಅವರನ್ನು ನಾವು ಇರಗೊಟ್ಟಿದ್ದೇವೆ" ಎನ್ನುವ ಗಾಂಧಿಯವರನ್ನು ನಾವಿಂದು ಸ್ವೀಕರಿಸಬೇಕು. ರಾಷ್ಟ್ರವೊಂದಕ್ಕೆ ಬಾಹ್ಯಾಪಾಯ ನಿರಂತರವಾದದ್ದೇ; ಆದರೆ ಆಂತರಿಕ ಅಪಾಯವೇ

ಹೆಚ್ಚು ಗಂಭೀರವಾದದ್ದು. ಹೊರಗಣ ಶತ್ರುಗಳನ್ನು ಗುರುತಿಸುವುದು ಸುಲಭವೇ; ಆದರೆ ಒಳಗಣ ವೈರಿಗಳನ್ನು ಕಂಡುಹಿಡಿಯುವುದು ಸುಲಭವೇನಲ್ಲ. ಎರಡೂ ಅಪಾಯಗಳ ಬಗ್ಗೆ ಎಚ್ಚರಿಕೆಯಿಂದ ವ್ಯವಹರಿಸಬೇಕೇ ಹೊರತು ಒಂದರ ಆವೇಶದಲ್ಲಿ ಮತ್ತೊಂದನ್ನು ಮರೆಯುವುದು ಕುಶಲತೆ ಎನಿಸದು. ಸಮರ್ಥ ರಾಜನೀತಿ ನಿಪುಣನಲ್ಲಿ ಇಂಥ ಎಚ್ಚರಿಕೆಯನ್ನು ಕಾಣುತ್ತೇವೆ. ಮಹಾಭಾರತದಲ್ಲಿ ಧರ್ಮರಾಯನ ಮಾತು– ' ಹೊರಗಣ ಆಕ್ರಮಣ ಎದುರಾದರೆ ಪಾಂಡವರು ಮತ್ತು ಕೌರವರು ಸೇರಿ ನೂರೈದು ಮಂದಿ, ಆದರೆ ನಮ್ಮೊಳಗೇ ಸಮಸ್ಯೆಯಿದ್ದಾಗ ನಾವು ಐವರು, ಅವರು ನೂರು ಮಂದಿ'– ಎನ್ನುವಲ್ಲಿ ಇಂಥದೊಂದು ಪ್ರಬುದ್ಧತೆಯನ್ನು ಗಮನಿಸಬಹುದು. ಆದರೆ ಇಂದಿನ ಜಾಣ ರಾಜಕಾರಣಿಗಳು ಜನರನ್ನು ಸುಲಭವಾಗಿ ಭಾವುಕರನ್ನಾಗಿಸಿ ಉದ್ರೇಕಗೊಳಿಸುವಂಥ ಹೊರಗಣ ಅಪಾಯಗಳ ಕಡೆಗೇ ಹೆಚ್ಚೆಚ್ಚು ಕೇಂದ್ರೀಕರಿಸುವ ಮೂಲಕ ದಿಟವಾದ ಒಳಗಣ ಸಮಸ್ಯೆಗಳ ಕಡೆಗೆ ನಿರ್ಲಕ್ಷ್ಯವನ್ನು ತೋರುತ್ತಿರುವುದು ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಗುಟ್ಟಾಗೇನೂ ಉಳಿದಿಲ್ಲ. ಒಳಗಣ ವೈರಿಗಳನ್ನು ಗುರುತಿಸುವಲ್ಲಿಯೂ, ನಿಗ್ರಹಿಸುವಲ್ಲಿಯೂ ಗಾಂಧೀಯವರು ನಮಗಿಂದು ನೆರವಾಗುತ್ತಾರೆ. (ಇಲ್ಲಿ ಒಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುವುದು; ತಥ್ಯಗಳಿಂದಲೇ ನೆಲೆ ಕಂಡುಕೊಳುವಂಥ ಇತಿಹಾಸದ 'ಸತ್ಯ'ಕ್ಕೆ ಸ್ಥಿರತ್ವವೇನೂ ಇರದು.) ಹೀಗೆಂದಾಗ, 'ನಾವು ಗಾಂಧೀಯವರನ್ನು ನಿತ್ಯವೂ ನೆನೆಯುತ್ತಿದ್ದೇವೆ' ಎಂಬ 'ಪೊಲಿಟಿಕಲಿ ಕರೆಕ್ಟ್' ಆದ ಉತ್ತರವೂ ಒಂದು ಗುಂಪಿನಿಂದ ಬಂದೀತು. ಹೀಗೆಯೇ ಕಾಂಗ್ರೆಸ್ಸಿನ ಕಚೇರಿಗಳಲ್ಲೂ ಗಾಂಧೀಜಿ ಭಾವಚಿತ್ರಗಳು ಇನ್ನೂ ರಾರಾಜಿಸುತ್ತಿವೆ! ಇನ್ನು ಕಮ್ಯೂನಿಷ್ಟರಿಗೆ ಇಂಥದೊಂದು ಘೋಷಣೆಯ ಕಷ್ಟವೇನೂ ಬರದು; ಏಕೆಂದರೆ ಗಾಂಧಿನಿಷ್ಠೆಯ ಆವಶ್ಯಕತೆಯನ್ನು ಎಂದೂ ಅವರು ಮೈಮೇಲೆ ಹೇರಿಕೊಂಡವರಲ್ಲ.

ಗಾಂಧೀಜಿಯವರು 'ಹಿಂದ್ ಸ್ವರಾಜ್'ನ ಉದ್ದಕ್ಕೂ ಹೊರಗಣ–ಒಳಗಣ ಎರಡೂ ಶತ್ರುವರ್ಗದ ಬಗ್ಗೆ ಮಾತನಾಡುತ್ತಾರೆ; ಆದರೆ ಅವರು ಹೆಚ್ಚು ಮಾತನಾಡುವುದು ಒಳಗಣ ಶತ್ರುಗಳ ಬಗ್ಗೆಯೇ ಎಬುದು ಗಮನೀಯ, ಮನನೀಯ.

ಆರಂಭದಲ್ಲಿ ಸರಳವಾಗಿ ಆರಂಭವಾಗುವ 'ಹಿಂದ್ ಸ್ವರಾಜ್' ಅನಂತರದಲ್ಲಿ ರೋಚಕತೆಯನ್ನೇನೂ ಹುಟ್ಟಿಸುವುದಿಲ್ಲ; ಅದಕ್ಕೂ ಮೀರಿದ ವಿವೇಕ ಸೋಪಾನವನ್ನು ಕಟ್ಟಿಕೊಡುತ್ತ ಅಂತರಂಗ ವಿಶ್ಲೇಷಣೆಯತ್ತ ನಮ್ಮನ್ನು ಪ್ರೇರಿಸುವ ಮಹತ್ತರವಾದ ಕೆಲಸವನ್ನು ನಿರ್ವಹಿಸುತ್ತದೆ. ರೋಚಕತೆ–ಉದ್ರೇಕಗಳನ್ನೇ ಅಪ್ಪಿಕೊಳ್ಳುವ ಆಧುನಿಕ ಮಾನಸಿಕತೆಗೆ ಈ ಕೃತಿಯು ಪ್ರಯೋಜನಕ್ಕೆ ಬಾರದ ವ್ಯವಹಾರ್ಯವಲ್ಲದ 'ಪುರಾಣ' ಎಂದೆನಿಸುವುದರಲ್ಲಿ ಅಚ್ಚರಿಯೇನಿಲ್ಲ.

ಹೀಗೆಂದು ಗಾಂಧೀಜಿಯವರು ಎಲ್ಲ ಕಾಲಕ್ಕೂ ಎಲ್ಲರಿಗೂ ಒಪ್ಪಿಗೆಯಾಗಲೇಬೇಕು ಅಥವಾ ಒಪ್ಪಿಗೆಯಾಗುತ್ತಾರೆಂದೇನೂ ಇಲ್ಲ. ಇಂಥ ಪರಿಪೂರ್ಣತೆಯನ್ನು ಯಾರೊಬ್ಬರ ರಾಜಕೀಯ–ಸಾಮಾಜಿಕ ಸಿದ್ಧಾಂತಕ್ಕೂ ಅನ್ವಯಿಸುವುದು ಸಾಹಸದ ಮಾತೇ ಹೌದು. ಆದರೆ ನಮ್ಮ ಕಾಲದಲ್ಲಿ ಜನಮಾನಸದ ಮೇಲೆ ತುಂಬ ಪ್ರಭಾವ ಬೀರಿದ ವ್ಯಕ್ತಿಯ ಚಿಂತನೆಗಳನ್ನು ಕೂಲಂಕಶವಾಗಿ

ನೋಡುವಂಥ ತಾಳ್ಮೆಯನ್ನು ಧಾವಂತದ ಆಧುನಿಕ ಮನಸ್ಸು ಮೊದಲಿಗೆ ದಕ್ಕಿಸಿಕೊಳ್ಳಬೇಕಿದೆ.

'ಹಿಂದ್ ಸ್ವರಾಜ್'ನ ಎಷ್ಟೋ ಅಭಿಪ್ರಾಯಗಳನ್ನು ಉಂಡುಂಡೆಯಾಗಿ ಸ್ವೀಕರಿಸಲು ಯಾರಿಗೂ ಕೂಡ ಕಷ್ಟವಾಗುತ್ತದೆ; ಮಾತ್ರವಲ್ಲ, ಎಷ್ಟೋ ಕಡೆ ಗಾಂಧೀಜಿಯವರ ಗ್ರಹಿಕೆಯೇನೆಂದೂ ಸ್ಪಷ್ಟವಾಗುವುದಿಲ್ಲ. ಉದಾಹರಣೆಗೆ, ಅವರು ಆರಂಭದಲ್ಲಿಯೇ ಹೇಳುವ ಮಾತು-"ನಾವು ನ್ಯಾಯವಾಗಿ ನಡೆದರೆ ಹಿಂದೂಸ್ಥಾನದ ಗುಲಾಮಗಿರಿ ಬೇಗ ಕಳೆದೀತು" ('if we justly, Indiya will be sooner free') ಈ ಮಾತಿನ ಧ್ವನಿ ಏನು? ಇಂಗ್ಲಿಷ್ ನಾಗರಿಕತೆಯನ್ನು ವಿರೋಧಿಸುವುದಷ್ಟೇ ನಮ್ಮ 'ನ್ಯಾಯ'ವಾಗಬೇಕೆ? ಈ ನ್ಯಾಯದಿಂದಾಗಿ ಇಂಗ್ಲಿಷರು ಮನಃಪರಿವರ್ತಿತರಾಗಿ ದೇಶವನ್ನು ಬಿಟ್ಟುಕೊಡುತ್ತಾರೆಂದೆ?

ಗೋಹತ್ಯೆಯನ್ನು ಕುರಿತು ಗಾಂಧೀಜಿಯವರು ಮಾತನಾಡುವಾಗಲೂ ನಮ್ಮಲ್ಲಿ ಪ್ರಶ್ನೆಗಳು ಎಚ್ಚರವಾಗುತ್ತವೆ. 'ಪ್ರಾಚೀನ ಭಾರತದಲ್ಲಿ ಗೋಮಾಂಸವನ್ನು ತಿನ್ನುತ್ತಿದ್ದರೆ? ಇಲ್ಲವೆ? ಈಗ ಅದನ್ನು ನಿಷೇಧಿಸಬೇಕೆ? ಬೇಡವೆ?' ಎಂಬ ಚರ್ಚೆಯಲ್ಲಿ ನಾವಿಲ್ಲಿ ತೊಡಗುವುದು ಬೇಡ. ಆದರೆ ನಮಗಿಲ್ಲಿ ಮುಖ್ಯವಾಗುವುದು ಗಾಂಧೀಜಿಯವರು ಗೋಹತ್ಯೆಯ ವಿಷಯವಾಗಿ ದ್ವಂದ್ವ ಬುದ್ಧಿಯನ್ನು ಪ್ರದರ್ಶಿಸುವುದು ಏಕೆ? ಎಂದು. ಹಸುವನ್ನು ರಕ್ಷಿಸಲು ಮಾತುಕತೆಯ ಮೂಲಕ ಸಾಧ್ಯವಾಗದಿದ್ದಾಗ ಅನಿವಾರ್ಯವಾಗಿ ಅದನ್ನು ಮುಸ್ಲಿಮರಿಗೆ ಒಪ್ಪಿಸಬೇಕು ಎಂಬ ಅವರ ನಿಲುವು ಅವರ ಬಗ್ಗೆ ಸಂಶಯವನ್ನು ಹುಟ್ಟಿಸದಿರದು. ಗಾಂಧೀಜಿಯವರನ್ನು ಬಲಪಂಥೀಯರು ಗುಮಾನಿಯಿಂದ ನೋಡುವುದೇ ಇಂಥ ಘಟ್ಟಗಳಲ್ಲಿ ಎಂದೆನಿಸುತ್ತದೆ. ಇದೇ ಗಾಂಧೀಜಿಯವರು ಇಂಗ್ಲಿಷರಿಗೆ ಬುದ್ಧಿಯನ್ನು ಹೇಳುವಾಗ ಮಾತ್ರ 'ಅವರು (ಇಂಗ್ಲಿಷರು) ಹಿಂದೂಗಳಿಗಾಗಿ ಗೋಮಾಂಸವನ್ನೂ, ಮುಸಲ್ಮಾನರಿಗಾಗಿ ಹಂದಿ ಮಾಂಸವನ್ನೂ ವರ್ಜಿಸಬೇಕು' ಎಂದು ತಾಕೀತು ಮಾಡುತ್ತಾರೆ! ಅಂತರಂಗ ಸಂಸ್ಕಾರದ ಬಗ್ಗೆಯೇ ಹೆಚ್ಚು ಮಾತನಾಡುವ ಗಾಂಧೀಜಿ 'ಕಟುಕರಿಗೆ ಹಿಂದೂಗಳು ಹಸುವನ್ನು ಏಕೆ ಮಾರಬೇಕು?' ಎಂಬಂಥ ನೈತಿಕ ಪ್ರಶ್ನೆಯನ್ನು ಒಡ್ಡುವುದಿಲ್ಲವೆಂಬುದೂ ಇಲ್ಲಿ ಅಚ್ಚರಿಯನ್ನುಂಟುಮಾಡದಿರದು.

ಕ್ರಾಂತಿಕಾರಿಗಳೊಂದಿಗೆ ಗಾಂಧಿಯವರಿಗೆ ಸಹಮತವಿರಲಿಲ್ಲ. ಮದನ್‌ಲಾಲ್ ಧಿಂಗ್ರಾ ಬಗ್ಗೆ ಹೇಳುತ್ತ "ಧಿಂಗ್ರಾ ದೇಶಭಕ್ತನೇ, ಆದರೆ ಅದು ಕಣ್ಣಿಲ್ಲದ ಕುರುಡು ದೇಶಪ್ರೇಮ" ಎನ್ನುತ್ತಾರೆ. ಇಲ್ಲೂ ಕೆಲವರಿಗೆ ಗಾಂಧೀಯವರನ್ನು ಟೀಕಿಸಲು ಅವಕಾಶವಿದೆ. ಸುಭಾಷಚಂದ್ರ ಬೋಸರ ಬಗ್ಗೆಯೂ ಗಾಂಧೀಜಿಯವರ ನಿಲುವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಧಿಂಗ್ರಾ ಅಂಥವರನ್ನು ಉದ್ರಿಕ್ತಗೊಳಿಸಿದ 'ತುಚ್ಛ ಸಾಹಿತ್ಯ'ವನ್ನು ರಚಿಸಿದವರನ್ನು ದಂಡಿಸಬೇಕೆಂದು ಗಾಂಧೀಜಿ ಆಗ್ರಹಿಸುತ್ತಾರೆ. ರಾಮಾಯಣ ಮತ್ತು ಭಗವದ್ಗೀತೆಗಳು ಉಪದೇಶಿಸುವುದು ಹಿಂಸೆಯನ್ನೋ ಅಥವಾ ಅಹಿಂಸೆಯನ್ನೋ? ಎಂಬ ವಿಷಯವಾಗಿ ಸಾವರ್ಕರ್ ಮತ್ತು ಗಾಂಧೀಜಿಯವರ ನಡುವೆ ವಾದ-ಪ್ರತಿವಾದಗಳು ನಡೆದಿದ್ದವು. ಇಬ್ಬರ ಮಧ್ಯೆ ಸಹಮತ ಏರ್ಪಡಲಿಲ್ಲ. ಭಗವದ್ಗೀತೆಯನ್ನು ಮೆಚ್ಚುವ ಗಾಂಧೀಜಿಯವರು ಶ್ರೀಕೃಷ್ಣನನ್ನು ಸರಿಯಾಗಿ

ಅರ್ಥಮಾಡಿಕೊಳ್ಳದಿದ್ದುದೇ ಅವರ ಎಲ್ಲ ಅನರ್ಥಗಳಿಗೂ ಕಾರಣವಾಯಿತೆಂದು ಹೇಳಲು ಕೆಲವರಿಗೆ ಇಲ್ಲಿ ಅವಕಾಶ ಒದಗುತ್ತದೆ.

ಆದರೆ ಒಂದೇ ಭಗವದ್ಗೀತೆಯನ್ನು ಪರಂಪರೆಯಲ್ಲಿಯೇ ಹಲವರು ಹಲವು ರೀತಿಯಿಂದ ಕಂಡಿದ್ದಾರೆ. ಈ ವ್ಯಾಖ್ಯಾನಗಳೂ ಸಹ ಆಯಾ ದೇಶ-ಕಾಲದ ಒತ್ತಡಗಳ ಪರಿಣಾಮಕ್ಕೆ ಸ್ಪಂದಿಸದೆ ಮೂಡಿರಲಾರವು. ಶ್ರೀಕೃಷ್ಣ ಅಥವಾ ಚಾಣಕ್ಯರ ರಾಜನೀತಿಗಳು ಪರಿಪೂರ್ಣವಾಗಿದ್ದವು-ಎನ್ನುವುದಾದರೆ ಅವರು ಕಟ್ಟಿದ ಸಾಮ್ರಾಜ್ಯಗಳು ಏಕಾದರೂ ಶಾಶ್ವತವಾಗಿ ಉಳಿದು ಬರಲಿಲ್ಲ? ಎಂಬ ಪ್ರಶ್ನೆಯೂ ಇಲ್ಲಿ ಏಳದಿರದು. ಗ್ರಂಥಸ್ಥವಾಗಿರುವ ಒಂದು ಸಿದ್ಧಾಂತವನ್ನು ಪರಿಪೂರ್ಣವೆಂದು ಸ್ವೀಕರಿಸುವುದಕ್ಕೂ, ಆ ಸಿದ್ಧಾಂತವನ್ನು ಒಂದು ಸಮಾಜದಲ್ಲಿ ನೆಲೆಗೊಳಿಸುವಲ್ಲೂ ತುಂಬ ವ್ಯತ್ಯಾಸವಿರುತ್ತದೆ. ಇಲ್ಲಿಯೇ ವ್ಯಕ್ತಿಗಳು ಭಿನ್ನ ಭಿನ್ನ ಮಾರ್ಗಗಳನ್ನು ಹಿಡಿಯುವುದು.

ಇರಲಿ. ಗಾಂಧೀಜಿಯವರು ಕ್ರಾಂತಿಕಾರಿಗಳ ಚಟುವಟಿಕೆಗಳ ಬಗ್ಗೆ ಹೆದರಿಕೆಯನ್ನು ವ್ಯಕ್ತಪಡಿಸಲು ಅವರದೇ ಕಾರಣಗಳೂ ಇದ್ದವು. 'ಇಂದು ಇಂಗ್ಲಿಷರ ಮೇಲೆ ಬೀಳುತ್ತಿರುವ ಬಾಂಬುಗಳು ನಾಳೆ ಸ್ವಾತಂತ್ರ್ಯ ಬಂದ ಮೇಲೆ ಭಾರತೀಯರ ಮೇಲೂ ಬೀಳಬಹುದು' ಎಂಬ 'ಹೆದರಿಕೆ'ಯನ್ನು ಅವರು ಮತ್ತೊಂದೆಡೆ ವ್ಯಕ್ತಪಡಿಸಿದ್ದೂ ಉಂಟು. ಯಾವುದೇ ಹೋರಾಟದ ಮುಖವಾಡದಲ್ಲಿ ಆ ಅಭಿಯಾನದ ಅನಂತರದ ಪೀಳಿಗೆಯ ಸ್ವಾರ್ಥಿಗಳು ಅದನ್ನು ದುರುಪಯೋಗಿಸಿಕೊಳ್ಳುವ ಸಾಧ್ಯತೆಯಿರುವುದನ್ನು ಅವರು ಗಮನಿಸಿದ್ದರೆನಿಸುತ್ತದೆ. ಹೀಗಾಗಿಯೇ ಕಾಂಗ್ರೆಸ್ಸನ್ನೂ ವಿಸರ್ಜಿಸಬೇಕೆಂದು ಅವರು ಸಲಹೆ ನೀಡಿದ್ದರು ಎಂಬುದನ್ನು ಇಲ್ಲಿ ಮರೆಯುವಂತಿಲ್ಲ. ನಮ್ಮ ಕಾಲದ ವಿದ್ಯಮಾನಗಳನ್ನೇ ಇಲ್ಲಿ ನೋಡಬಹುದು. ಉದಾಹರಣೆಗೆ, 'ಅಧಿಕಾರಕ್ಕೆ ಬರುವವರು ಸ್ವಾರ್ಥಸಾಧನೆಗಾಗಿ ಆಡಳಿತ ಸ್ಥಾನಗಳ ವಿವಿಧ ಸ್ತರಗಳಲ್ಲಿ ತಮ್ಮವರನ್ನೇ ಪ್ರತಿಷ್ಠಾಪಿಸುತ್ತಾರೆ' ಎಂದು ನೀತಿಪಾಠವನ್ನು ಮಾಡುತ್ತಲೇ ಅಧಿಕಾರಕ್ಕೆ ಬರುವವರು ಇಂಥ ಸ್ವಾರ್ಥ ಹಿತಾಸಕ್ತಿಯಿಂದ ಮುಕ್ತವಾಗಿರುತ್ತಾರೆಯೇ? ಮತ್ತು ಸಾಮಾಜಿಕ ಆಂದೋಲನಗಳಾಗಿ ಬಿಂಬಿತವಾಗಿದ್ದ ರಾಮಜನ್ಮಭೂಮಿ, ಮೀಸಲಾತಿ ಮುಂತಾದ ಚಳುವಳಿಗಳು ಇಂದು ರಾಜಕೀಯದ ಬಾಂಬ್‌ಗಳಾಗಿರುವುದನ್ನು ಅಲ್ಲಗಳೆಯುವುದು ಸುಲಭವಲ್ಲ.

ಹೀಗೆಂದು ಗಾಂಧೀಜಿಯವರಲ್ಲಿ ಗೊಂದಲಗಳೇ ಇರಲಿಲ್ಲವೆಂಬುದು ಇಲ್ಲಿಯ ಪ್ರತಿಪಾದನೆಯಲ್ಲ. ಅವರು ಕೆಲವೊಂದು ವಿಷಯಗಳನ್ನು ಸಾಮಾಜಿಕ ನೆಲೆಯಲ್ಲಿ ನೋಡುತ್ತಾರೆ, ಮತ್ತು ಕೆಲವೊಂದನ್ನು ಆಧ್ಯಾತ್ಮಿಕ ನೆಲೆಯಲ್ಲಿ ಭಾವಿಸಿಕೊಳ್ಳುತ್ತಾರೆ. ಈ ಮಿಶ್ರಣವೇ ಅವರ ಗೊಂದಲಗಳಿಗೆ ಕಾರಣವಾಗುತ್ತದೆ. ಎಲ್ಲವನ್ನೂ ಆಧ್ಯಾತ್ಮಿಕ ಸ್ತರದಲ್ಲಿಯೇ ಮಾತನಾಡುವುದು ಒಬ್ಬ ಸಾಮಾಜಿಕ ಹೋರಾಟಗಾರನಿಗೆ ಸಾಧ್ಯವಾಗದು. ದಿಟವಾಗಿ ನೋಡಿದರೆ ಆಧ್ಯಾತ್ಮಿಕತೆಯ ಮೂಲಭಾಷೆಯೇ ಮೌನ ಎನ್ನಬೇಕಾಗುತ್ತದೆ. ಹೀಗಿದ್ದಾಗ, 'ಮೌನ'ದಿಂದ ಸಾಮಾಜಿಕ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾದೀತೆ? ಆಧ್ಯಾತ್ಮಿಕತೆಯು ಸಲ್ಲುವುದು ತಾರತಮ್ಯ ವಿವೇಕದ ಸಮಾನಾನುಭವದ ಭೂಮಿಕೆಯ ಮೇಲೆಯೇ ಹೊರತು ಬಲವಂತವಾಗಿ ತುರುಕುವ

ಸಾಮರಸ್ಯವೆಂಬ ಏಕಮೂಲಿಕಾ ಪ್ರಯೋಗದಿಂದಲ್ಲ. ಬೇರೆ ಬೇರೆ ಮಟ್ಟದ ಹಲವು ಘಟಕಗಳನ್ನು ಜೊತೆಯಾಗಿ ತೆಗೆದುಕೊಂಡು ಹೋಗಬೇಕಾಗಿರುವುದರಿಂದ ಸಾಮಾಜಿಕ ಅಭಿಯಾನದಲ್ಲಿ ಏಕಭಾಷೆ ನಡೆಯದು; ಹಲವು ದನಿಗಳು ಅನಿವಾರ್ಯ. ಆದರೆ ಆಧ್ಯಾತ್ಮಿಕತೆ ಒಂದು ಸಂಘಟಿತ ಹೋರಾಟವಲ್ಲ; ಅದು ಏಕಯಾನ. ಅಹಿಂಸೆಯನ್ನು ಒಂದು ನೈತಿಕ ಗುಣವಾಗಿ ನೋಡುವುದಕ್ಕೂ ಆಧ್ಯಾತ್ಮಿಕ ಸ್ತರದಲ್ಲಿ ನೋಡುವುದಕ್ಕೂ ವ್ಯತ್ಯಾಸವಿದೆ. ಆದರೆ ಗಾಂಧೀಜಿಯವರಲ್ಲಿ ಇಂಥ ಪೃಥಕ್ಕರಣವು ಸ್ಪಷ್ಟವಾಗಿ ಮೂಡಲಿಲ್ಲ ಎನ್ನುವುದಕ್ಕೆ ಸಾಕಷ್ಟು ಅವಕಾಶವಿದೆ.

ಇಲ್ಲಿ ನಾವು ಅವಶ್ಯವಾಗಿ ನೋಡಬೇಕಾದದ್ದು ಗಾಂಧೀಜಿಯವರ ಸಮಕಾಲೀನರಾಗಿದ್ದ ಆನಂದ ಕೆ. ಕುಮಾರಸ್ವಾಮಿಯವರ ಚಿಂತನೆಗಳನ್ನು. ಆನಂದ ಕುಮಾರಸ್ವಾಮಿಯವರು ಗಟ್ಟಿಯಾಗಿ ನಿಂತಿದ್ದದ್ದು ಸನಾತನ ಧರ್ಮದ ಆಧ್ಯಾತ್ಮಿಕೆಯ ವಿಶಾಲ ಭೂಮಿಕೆಯ ಮೇಲೆ. ಹೀಗಾಗಿಯೇ ಅವರು ತುಂಬ ಸಂಕೀರ್ಣವಾದ, ವಿವಾದಾಸ್ಪದವೆನಿಸುವ ಸಂಗತಿಗಳ ಬಗ್ಗೆಯೂ ಸ್ಪಷ್ಟವಾಗಿ, ನಿರ್ದಿಷ್ಟವಾಗಿ ನಿಖರವಾಗಿ ಮಾತನಾಡಲು ಸಾಧ್ಯವಾದದ್ದು. ಮಾತ್ರವಲ್ಲ, ಅವರು ತಾವು ಯಾರೊಂದಿಗೆ ಮತನಾಡಬೇಕೆಂಬುದನ್ನೂ, ಮಾತನಾಡುತ್ತಿದ್ದೇನೆಂಬುದನ್ನೂ ಕಂಡುಕೊಂಡಿದ್ದರು. ಈ ಸ್ವಸ್ಥಾನಪರಿಜ್ಞಾನ ಒಂದು ಮಹತ್ವದ ವಿವರವೇ ಹೌದು.

ಆದರೆ ಎಷ್ಟೇ ಮಿತಿಗಳಿದ್ದರೂ ಗಾಂಧೀಜಿಯವರು ನಮಗೆ ಇಂದು ಒದಗಿಬರುವಂಥವರು; ಮೊದಲೇ ಹೇಳಿದಂತೆ, ಇಂದು ನಮಗೆ ಹೆಚ್ಚು ಪ್ರಸ್ತುತವೆನಿಸುವುದು ಐತಿಹಾಸಿಕ ಗಾಂಧೀಯಲ್ಲ, ಪೌರಾಣಿಕ–ಗಾಂಧೀ. 'ಸ್ವಾತ್ಮ ಶಿಕ್ಷಣವೇ ದಿಟವಾದ ಸ್ವಾತಂತ್ರ್ಯಶಿಕ್ಷಣ, ನಾಗರಿಕತೆ, ಸ್ವರಾಜ್ಯ'–ಎನ್ನುವ ಗಾಂಧೀಜಿ ನಮಗಿಂದು ಅನಿವಾರ್ಯವಾಗುತ್ತಾರೆ. 'ಹಿಂದ್ ಸ್ವರಾಜ್'ನ ಮುಖ್ಯ ಪ್ರತಿಪಾದನೆಯೇ ಈ ಸ್ವಾತ್ಮಶಿಕ್ಷಣ. ತನ್ನನ್ನು ತಾನೇ ತಿದ್ದಿಕೊಳ್ಳುವ, ಋಜುಮಾರ್ಗದಲ್ಲಿ ನಿಲ್ಲಿಸಿಕೊಳ್ಳುವ ಸಾಧನಾತ್ಮಕವೆನಿಸಿರುವ ಈ ಸ್ವಾತ್ಮ ಶಿಕ್ಷಣವೇ ಭಾರತೀಯ ಪರಂಪರೆಯ ಜೀವಾತು.

ಗಾಂಧೀಜಿಯವರು ನಿರೂಪಿಸುವ ಸ್ವರಾಜ್ಯ ಎಂಥದು?–ಎಂಬುದು ನಮಗೆ ಮನದಟ್ಟಾದರೆ ಅನಂತರ ಅವರ ಎಷ್ಟೋ ಆಮೇಲಿನ ನಿಲುವುಗಳ ಜಾಡನ್ನುಹಿಡಿಯುವುದು ಸುಲಭ. "ನಮಗೆ ಇಂಗ್ಲಿಷ್ ರಾಜ್ಯ ಬೇಕು, ಇಂಗ್ಲಿಷರು ಬೇಡ. ಹುಲಿಯ ಗುಣ ಬೇಕು, ಹುಲಿ ಮಾತ್ರ ಬೇಡ ಎಂದರೆ ಹಿಂದೂಸ್ಥಾನವನ್ನು ಇಂಗ್ಲಿಷಾಗಿ ಮಾಡಬೇಕು. ಆಗ ಇದು ಹಿಂದೂಸ್ಥಾನವಲ್ಲ, ಇಂಗ್ಲಿಷ್‌ಸ್ಥಾನವಾದೀತು. ಇಂಥ ಸ್ವರಾಜ್ಯ ನನಗೆ ಬೇಡ" ಎನ್ನುತ್ತಾರೆ ಅವರು. 'ಹಿಂದ್ ಸ್ವರಾಜ್'ನ ಚಿಂತನೆ ಇದೇ; ಇದರ ಸುತ್ತ ಇತರ ವಿಚಾರ ತರಂಗಗಳು ಮೂಡಿಕೊಂಡಿವೆಯೆನ್ನಬಹುದು.

ಹಿಂದೂಸ್ಥಾನವನ್ನು ಇಂಗ್ಲಿಷ್‌ಸ್ಥಾನವನ್ನಾಗಿಸುವವರೇ 'ಹಿಂದ್ ಸ್ವರಾಜ್'ನ ಪೂರ್ವಪಕ್ಷದವರು ಎಂಬುದನ್ನು ಗಮನಿಸಬೇಕು. ನಮಗಿಂದು ಸ್ವರಾಜ್ಯವೇನೋ ದೊರೆತಿದೆ. ಆದರೆ ಎಂಥ ಸ್ವರಾಜ್ಯವೆಂಬುದು ನಮ್ಮ ಸುತ್ತಮುತ್ತಲಿನ ಜಗತ್ತನ್ನು ಬೇಡ, ನಮ್ಮ ಮನೆಗಳಲ್ಲಿಯೇ ಕಣ್ಣಾಡಿಸಿದರೂ ಸಾಕು, ಸ್ಪಷ್ಟವಾಗುತ್ತದೆ. ಒಂದೆಡೆ ಗಾಂಧೀಜಿ ಕೇಳುತ್ತಾರೆ–"ಮನೆ ಕೆಡವಲು ಎಷ್ಟುಕಾಲ ಬೇಕು?"–ಎಂದು. ಹೌದು ನಾವು ಅತ್ಯಲ್ಪ ಕಾಲದಲ್ಲಿಯೇ ನಮ್ಮ ಮನೆಗಳನ್ನು ಕೆಡವಿದ 'ಸಾಧನೆ'ಯನ್ನು

ಮರೆದಿದ್ದೇವೆ. ಮತ್ತೆ ಈ ಮನೆಗಳನ್ನು ಕಟ್ಟಲು 'ಹಿಂದ್ ಸ್ವರಾಜ್'ನ ಚಿಂತನೆಯ ಇಟ್ಟಿಗೆಗಳು ನೆರವಾಗಬಲ್ಲವು.

ನಮ್ಮನ್ನು ಇಂದು ಇಂಗ್ಲಿಷರು ನೇರವಾಗಿ ಆಳುತ್ತಿಲ್ಲ ಎಂಬ ಬಾಹ್ಯ ತಥ್ಯವನ್ನು ಹೊರತುಪಡಿಸಿದರೆ ದಿಟವಾಗಿ ಈಗಲೂ ನಾವು ಇಂಗ್ಲಿಷರ, ಎಂದರೆ ಪಾಶ್ಚಾತ್ಯೀಕರಣದ ಗುಲಾಮರೇ ಹೌದೆಂಬ ಅಂತರಂಗದ ಸತ್ಯವನ್ನು ನಿರಾಕರಿಸಲು ಸಾಧ್ಯವಿಲ್ಲ. ಇಲ್ಲಿ ಒಂದೇ ಒಂದು ನಿದರ್ಶನವನ್ನು ಗಮನಿಸಬಹುದು. ಇಂಗ್ಲಿಷ್ ಪಾರ್ಲಿಮೆಂಟ್ ವ್ಯವಸ್ಥೆಯನ್ನು ಗಾಂಧೀಜಿ 'ಬಂಜೆ' ಮತ್ತು 'ವೇಶ್ಯೆ' ಎಂದು ಟೀಕಿಸುತ್ತಾರೆ. ಇಲ್ಲಿ ಈ ಪದಗಳಿಗಿರುವ ಧ್ವನಿಶಕ್ತಿಯನ್ನು ವಿವರಿಸುವ ಅವಶ್ಯಕತೆಯೇನೂ ಇಲ್ಲವಷ್ಟೆ. ಅಹಿಂಸೆಯ ತೀವ್ರ ವ್ರತನಿಷ್ಠ ವ್ಯಕ್ತಿಯಿಂದ ಈ ಕಠೋರ ಶಬ್ದಗಳು ಸಿಡಿದುಬಂದಿವೆ ಎಂಬುದನ್ನು ಅರ್ಥಮಾಡಿಕೊಂಡರೆ ಅವರಿಗೆ ಅ ವ್ಯವಸ್ಥೆಯ ಬಗ್ಗೆ ಎಷ್ಟು ಅಸಹನೆಯಿತ್ತೆಂಬುದು ಸ್ಪಷ್ಟವಾಗುತ್ತದೆ. ಕಾರ್ಲೈಲ್ ಎಂಬುವನು ಇಂಗ್ಲಿಷ್ ಪಾರ್ಲಿಮೆಂಟನ್ನು "ಜಗತ್ತಿನ ಮಾತಿನ ಅಂಗಡಿ"('Talking shop of the world'....) ಎಂದಿರುವುದನ್ನು ಗಾಂಧೀಜಿ ಉಲ್ಲೇಖಿಸುತ್ತಾರೆ. "ಪಾರ್ಲಿಮೆಂಟ್ ಎಂಬುದು ಜನತೆಗೆ ಒಂದು ವಿನೋದ; ಬಹಳ ದುಬಾರಿಯಾದ ಒಂದು ಆಟದ ಸಾಮಗ್ರಿ"–ಎನ್ನುತ್ತಾರೆ. ಈ ಮಾತಿನೊಂದಿಗೆ ನಮ್ಮ ಇಂದಿನ ಪಾರ್ಲಿಮೆಂಟ್ ನಡಾವಳಿಗಳನ್ನು ಹೋಲಿಸಿಕೊಳ್ಳಬಹುದು. ಪಾರ್ಲಿಮೆಂಟ್ ಕಲಾಪಗಳ ನೇರ ಪ್ರಸಾರವನ್ನು ಜನರು ೨೦–೨೦ ಕ್ರಿಕೆಟ್ ಪಂದ್ಯಗಳಷ್ಟೇ ರೋಚಕತೆಯಿಂದ ವೀಕ್ಷಿಸಲು ಉತ್ಸುಕರಾಗುವುದು ಸುಳ್ಳಲ್ಲವಲ್ಲವೆ?

ಇಂಗ್ಲಿಷ್ ನಾಗರಿಕತೆಯನ್ನು ಪ್ರಬಲವಾಗಿ ವಿರೋಧಿಸುತ್ತಲೇ "ಇಂಗ್ಲಿಷರು ಭಾರತೀಯರಾದರೆ ನಮ್ಮಲ್ಲಿ ಅವರನ್ನು ಕೂಡಿಸಿಕೊಳ್ಳಬಹುದು" ಎಂಬ ಗಾಂಧೀಜಿಯವರ ಮಾತನ್ನು ಗಮನಿಸಬೇಕು. ಅಂದರೆ, ಗಾಂಧೀಜಿಯವರಿಗೆ ಮುಖ್ಯವಾದದ್ದು ಭಾರತೀಯತೆ, ಈ ನೆಲದ ಸಂಸ್ಕೃತಿ. "ಭಾರತೀಯ ಸಭ್ಯತೆಗಿಂತ ಹೆಚ್ಚಿನದು ಯಾವುದೂ ಇಲ್ಲ, ಇತರರಿಗೆ ಕಲಿಸುವ ರಾಷ್ಟ್ರ ಇದು" ಎಂದೂ ಹೆಮ್ಮೆಯಿಂದ ಹೇಳುತ್ತಾರೆ. ಆದರೆ ಇದೇನೂ ಅವರಿಗೆ ಭಾವಾವೇಶದಿಂದ ಬಂದ ಕ್ಷಣಿಕವಾದ ನಿಲುವು ಆಗಿರಲಿಲ್ಲವೆಂಬುದನ್ನು ಗಮನಿಸಬೇಕಾಗುತ್ತದೆ. ಭಾರತೀಯ ಮನೋಧರ್ಮಕ್ಕೂ ಪಾಶ್ಚಾತ್ಯ ಮನೋಧರ್ಮಕ್ಕೂ ವ್ಯತ್ಯಾಸಗಳಿರುವುದನ್ನು ಅವರು ತಮ್ಮ ಚಿಂತನೆಯಿಂದ ದೃಢಪಡಿಸಿಕೊಂಡಿದ್ದರು. ಉದಾಹರಣೆಗೆ, ಪಾಶ್ಚಾತ್ಯ ಕಲ್ಪನೆಯ ಇತಿಹಾಸ ಲಕ್ಷಣವನ್ನು ಅವರು ತಿರಸ್ಕರಿಸುವುದನ್ನು ಇಲ್ಲಿ ಗಮನಿಸಬಹುದು. "ನಮಗೆ ತಿಳಿದಿರುವ ಇತಿಹಾಸವೆಂದರೆ ಅದು ಜಗತ್ತಿನ ಯುದ್ಧಗಳ ಕಥೆ. ಹೀಗಾಗಿಯೇ ಇಂಗ್ಲಿಷರಲ್ಲಿ ಒಂದು ಗಾದೆಯಿದೆ.– 'ಇತಿಹಾಸವಿಲ್ಲದ ದೇಶ ಸುಖದ ದೇಶ'. "ರಾಜರು ಹೇಗೆ ಆಟವಾಡಿದರು, ಹೇಗೆ ಪರಸ್ಪರ ಹಗೆಗಳಾದರು, ಹೇಗೆ ಒಬ್ಬರನ್ನೊಬ್ಬರು ಕೊಂದರು ಎಂದು ಈಗಿನ ಇತಿಹಾಸದಲ್ಲಿ ವರ್ಣಿತವಾಗಿದೆ. ಲೋಕದಲ್ಲಿ ನಡೆದುದು ಇಷ್ಟೇ ಆಗಿದ್ದಿದ್ದರೆ ಈ ಲೋಕ ಎಂದೋ ಮುಳುಗಿಹೋಗುತ್ತಿತ್ತು". ಎನ್ನುವ ಅವರ ಮಾತಿನಲ್ಲಿ ಜೀವನ್ಮುಖಿಯಾದ ಸಂಸ್ಕೃತಿಯೇ ದಿಟವಾದ ಸಂಸ್ಕೃತಿ, ನಾಗರಿಕತೆ ಎಂಬ ನಿಲುವು ಸ್ಪಷ್ಟವಾಗಿ ವ್ಯಕ್ತವಾಗಿದೆ. ಹಿಂದಿನ ರಾಜನ ಸ್ಥಾನದಲ್ಲಿ ಇಂದಿನ

ರಾಜಕಾರಣಿಗಳನ್ನೂ, ಅಂದಿನ ಯುದ್ಧಗಳ ಬದಲಿಗೆ ಈಗಿನ ಚುನಾವಣೆಗಳನ್ನೂ ಕಲ್ಪಿಸಿಕೊಂಡು ಪ್ರಸ್ತುತ ಇತಿಹಾಸದ ಗತಿಯನ್ನು ನಾವು ಕಂಡುಕೊಳ್ಳಬಹುದಾಗಿದೆ. ಹೀಗೆಂದು ಗಾಂಧೀಜಿಯವರು 'ಭಾರತದಲ್ಲಿ ಹುಟ್ಟಿದವರೆಲ್ಲರೂ ಭಾರತೀಯರು' ಎಂಬ ಸರಳ ಸಮೀಕರಣವನ್ನು ಮಾಡುವುದಿಲ್ಲವೆಂಬುದನ್ನೂ ನಾವು ಮರೆಯಬಾರದು. "ಹಿಂದೂಸ್ಥಾನಕ್ಕೆ ಬಂದಿರುವ ನೀವು ಇಂಗ್ಲಿಷ್-ಜನಾಂಗದ ಒಳ್ಳೆಯ ಮಾದರಿಗಳಲ್ಲ. ಅರೆ ಬರೆ ಇಂಗ್ಲಿಷರಾದ ನಾವೂ ನಿಜವಾದ ಹಿಂದೂಸ್ಥಾನದ ಪ್ರತಿನಿಧಿಗಳಲ್ಲ" ಎಂದಿರುವುದು ಇಲ್ಲಿ ಮನನೀಯ. ಭಾರತೀಯತೆಯ ಬಗ್ಗೆ ಬಂಡಿಗಟ್ಟಲೆ ಮಾತನಾಡುವ ನಾವು ಇಂದು 'ದಿಟವಾದ ಭಾರತೀಯರಾಗಿದ್ದೇವೆಯೇ?'- ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳುವಂಥ ಎದೆಗಾರಿಕೆಯಾದರೂ ನಮಗಿದೆಯೇ ಎಂಬುದನ್ನು ಮೊದಲು ಪ್ರಶ್ನಿಸಿಕೊಳ್ಳಬೇಕಿದೆ. ಇಲ್ಲಿ ನನಗೆ ತತ್‌ಕ್ಷಣಕ್ಕೆ ನೆನಪಾಗುವುದು ಆನಂದ ಕುಮಾರಸ್ವಾಮಿಯವರ "ಪೂರ್ವ-ಪಶ್ಚಿಮಗಳು ಭೌಗೋಳಿಕ ರೇಖೆಗಳಲ್ಲ, ಅವು ಮಾನಸಿಕ ಸ್ಥಿತಿಗಳು" ಎಂಬ ಮಾತು.

ಮೊದಲೇ ಹೇಳಿದಂತೆ 'ಹಿಂದ್ ಸ್ವರಾಜ್' ಎಲ್ಲ ಅಭಿಪ್ರಾಯಗಳನ್ನೂ ಎಲ್ಲರೂ ಎಂದಿಗೂ ಒಪ್ಪಲಾರರು. ಇದು ಪ್ರಕಟವಾದ ಮೊದಲ ದಿನಗಳಲ್ಲಿಯೇ 'ಇದೊಂದು ಅಕಾಲಿಕ ಅಪಕ್ವ ಕೃತಿ' ಎಂಬಂಥ ಟೀಕೆಗಳನ್ನು ಅಂದಿನ ಜನನಾಯಕರಿಂದಲೂ ಚಿಂತಕರಿಂದಲೂ ಎದುರಿಸಿತು. ಗಾಂಧೀಜಿಯವರ ಎಷ್ಟೋ ಮಾತುಗಳಂತೂ ಈಗಿನ ಹಲವರಿಗೆ ತೀರ ಬಾಲಿಶವಾಗಿ ಕಾಣುವುದು ಸಹಜವೇ. ಉದಾಹರಣೆಗೆ, "ಗೃಹಲಕ್ಷ್ಮಿಯಾಗಬೇಕಿದ್ದ ಸ್ತ್ರೀಯರು ಬೀದಿ ಬೀದಿ ಅಲೆಯುತ್ತಿದ್ದಾರೆ" ಎನ್ನುತ್ತಾರೆ ಅವರು. ಈ ಮಾತನ್ನು ಕೇಳಿಸಿಕೊಂಡ ಸ್ತ್ರೀವಾದಿಗಳು ಅವರನ್ನು ಸುಮ್ಮನೆ ಬಿಟ್ಟಾರೆಯೆ? ಹಾಗೆಯೇ, "ರೈಲು, ವಕೀಲರು, ವೈದ್ಯರು ಹಿದೂಸ್ಥಾನ ದೇಶವನ್ನು ಕಂಗಾಲ ದೇಶವನ್ನಾಗಿ ಮಾಡಿಬಿಟ್ಟಿದ್ದಾರೆ" ಎಂಬ ಮಾತಿನ ಮೂಲಕ ಆಧುನಿಕ ನಾಗರಿಕತೆಯ ಎಲ್ಲ ವಿವರಗಳನ್ನೂ ಅವರು ಟೀಕಿಸುತ್ತಾರೆ. 'ಶಿಕ್ಷಣ' ಎಂಬ ಅಕ್ಷರಜ್ಞಾನವನ್ನು ಪಡೆದು, 'ಅಭಿವೃದ್ಧಿ' ಎಂಬ ಮರೀಚಿಕೆಯಿಂದ ತಮ್ಮ ದಾಹವನ್ನು ತಣಿಸಿಕೊಳ್ಳುತ್ತಿರುವ ಆಧುನಿಕ 'ಸುಶಿಕ್ಷಿತರಿಗೆ' ಗಾಂಧೀಜಿಯವರ ಈ ಮಾತಿನಿಂದ ನಗು ಉಕ್ಕದಿದ್ದೀತೆ? ಇಲ್ಲಿ ನೆನಪಾಗುವುದು ನೆಹರು. ಗಾಂಧೀಜಿಯವರು ೧೯೪೫ರ ಅಕ್ಟೋಬರ್ ೫ರಂದು ನೆಹರೂರವರಿಗೆ ಪತ್ರವೊಂದನ್ನು ಬರೆದು, 'ಹಿಂದ್ ಸ್ವರಾಜ್' ಪ್ರತಿಪಾದಿಸುವ ತತ್ವಗಳತ್ತ ಅವರ ಗಮನವನ್ನು ಸೆಳೆಯುತ್ತಾರೆ. ಇಲ್ಲಿ ಗಮನಿಸಬೇಕಾದದ್ದು ಗಾಂಧೀಜಿ ೧೯೦೯ರಲ್ಲಿ ಬರೆದಿದ್ದ'ಹಿಂದ್ ಸ್ವರಾಜ್'ನ ತತ್ವಗಳನ್ನು ೧೯೪೫ರಲ್ಲೂ ಪೂರ್ಣವಾಗಿ ಅನುಮೋದಿಸಿದ್ದು; ಅದೇ ಅಕ್ಟೋಬರ್ ೯ರಂದು ಗಾಂಧೀಜಿಯವರಿಗೆ ನೆಹರೂ ಉತ್ತರಿಸುತ್ತ- "ಎಂದೋ ಬಹಳ ಹಿಂದೆ ಓದಿರುವ 'ಹಿಂದ್ ಸ್ವರಾಜ್'ನ ವಿವರಗಳು ಈಗ ನನಗೆ ಮಸುಕು ಮಸುಕಾಗಿವೆ. ಮಾತ್ರವಲ್ಲ, ಇವು ಪೂರ್ಣವಾಗಿ ಅವ್ಯವಹಾರ್ಯವೂ ಎನಿಸಿದೆ" ಎನ್ನುತ್ತ "ಜಗತ್ತು ಈಗ ತುಂಬ ಬದಲಾವಣೆಯನ್ನು ಪಡೆದಿದೆ" ಎನ್ನುತ್ತಾರೆ. ಪುನಃ ಗಾಂಧೀಜಿಯವರು ೧೯೪೫ರ ನವೆಂಬರ್ ೧೩ರಂದು ನೆಹರೂಗೆ ಪತ್ರ ಬರೆದು, ನೆಹರೂರವರಿಗೆ ತಮ್ಮ ಈ ಮೊದಲಿನ ಪತ್ರ ಅರ್ಥವಾಗಿರಲಿಕ್ಕಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ;

ಇದಕ್ಕೆ ಅವರು ಕೊಡುವ ಕಾರಣವೂ ಧ್ವನಿಪೂರ್ಣವಾಗಿದೆ. "ಹಿಂದಿನ ಪತ್ರವು ಹಿಂದೂಸ್ಥಾನಿಯಲ್ಲಿದ್ದುದರಿಂದ ಪೂರ್ಣವಾಗಿ ಅರ್ಥವಾಗಿರಲಾರದು, ಈಗ ಅದನ್ನು ಇಂಗ್ಲಿಷ್‌ಗೆ ಅನುವಾದಿಸಿ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತೇನೆ" ಎಂದು ಹೇಳುತ್ತಾರೆ. ಗಾಂಧೀಜಿಯವರ ಭಾಷೆಯೇ ನೆಹರೂರವರಿಗೆ ಅರ್ಥವಾಗಲಿಲ್ಲವೆಂಬುದು ಇಲ್ಲಿ ಒಂದು ಸಾಂಕೇತಿಕತೆಯನ್ನು ಪಡೆದುಕೊಳ್ಳುತ್ತದೆ. ಎಲ್ಲ ಆಧುನಿಕ ಮನಸ್ಸಿಗೂ ಪ್ರತಿನಿಧಿಯಾಗಿ ನೆಹರೂ ಇಲ್ಲಿ ಕಾಣಿಸಿಕೊಳ್ಳುತ್ತಾರೆ.

ಗಾಂಧೀಜಿಯವರು ಆಧುನಿಕತೆಯು ಒಡ್ಡುವ ಸಮಸ್ಯೆಗಳ ತಳಾತಳವನ್ನು ಸ್ಪರ್ಶಿಸುತ್ತಿದ್ದಾರೆಂಬ ಎಚ್ಚರಿಕೆ ಅರಿವುಗಳು ನಮಗಿಲ್ಲವಾದರೆ ಅವರು ನಮ್ಮ ಕಣ್ಣಿಗೆ ಒಬ್ಬ ಪ್ರಗತಿ ವಿರೋಧಿಯಂತೆ ಕಾಣುವ ಅಪಾಯ ಇದ್ದದ್ದೇ ಹೌದು. 'ಅಭಿವೃದ್ಧಿ ಎಂದರೇನು?' ಎಂಬುದನ್ನು ಆಧುನಿಕತೆಯು ಪುನರ್‌ವ್ಯಾಖ್ಯೆಗೆ ಒಳಪಡಿಸಬೇಕಾದ ಅನಿವಾರ್ಯತೆ ಇಂದು ಎದುರಾಗಿದೆ. ಕಾಡನ್ನು ಕಡಿದು ನಾಡನ್ನು 'ಕಟ್ಟುವುದೇ' ಅಭಿವೃದ್ಧಿ ಎಂಬಂಥ ಸರಳ ಸೂತ್ರಗಳನ್ನು ನಾವು ಪ್ರಮಾಣಿಕವಾದ ಚಿಂತನೆಗೆ ಒಡ್ಡಬೇಕಿದೆ. ಅಬಲಾಶ್ರಮಗಳು, ವೃದ್ಧಾಶ್ರಮಗಳು, ಮಾನಸಿಕ ಚಿಕಿತ್ಸಾ ಕೇಂದ್ರಗಳು, ಪೋಲೀಸ್ ಠಾಣೆಗಳು ಮುಂತಾದವು ಸಮಾಜದಲ್ಲಿ ಹೆಚ್ಚಾಗುವುದು ಸಮಾಜದ ಪ್ರಗತಿಗೆ ಮಾನದಂಡವೋ? ಅಥವಾ ಅವನತಿಗೆ ಸಂಕೇತವೋ? ಎಂಬುದನ್ನು ನಾವಿಂದು ಮನನ ಮಾಡಬೇಕಿದೆ. ಸಮಾಜದ ಸಮಸ್ಯೆಗಳ ಪರಿಹಾರಕ್ಕೆ ಯಾವುದೋ ಬಾಹ್ಯಮೂಲದ ಮಹಾಕ್ರಾಂತಿಗಳ ಮಾದಕತೆಯನ್ನು ದಯಪಾಲಿಸದೆ, 'ಎಲ್ಲ ಸಮಸ್ಯೆಗಳಿಗೂ ನೀನೇ ಮೂಲ' ಎಂಬಂಥ ಆತ್ಮ ಶಿಕ್ಷಣದ ಮಂತ್ರವನ್ನು ಉಪದೇಶಿಸುವ ಗಾಂಧೀತತ್ವವು ಹಲವು 'ಇಸಂ'ಗಳ ಪ್ರಭಾವಗಳ ನಡುವೆ ಸ್ಥಾನವನ್ನು ಗಿಟ್ಟಿಸದೆ, ಸಹಜವಾದ ಅರ್ಹತೆಯಿದ್ದರೂ ಸ್ಥಾನ ಭ್ರಷ್ಟತೆಯನ್ನು ಅನುಭವಿಸುತ್ತಿರುವುದರಲ್ಲಿ ಆಶ್ಚರ್ಯದ ವಿಷಯವೇನೂ ಇಲ್ಲ.

ಗಾಂಧೀಜಿಯವರೆನ್ನುತ್ತಾರೆ–"ರೈಲು ಬಂದು ಜನರು ತಮ್ಮಲ್ಲಿದ್ದ ದವಸ ಧಾನ್ಯಗಳನ್ನು ಮಾರಲು ತೊಡಗಿದರು. ಆ ಧಾನ್ಯಗಳೆಲ್ಲವೂ ಬೆಲೆ ಎಲ್ಲಿ ಹೆಚ್ಚು ದೊರೆಯುವುದೋ ಅಲ್ಲಿಗೆ ಸಾಗಾಟವಾಗತೊಡಗಿತು. ಅದರಿಂದ ಬರಗಳು ಪದೇ ಪದೇ ಪೀಡಿಸತೊಡಗಿದವು. ಜನರಲ್ಲಿ ಆಲಸ್ಯ ಹೆಚ್ಚಾಗಿ ಕ್ಷಾಮದ ಸಂಕಟವೂ ಹೆಚ್ಚಿತು." ಗಾಂಧೀಜಿಯವರ ಈ ತಾರ್ಕಿಕ ಸರಣಿ ಇಂದಿನವರಿಗೆ ತೀರ ಹಾಸ್ಯಾಸ್ಪದವಾಗಿ ಕಾಣುವುದರಲ್ಲಿ ಸಂಶಯವಿಲ್ಲ.

ಆದರೆ ನೀವು ರೈಲಿನ ಬದಲಿಗೆ 'ವಿಮಾನ'ವನ್ನು ಇಲ್ಲಿ ಸೇರಿಸಿಕೊಳ್ಳಬಹುದೇ ಹೊರತು ಗಾಂಧೀಜಿಯವರು ಎತ್ತಿರುವ ಸಮಸ್ಯೆಯ ಮೂಲವನ್ನು ನಿರಾಕರಿಸಲು ಸಾಧ್ಯವಾಗದು. ಇಂದು ನನ್ನ ಹಳ್ಳಿಯಲ್ಲಿ ಬೆಳೆದ ಒಳ್ಳೆಯ ಮಾವು, ಹೂವು ಮುಂತಾದವು ನನಗೆ ಸಿಗದೆ, ಹೊರಗಣ 'ಪ್ರತಿಷ್ಠಿತ' ಗಿರಾಕಿಗೆ ಸುಲಭವಾಗಿ ದಕ್ಕುವಂತೆ ಮಾಡುವ ಮಾರುಕಟ್ಟೆಯ 'ಸುವ್ಯವಸ್ಥಿತ' ಜಾಲಕ್ಕೆ ಈ ವಿಮಾನ ಮುಂತಾದ ಯಂತ್ರಗಳ ಕೊಡುಗೆ ಎಷ್ಟು ದೊಡ್ಡದು ಎಂಬುದನ್ನು ಅರ್ಥ ಮಾಡಿಕೊಂಡಾಗ ಗಾಂಧೀಜಿ ಎತ್ತಿರುವ ಸಮಸ್ಯೆಯ ಗಂಭೀರತೆಯು ತನ್ನ ಗುಟ್ಟನ್ನು ಬಿಟ್ಟುಕೊಟ್ಟೀತು. ಭೂಮಿಯ ಬಸಿರನ್ನು ಬಗೆಯುತ್ತ ಹೊರಗಣ ದೇಶಗಳಿಗೆ ನಡೆಸುವ ಅದಿರು ಮುಂತಾದವುಗಳ

ರಪ್ತು–ಉದ್ಯಮವನ್ನೂ ನಾವಿಲ್ಲಿ ಮರೆಯುವಂತಿಲ್ಲ. ಪ್ರಕೃತಿಯ ಮೇಲೆ ನಡೆಸುವ ಎಲ್ಲ ಅತ್ಯಾಚಾರಗಳೂ ಪಟ್ಟಿಯಲ್ಲಿ ಸ್ಥಾನವನ್ನು ಪಡೆದುಕೊಳ್ಳುತ್ತದೆಯೆನ್ನಿ. ತೀರ್ಥ ಕ್ಷೇತ್ರಗಳ ಪಾವಿತ್ರ್ಯನಾಶವೂ ಇಂಥ ಸಂಚಾರವ್ಯವಸ್ಥೆಯಿಂದ ಆಯಿತೆಂದೂ ಗಾಂಧೀಜಿ ಖೇದದಿಂದಲೇ ಹೇಳುತ್ತಾರೆ. ತೀರ್ಥ ಕ್ಷೇತ್ರಗಳು ಇಂದು ಪ್ರವಾಸಿ ತಾಣಗಳಾಗಿರುವುದು ನಮ್ಮ ಕಣ್ಣಿಗೆ ಬೀಳದ ದೃಶ್ಯವೇನಲ್ಲ. ಹೀಗಾಗಿಯೇ ನಾವು ಚಾಮುಂಡಿ ಬೆಟ್ಟಕ್ಕೂ, ತಿರುಪತಿ ಬೆಟ್ಟಕ್ಕೂ, ಕೈಲಾಸ ಪರ್ವತಕ್ಕೂ ರೋಪ್–ವೇಗಳು, ಎಸ್ಕಲೇಟರ್‌ಗಳು ಬೇಕೆಂದು ಒತ್ತಾಯಿಸುವುದು. ಇಲ್ಲಿ ನಾವು ಗಮನಿಸಬೇಕಾದದ್ದು ನಮ್ಮನ್ನು ಒಳಗಿನಿಂದಲೇ ಕಿತ್ತು ತಿನ್ನುತ್ತಿರುವ ಭಾವಶಿಥಿಲತೆಯನ್ನು. ಭಾರತೀಯರು ಹುಟ್ಟಿನಿಂದಲೇ ಸಹಜವಾಗಿಯೇ ನೈತಿಕ ನಿಷ್ಠೆಯುಳ್ಳವರು, ಆಧ್ಯಾತ್ಮದಲ್ಲಿ ಆಸಕ್ತರು ಎಂಬುದು ಕೇವಲ ಒಂದು ಹುಸಿಯಾದ ನಂಬಿಕೆಯೇನೊ? ಎಂಬ ಅನುಮಾನವು ಇಲ್ಲಿ ನಮ್ಮನ್ನು ಕಾಡದಿರದು. ಅವಕಾಶ ಸಿಕ್ಕಿರಲಿಲ್ಲವೆಂದು ತೆಪ್ಪಗಿದ್ದುದೇ ಹೊರತು ಅವಕಾಶ ದೊರೆತರೆ ನಾವೂ ಸಹ ಎಲ್ಲ ಆಮಿಷಗಳಿಗೂ ತೆರೆದುಕೊಳ್ಳುವವರೇ ಹೌದು–ಎಂಬುದನ್ನು ಈ ಯಂತ್ರ ನಾಗರಿಕತೆ ಬಯಲು ಮಾಡಿದೆಯೆಂದೂ ಹೇಳಬೇಕಾಗುತ್ತದೆ. ಹೀಗಾಗಿ ನಾವು ಆದರ್ಶದ ನೆಲೆಯಲ್ಲಿ ಮಾತನಾಡುವ 'ಭಾರತೀಯತೆ' ಎಂಬುದು ಭೌಗೋಳಿಕ ಸ್ತರದ ವಿವರವಾಗದು ಎಂದು ಸಿದ್ಧವಾಗುತ್ತದೆ.

ಗಾಂಧೀಜಿಯವರ ಪ್ರಥಮ ವೈರಿಗಳೆಂದರೆ ಯಂತ್ರಗಳೇ ಹೌದು. ಇಲ್ಲೂ ಹಲವರು ಗಾಂಧೀಯವರನ್ನು ಅಪಹಾಸ್ಯ ಮಾಡಿದ್ದುಂಟು. 'ಗಾಂಧೀಯವರೇ ಎತ್ತಿಹಿಡಿಯುವ ಚರಕವಾಗಲೀ, ಅವರೇ ಧರಿಸಿರುವ ಕನ್ನಡಕವಾಗಲೀ ಯಂತ್ರವಲ್ಲವೆ?' ಎಂದು ವಿಪರೀತ ತರ್ಕದ ಕುಹಕವಾಡಿದ್ದೂ ಉಂಟು. ಈಗಂತೂ ಗಾಂಧೀಯವರ ಈ 'ಯಂತ್ರ ವಿರೋಧಿ' ವ್ರತವನ್ನು 'ಸುಶಿಕ್ಷಿತರು' ಯಾರೂ ಒಪ್ಪುವುದಕ್ಕೆ ಸಾಧ್ಯವೇ ಇಲ್ಲ. ಗಾಂಧೀಯವರಿಗೂ ಈ ವಿರೋಧದ ದನಿಗಳು ಕೇಳಿಸದೇ ಇರಲಿಲ್ಲ. "ನಾಗರಿಕತೆಗೆ ವಿರುದ್ಧವಾಗಿ ಮಾತನಾಡುವವರು ಅಜ್ಞಾನಿ"ಗಳೆಂಬ ಹಣೆಪಟ್ಟಿಗೆ ತುತ್ತಾಗಬೇಕಾಗುತ್ತದೆ ಎಂಬುದು ಅವರಿಗೂ ಗೊತ್ತಿತ್ತು. ಆದರೆ ಗಾಂಧೀಯವರು ಯಂತ್ರಗಳನ್ನು ವಿರೋಧಿಸುವ ಮೂಲಕ ಏನನ್ನು ವಿರೋಧಿಸುತ್ತಿದ್ದಾರೆಂದೂ, ಅದರಿಂದ ಅವರು ಏನನ್ನು ಗಳಿಸಲು ಬಯಸುತ್ತಿದ್ದಾರೆಂದೂ ಅರ್ಥ ಮಾಡಿಕೊಳ್ಳದಿದ್ದರೆ ನಷ್ಟವಾಗುವುದು ನಮಗೇ. ಬದುಕಿನ ದಿಟವಾದ ಲಕ್ಷಣವನ್ನೇ ಬದಲಾಯಿಸುತ್ತಿರುವ ಯಂತ್ರ ನಾಗರಿಕತೆಯನ್ನು ಗಾಂಧೀಜಿ ವಿರೋಧಿಸಿದ್ದು ಎಂಬುದನ್ನು ಕಂಡುಕೊಳ್ಳಬೇಕಿದೆ. ಈಗ ಯಂತ್ರ ಜಗತ್ತು–ತಂತ್ರಜ್ಞಾನ ಎಷ್ಟೋ ಮುಂದುವರೆದಿದೆ, ದಿಟವೇ; ಆದರೆ ಮನುಷ್ಯ ಇದರಿಂದ ನೆಮ್ಮದಿಯಾಗಿದ್ದಾನೆಂದು ಧೈರ್ಯವಾಗಿ, ಪ್ರಾಮಾಣಿಕವಾಗಿ ಹೇಳಬಹುದೆ? ಬದುಕನ್ನೇ ಕಿತ್ತುಕೊಳ್ಳುವ ಯಂತ್ರಗಳೂ, ದೇವರನ್ನೇ ಮರೆಸುವ ಬುದ್ಧಿಶಕ್ತಿಯೂ ಗಾಂಧೀಜಿಗೆ ಬೇಡವಾಗಿತ್ತು. ಇಂದು ನಾವು ಯಂತ್ರಗಳಿಗೆ ಎಷ್ಟು ದಾಸರಾಗಿದ್ದೇವೆಂಬುದನ್ನು ನೆನೆದರೆ ಗಾಬರಿಯೂ ಆಗುತ್ತದೆ, ಗಾಂಧೀಜಿಯವರ ನಿಲುವಿನ ತಾತ್ಪರ್ಯವೂ ಗೊತ್ತಾಗುತ್ತದೆ. ನಿದರ್ಶನಕ್ಕೆ ಹೇಳುವುದಾದರೆ, ದೇವಸ್ಥಾನಗಳಲ್ಲಿಂದು ಗಂಟೆ–ಜಾಗಟೆಗಳ ಜಾಗದಲ್ಲಿ ಯಂತ್ರಗಳು

ಮೊಳಗುತ್ತಿವೆ; ಮನೆಗಳಲ್ಲಿ ಪ್ಲಾಸ್ಟಿಕ್ ತೋರಣಗಳು ನಳನಳಿಸುತ್ತಿವೆ! ಇಂಥ ಪೂಜೆ-ಉತ್ಸವಗಳು ನಮಗೆ ಬೇಕೆ? "ನಮ್ಮ ದೇವರ ವಿಗ್ರಹಗಳೂ, ಪಟಗಳೂ ಜರ್ಮನಿಯಿಂದ ಬರುತ್ತಿವೆ" ಎಂದು ಅವರು ಸಂಕಟಪಡುತ್ತಾರೆ. 'ಜರ್ಮನಿಯಿಂದ ಅವು ಬಂದರೆ ತಪ್ಪೇನು?' ಎಂದು 'ಸುಶಿಕ್ಷಿತ' ಬುದ್ಧಿಯು ಕೇಳಬಹುದು. ಭಾರತದಲ್ಲಿ ಮೂರ್ತಿ ಶಿಲ್ಪವನ್ನು ಮಾಡುವುದೇ ಯಜ್ಞದಂಥ ಒಂದು ಧಾರ್ಮಿಕ ಕಲಾಪ ಎಂಬುದು ಅರಿವಾದರೆ ಕರುಳಬಳ್ಳಿಯ ಸಂಕಟ ನಮಗೂ ಆಗದಿರದು. ಇತ್ತೀಚೆಗೆ ಪ್ರಕಟವಾದ ಪ್ರಸನ್ನ ಅವರು ಬರೆದಿರುವ 'ಯಂತ್ರಗಳನ್ನು ಕಳಚೋಣ ಬನ್ನಿ' ಕೃತಿ ಇಲ್ಲಿ ಉಲ್ಲೇಖನೀಯ. ಆದರೆ ಅವರು 'ಇಸಂ'ಗಳ ಪೂರ್ವಾಗ್ರಹಗಳಿಂದ ಪೂರ್ಣ ಮುಕ್ತರಾಗಿ ವಿಷಯ ಮಂಡನೆ ಮಾಡಿಲ್ಲವೆಂಬುದು ದಿಟವಾದರೂ ಇದೊಂದು ಸ್ವಾಗತಾರ್ಹ ಮಹತ್ವಪೂರ್ಣ ಕೃತಿ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಆಧುನಿಕ ಮಾನಸಿಕತೆಯು ಈ ಕೃತಿಯ ಚಿಂತನೆಯನ್ನೂ 'ಭಾವಾತಿರೇಕದ ಪ್ರಲಾಪ' ಎಂದು ಪೂರ್ಣವಾಗಿ ತಳ್ಳಿಹಾಕಿಬಿಡಬಹುದೆನ್ನಿ!

'ಹಿಂದ್ ಸ್ವರಾಜ್'ನಲ್ಲಿ ನನಗೆ ವೈಯಕ್ತಿಕವಾಗಿ ತುಂಬ ಇಷ್ಟವಾದ ಅಧ್ಯಾಯಗಳೆಂದರೆ 'ನಾಗರಿಕತೆ', ಸತ್ಯಾಗ್ರಹ' ಮತ್ತು 'ಶಿಕ್ಷಣ'ವನ್ನು ಕುರಿತಂಥವು. 'ಕೇವಲ ಶರೀರ ಸುಖವೇ ಅಂತಿಮ' ಎಂಬುದೇ ನಾಗರಿಕತೆಯ ಮೂಲ ಮಂತ್ರವಾಗಿದೆ-ಎಂಬ ಒಂದೇ ಮಾತಿನ ಮೂಲಕ ಇಂದಿನ ನಾಗರಿಕತೆಯ ವಿವರಣೆಯನ್ನು ಗಾಂಧೀಜಿ ಅದ್ಭುತವಾಗಿ ಕೊಟ್ಟಿದ್ದಾರೆ. ಶಿಕ್ಷಣವನ್ನು ಅವರು ಒಂದು ಆಯುಧಕ್ಕೆ ಹೋಲಿಸಿರುವುದೂ ಅನನ್ಯವಾಗಿದೆ. 'ಅಕ್ಷರಜ್ಞಾನವೇ ಶಿಕ್ಷಣ" ಎಂಬ ಆಧುನಿಕ ಸೂತ್ರವನ್ನೂ ಗಾಂಧೀಜಿ ಒಪ್ಪುವುದಿಲ್ಲ. ಭಾರತಕ್ಕೆ ಸಹಜವಾಗಿರುವ ಆದರೆ ಇಂದು ಹೆಚ್ಚು ಅನಿವಾರ್ಯವಾಗಿರುವ ನೈತಿಕ ಶಿಕ್ಷಣ, ಎಂದರೆ ಧಾರ್ಮಿಕ ಶಿಕ್ಷಣದ ಅನಿವಾರ್ಯತೆಯನ್ನು ಸೊಗಸಾಗಿ ಪ್ರತಿಪದಿಸಿದ್ದಾರೆ. ಅವರು ಢೋಂಗಿ ಧರ್ಮೋಪದೇಶಕರ ಕಾಪಟ್ಯವನ್ನೂ ಗುರುತಿಸುತ್ತಾರೆಂಬುದನ್ನು ಇಲ್ಲಿ ಗಮನಿಸತಕ್ಕದ್ದು. ಪಶ್ಚಿಮಬುದ್ಧಿಪ್ರಣೀತ ಅಕ್ಷರ ಶಿಕ್ಷಣವನ್ನು ಕೊಡಬೇಕೆಂದು ತೀರ್ಮಾನಿಸಿದ್ದೇ ನಾವು ಮಾಡಿದ ದೊಡ್ಡ ತಪ್ಪು ಎನ್ನುವ ಗಾಂಧೀಜಿಯವರಿಗೆ 'ನಮ್ಮ' ಇಂದಿನ ಶಿಕ್ಷಣ ಸಂಸ್ಥೆಗಳು ಹಿಡಿಶಾಪವನ್ನು ಹಾಕದೆ ಬಿಡುವುದಿಲ್ಲವೆನ್ನಿ! ಭಾರತದ ಇಂದಿನ ಎಷ್ಟೋ ಸಮಸ್ಯೆಗಳಿಗೆ ಮೂಲ ಈ ಶಿಕ್ಷಣ ಪದ್ಧತಿಯಲ್ಲಿಯೇ ಇದೆ ಎಂಬುದನ್ನು ಎಷ್ಟು ಬೇಗ ಅರಿತುಕೊಂಡರೆ ನಮಗೆ ಅಷ್ಟು ಒಳ್ಳೆಯದಾಗುತ್ತದೆ. "The Bugbear of Literacy" ಎಂಬ ಆನಂದ ಕುಮಾರಸ್ವಾಮಿಯವರ ಲೇಖನವನ್ನೂ ಇಲ್ಲಿ ಓದಿಕೊಂಡಾಗ ಗಾಂಧೀಜಿಯವರ ಮಹತ್ವ ಮತ್ತೂ ಬೆಳಕಿಗೆ ಬರುತ್ತದೆ. "ನಿಮ್ಮ ಶಾಲೆ, ನ್ಯಾಯಾಲಯಗಳು ನಿಷ್ಪ್ರಯೋಜಕ; ನಮ್ಮ ಹಳೆಯ ಪಾಠಶಾಲೆಗಳನ್ನೂ ನ್ಯಾಯಾಲಯಗಳನ್ನೂ ಮತ್ತೆ ಸ್ಥಾಪಿಸುತ್ತೇವೆ" ಎಂದು ಇಂಗ್ಲಿಷರಿಗೆ ಗಾಂಧೀಜಿ ಎಸೆದಿದ್ದ ಸವಾಲನ್ನು ಗುರಿಮುಟ್ಟಿಸುವ ಸಂಕಲ್ಪವನ್ನು ನಾವು ಮಾಡಬೇಕಿದೆ. ಗಾಂಧೀಜಿಯವರಿಗೆ 'ಗುರಿ' ಎಷ್ಟು ಮುಖ್ಯವಾಗುತ್ತದೆಯೋ 'ಮಾರ್ಗ' ಅದಕ್ಕಿಂತಲೂ ಹೆಚ್ಚು ಮುಖ್ಯವಾಗುತ್ತದೆ. "ನಿರರ್ಥಕ ಔಷಧವನ್ನು ಸೇವಿಸದೆ ರೋಗಿ ಸತ್ತರೆ ಅದರಿಂದ ಜಗತ್ತಿಗೇನೂ ನಷ್ಟವಿಲ್ಲ" ಎನ್ನುವಲ್ಲಿ ಅವರ ಈ ಕಠೋರ

ಮಾರ್ಗಾಸಕ್ತಿಯು ಎದ್ದು ಕಾಣುತ್ತದೆ. "ದರಿದ್ರ ಹಿಂದೂಸ್ಥಾನ ಸ್ವತಂತ್ರವಾಗಬಲ್ಲದು; ಆದರೆ ನೀತಿಭ್ರಷ್ಟವಾಗಿ ಧನವಂತವಾದ ಹಿಂದೂಸ್ಥಾನ ಸ್ವತಂತ್ರವಾಗುವುದು ಕಷ್ಟ" ಎನ್ನುತ್ತಾರೆ. 'ನಾವಿಂದು ಸ್ವತಂತ್ರವಾಗಿಲ್ಲವೇನೊ?' ಎಂಬ ಸಂಶಯ ನಮ್ಮನ್ನು ಆಗಾಗ ಕಾಡಲು ಕಾರಣವೇನೆಂದು ಕಂಡುಕೊಳ್ಳುವಷ್ಟು ಅರಿವು ನಮ್ಮಿಂದ ಇನ್ನೂ ಪೂರ್ಣವಾಗಿ ಮರೆಯಾಗಿಲ್ಲ ಎಂದು ಸಮಾಧಾನವನ್ನು ತಂದುಕೊಳ್ಳಲು ನಮಗೆ ಸಾಧ್ಯವೆ? ಹೀಗೆಂದು, ನೈತಿಕತೆಯು ಸಾಮೂಹಿಕವಾಗಿ ಬೆಳೆಯುವ ಒಂದು ಫಸಲು-ಎಂಬಂಥ ಧೋರಣೆಯಿದ್ದವರಲ್ಲ ಗಾಂಧೀಜಿ. ಆದುದರಿಂದ ಅವರು ಪ್ರತಿ ವ್ಯಕ್ತಿಯೂ ಮೊದಲಿಗೆ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸಬೇಕೆ ಹೊರತು, 'ಅವರು ಮಾಡಲಿ, ಇವರು ಮಾಡಲಿ' ಎಂದು ಕಾಯಬಾರದು ಎಂದು ತಾಕೀತು ಮಾಡುವುದು.

'ಹಿಂದ್ ಸ್ವರಾಜ್'ನ ಭಾಷೆ, ನಿರೂಪಣಾ ವಿಧಾನ, ಶೈಲಿಗಳನ್ನು ನೋಡಿದಾಗ ಗಾಂಧೀಜಿ ಒಬ್ಬ ಸಾಹಿತಿಯಾಗಿಯೂ ಮುಖ್ಯರಾಗುತ್ತಾರೆ. ನಮ್ಮ ದಿನ ದಿನದ ಸಾಧಾರಣ ವಿವರಗಳನ್ನೇ ರೂಪಕಗಳನ್ನಾಗಿ, ಉಪಮೆಗಳನ್ನಾಗಿ ಉಪಯೋಗಿಸಿಕೊಂಡು ವಿಷಯ ಪ್ರತಿಪಾದನೆಯನ್ನು ಮಾಡುವ ಅವರ ಕಲೆಗಾರಿಕೆ ಅನುಪಮವಾದುದು. ಅವರ ಸರಳ ನಿರೂಪಣೆಯಂತೂ ಆಕರ್ಷಕವಾಗಿದ್ದು ತತ್ವ ಪ್ರತಿಪಾದನೆಗೆ ಒಂದು ಮಾದರಿಯಾಗಿ ನಿಲ್ಲಬಹುದು. 'ಹಿಂದ್ ಸ್ವರಾಜ್' ಪ್ರಕಟವಾದ ಆರಂಭದಿಂದಲೂ ನಾಲ್ಕಾರು ದಿಕ್ಕುಗಳಿಂದ ಟೀಕೆಗಳನ್ನು ಎದುರಿಸುತ್ತಲೇ ಬಂದಿದೆ. ಈ ಟೀಕೆಗಳಿಗೆ ಕಾರಣವಾದದ್ದೇ ಅದರ ಸರಳ ನಿರೂಪಣೆಯಿಂದ ಒದಗಿದ ವಿಷಯ ಗ್ರಹಣ ಸೌಲಭ್ಯ ಎಂದೂ ಹೇಳಬಹುದೆನ್ನಿಸುತ್ತದೆ. ಜೇಮ್ಸ್ ಎಫ್. ಕ್ರೋ ಎಂಬಾತನ ಮಾತೊಂದು ಇಲ್ಲಿ ಉಲ್ಲೇಖನೀಯ- "It is easier to critidize what you understand" 'ಅರ್ಥವಾದದ್ದನ್ನು ಟೀಕಿಸುವುದು ಸುಲಭ', ಅಲ್ಲವೆ?

ಹಲವರು ಚರ್ಚೆಗಳಿಗೆ, ಚಿಂತನೆಗಳಿಗೆ, ತಾತ್ವಿಕಪ್ರಸ್ಥಾನಗಳಿಗೆ ಒಡ್ಡಿಸಿಕೊಳ್ಳಬಲ್ಲಂಥ ಸಶಕ್ತ ಕೃತಿ 'ಹಿಂದ್ ಸ್ವರಾಜ್'. ಭಾರತೀಯರೆಲ್ಲರೂ ತಪ್ಪದೇ ಓದಲೇಬೇಕಾದ ಕೃತಿ ಇದು- ಎಂಬ ಮಾತು ಅತ್ಯುಕ್ತಿಯಾಗದು.

* * *

ಸದ್ವಿಚಾರಗಳು ನಮ್ಮೆಡೆಗೆ ಬರಲಿ

– *ವಿನೋಬಾ*

ಋಷಿಗಳು ತಮ್ಮ ಪತ್ನಿಯರನ್ನು ಜೊತೆ ಕರೆದುಕೊಂಡು ಪರಮೇಶ್ವರನ ಪೂಜೆ ಮಾಡುತ್ತಾರೆ, ನಮಸ್ಕಾರ ಮಾಡುತ್ತಾರೆ, ಹೇಗೆ? ಮಂಡಿಯೂರಿ. ಋಷಿ; ಸಕುಟುಂಬ, ಸಪರಿವಾರ ಪೂಜೆ ಮಾಡುತ್ತಿದ್ದಾರೆ–

ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ।

ನಮ್ಮ ಕಡೆಗೆ ಭದ್ರ ವಿಚಾರ, ಭದ್ರ ಸಂಕಲ್ಪ, ಜಗತ್ತಿನ ಎಲ್ಲ ಕಡೆಯಿಂದ ಬರಲಿ.

ಇಡೀ ವಿಶ್ವದಿಂದ ಮಂಗಳಕರವಾದ ವಿಚಾರಗಳು ನಮ್ಮ ಬಳಿ ಬರಲಿ ಎಂಬುದಾಗಿ ವೇದ ಭಗವಂತನ ಆಜ್ಞೆ, ನಾವು ಅವೆಲ್ಲವುಗಳ ಸ್ವಾಗತ ಮಾಡುತ್ತೇವೆ. ಈ ವಿಚಾರ ಸ್ವದೇಶಿಯೇ ಅಥವಾ ವಿದೇಶಿಯೇ, ಹಳೆಯದೇ ಅಥವಾ ಹೊಸದೇ; ಇದಾವುದನ್ನೂ ನೋಡದೆ ಆ ವಿಚಾರ ಸರಿಯಿದೆಯೇ ಇಲ್ಲವೇ ಎಂಬುದಷ್ಟನ್ನೇ ಯೋಚಿಸುವೆವು. ಸರಿಯಾಗಿದ್ದರೆ ತೆಗೆದುಕೊಳ್ಳಲಾಗುವುದು. ವೇದಗಳಲ್ಲಿ ವಿವಿಧ ದೇವತೆಗಳಿದ್ದಾರೆ. ಅವರೆಲ್ಲರೂ ಒಬ್ಬನೇ ಪರಮೆಶ್ವರನ ಅಂಗಭೂತವೆಂದು ತಿಳಿಯಲಾಗಿದೆ. ಹೇಗೆ ಈಶಾವಾಸ್ಯೋಪನಿಷತ್ ಈಶ್ವರನ ಉಪಾಸನೆಯನ್ನು ಕಲಿಸುತ್ತದೋ ಹಾಗೆ ಅದೇ ಉಪಾಸನೆಯನ್ನು ವೇದವು ಕೂಡ ಕಲಿಸುತ್ತದೆ. ವೇದಗಳಲ್ಲಿ ಇರುವ ವಿವಿಧ ದೇವತೆಗಳು ಸಾಧಕನ ಮನಸ್ಸಿನ ವಿಕಾಸಕ್ಕಾಗಿ ವರ್ಣಿತವಾಗಿವೆ. ಯಾವುದೇ ವಿಶಿಷ್ಟ ದೇವತೆಗಳ ಸ್ವರೂಪದ ನಿರ್ಧಾರವಾಗಬೇಕಾದರೆ ಸಂಪೂರ್ಣ ವೇದ ಮನಸ್ಸಿನೆದುರಿಗೆ ಉಪಸ್ಥಿತವಾಗಿರಬೇಕಾಗುತ್ತದೆ. ಅಲ್ಲದೇ ಶಾಂತಿಮಂತ್ರದ ಅರ್ಥದ ಪ್ರಕಟಣೆಗಾಗಿ ತನ್ನನ್ನು ಪೂರ್ಣವೆಂದು ತಿಳಿಯಬೇಕು. ಶಾಂತಿಮಂತ್ರ ತನ್ನ ಅರ್ಥವನ್ನು ತಾನೇ ಹೇಳಬೇಕೆಂದು ಅಪೇಕ್ಷೆಯಿದೆ. ವೇದದ ಒಂದು ಶಾಂತಿಮಂತ್ರ ಹೀಗಿದೆ :–

ಸ್ವಸ್ತಿನಃ ಇಂದ್ರೋ ವೃದ್ಧಶ್ರವಾಃ
ಸ್ವಸ್ತಿನಃ ಪೂಷಾಃ ವಿಶ್ವ ವೇದಾಃ।
ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟನೇಮಿಃ
ಸ್ವಸ್ತಿನೋ ಬೃಹಸ್ಪತಿರ್ದಧಾತು॥

ಈ ಮಂತ್ರದ ನಾಲ್ಕು ಚರಣಗಳಲ್ಲಿ ನಾಲ್ಕು ದೇವತೆಗಳು ಪ್ರಸ್ತಾಪಿಸಲ್ಪಟ್ಟಿವೆ ಮತ್ತು ಅವುಗಳ ವಿವರಣೆಯನ್ನು ಕೂಡ ಮಾಡಲಾಗಿದೆ. ಇಂದ್ರ ಯಾರು? ಯಾರು ವೃದ್ಧಾಶರೋ ಅವರು. ಪೂಷಾ ಯಾರು? ವಿಶ್ವ ವೇದರು. ತಾರ್ಕ್ಷ್ಯ ಯಾರು? ಅರಿಷ್ಟನೇಮಿ. ಬೃಹಸ್ಪತಿ ಯಾರು? ಇದಕ್ಕೆ ಉತ್ತರ ಕಾಣುತ್ತಿಲ್ಲ. ಅಂದರೆ ಈ ಶಬ್ದದಲ್ಲಿಯೇ ಅದರ ಅರ್ಥವಿದೆ. ಉಚ್ಚಾರಣೆ ಮಾಡಿ ಆ ಚರಣವನ್ನು ಪೂರ್ತಿ ಮಾಡುವುದಾದರೆ ಸ್ವಸ್ತಿನೋ ಬೃಹಸ್ಪತಿರ್ಬೃಹಸ್ಪತಿಃ; ಹೀಗೆ ಬರೆಯಬೇಕಾಗುವುದು. ಇನ್ನೂ ವಿವರಣೆಯ

ಅರ್ಥವನ್ನು ನೋಡೋಣ– ವೃದ್ಧಶ್ರವಾಃ, 'ಶ್ರುತಿ' ಅಥವಾ 'ಶ್ರವಸ್' ಶಬ್ದಗಳು ಸಾಕ್ಷಾತ್ಕಾರಯುಕ್ತ ಜ್ಞಾನಕ್ಕಾಗಿ ಉಪಯೋಗಕ್ಕೆ ಬರುತ್ತವೆ. ಪರಮೇಶ್ವರನ ಶಬ್ದದ ಪ್ರತ್ಯಕ್ಷ ಕೇಳುವಿಕೆಯೇ 'ಶ್ರುತಿ'. ಅದೇ ಶ್ರವಸ್, ಅಂದರೆ ಇಂಗ್ಲಿಷ್‌ನಲ್ಲಿ ಹೇಳುವ 'ರಿವಿಲೇಷನ್'. ಇದನ್ನೇ ಹಳೆಯ ಭಾಷೆಯಲ್ಲಿ 'ವಿಜ್ಞಾನ'ವೆನ್ನುತ್ತಾರೆ. ವಿಜ್ಞಾನದ ಅರ್ಥ ವಿವಿಧ ಜ್ಞಾನ ಅಂದರೆ 'ಸೈನ್ಸ್' ಅಂತಲೂ ಆಗುತ್ತದೆ. ಆದರೆ ವಿಶೇಷ ಜ್ಞಾನಾನುಭವ. ವಿಜ್ಞಾನ ಶಬ್ದವು ವೇದಾಂತದ ಪಾರಿಭಾಷಿಕ ಶಬ್ದ. ಯಾರ ವಿಜ್ಞಾನ ಬೆಳೆದಿದೆಯೋ, ವ್ಯಾಪಕವಾಗಿದೆಯೋ ಅವನು ಇಂದ್ರ. ಇಂದ್ರನೆಂದರೆ 'ಇದಂ ದೃಷ್ಟ್ವಾ'. ಹೀಗೆ ಒಂದು ನಿರುಕ್ತಿಯನ್ನು ಉಪನಿಷತ್ತುಗಳು ಮಾಡಿವೆ.

ವಿಶ್ವ ವೇದಾಃ– 'ವೇದಸ್' ಶಬ್ದ ಚಿತ್ತ ವಾಚಕ. ಚಿತ್ತ ಅಂದರೆ ಪ್ರಾಪ್ತ ಮಾಡಿದುದೆಲ್ಲವೂ. ಹೀಗೆ ಆ ವಾಕ್ಯದ ಅರ್ಥ. ವಿಶ್ವ ಎಂಬ ಶಬ್ದ ಸರ್ವ ವಾಚಕ. ವಿಶ್ವ ವೇದಾಃ ಅಂದರೆ ಸಂಪೂರ್ಣ ಚಿತ್ತದ ಸ್ವಾಮಿ. ಅದೇ ಪೂಷಾಃ, ಅಂದರೆ ನಿರುಕ್ತಿಯಿಂದ ಪೋಷಣೆ ಮಾಡುವವ. ಸೂರ್ಯ ಕಿರಣಗಳಲ್ಲಿ ಪೋಷಣೆಯಿದೆ. ಆದ್ದರಿಂದ ಸೌರ ದೇವತೆಯನ್ನಾಗಿ ಪೂಷೆಯನ್ನು ತಿಳಿಯಲಾಗಿದೆ. ಆದರೆ ಪೃಥ್ವಿಗೂ ಪೂಷಾ ಎನ್ನುತ್ತಾರೆ **ಇಯಂ ವೈ ಪೂಷಾಃ** ಈ ಪೃಥ್ವಿಯು ಪೂಷಾ, ಏಕೆಂದರೆ ಅದು ಎಲ್ಲರ ಪೋಷಣೆ ಮಾಡುತ್ತದೆ. **ಅರಿಷ್ಟನೇಮಿಃ** ನೇಮಿ ಅಂದರೆ ರಥದ ಚಕ್ರ. ಯಾರ ರಥದ ಚಕ್ರ ಎಂದಿಗೂ ಕುಂಠಿತವಾಗುವುದಿಲ್ಲವೋ, ಅಖಂಡ, ಅಕುಂಠಿತ, ಅಪ್ರತೀತ, ವಿರಾಟ್ ಪ್ರಾಣ ಶಕ್ತಿಯೇ ತಾರ್ಕ್ಷ್ಯ ದೇವತೆ. ಅಹಮೇವಾ ಅಕ್ಷಯಃ ಕಾಲಃ (ಗೀ–೧೧ನೇ ಅಧ್ಯಾಯ, ೩೨ನೇ ಶ್ಲೋಕ). ಇದು ಗೀತೋಕ್ತ ಕಾಲಪುರುಷ. ಇವೆರಡು ಕಲ್ಪನೆಗಳನ್ನು ಒಟ್ಟಾಗಿ ಸೇರಿಸಿದಾಗ 'ತಾರ್ಕ್ಷ್ಯ' ದೇವತೆಯಾಗುತ್ತದೆ. 'ತೃಕ್ಷ' ಧಾತು ನಮ್ಮ ಶರೀರದಲ್ಲಿ ಕೊನೆಯವರೆಗೂ ಪ್ರಾಣ ಸತತವಾಗಿ ಕೆಲಸ ಮಾಡುತ್ತಿರುತ್ತದೆ. ಇಂದ್ರಿಯಾದಿಗಳೆಲ್ಲವೂ ಗಾಢ ನಿದ್ರೆಯಲ್ಲಿ ಲೀನವಾದರೂ ಕೂಡ ಪ್ರಾಣವು ಜಾಗೃತವಾಗಿರುತ್ತದೆ ಎಂಬಿತ್ಯಾದಿ ವರ್ಣನೆಯು ಪ್ರಾಣದ ಮಹತ್ತನ್ನು ತೋರಿಸುವುದಕ್ಕಾಗಿ ಶ್ರುತಿಯಲ್ಲಿ ಬಂದಿದೆ.

ಬೃಹಸ್ಪತಿಃ ವಾಗ್ ವೈ ಬೃಹತಿ ತಸ್ಯಾ ಪತಿಃ ವಾಚಸ್ಪತಿಃ ಇತ್ಯರ್ಥಃ।

ವಾಣಿಯ ದೇವತೆ ಬೃಹಸ್ಪತಿ– ಈ ಅರ್ಥ ಸ್ಪಷ್ಟವಾಗಿಯೇ ಇದೆ. ಒಟ್ಟಿನಲ್ಲಿ ಈ ಮಂತ್ರದಲ್ಲಿ ಬುದ್ಧಿಸ್ಥ ವಿಜ್ಞಾನ, ಶರೀರ ಪೋಷಣೆ, ಪ್ರಾಣ ಬಲ ಮತ್ತು ವಾಕ್ ಶಕ್ತಿ ಹೀಗೆ ಚತುರ್ವಿಧ ರೀತಿಯಲ್ಲಿ 'ಸ್ವಸ್ತಿ ವಾಚನ' ಹೇಳಿದೆ.

ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷ್ಯಭಿರ್ಯಜತ್ರಾಃ।
ಸ್ಥಿರೈರಂಗೈಸ್ತುಷ್ಟುವಾಜಸ್ಸಸ್ತನೂಭಿಃ ವ್ಯಶೇಮ ದೇವಹಿತಂ ಯದಾಯುಃ॥

ಹೇ ದೇವ ಗಣಗಳೇ! ನಾವು ಕಿವಿಗಳಿಂದ ಶುಭ ವಚನಗಳನ್ನು ಕೇಳುವಂತಾಗಲಿ, ಹೇ ಪೂಜನೀಯರೇ! ಕಣ್ಣುಗಳು ಶುಭವನ್ನೇ ನೋಡಲಿ, ನಿಮ್ಮ ಸ್ತುತಿ ಮಾಡುತ್ತ ಮಾಡುತ್ತ ನಾವು ಸ್ಥಿರ ಅಂಗಗಳಿಂದ, ಗಟ್ಟಿ ಶರೀರದಿಂದ ಭಗವಂತ ಕೊಟ್ಟಿರುವ ಆಯುಷ್ಯಕ್ಕೆ ಪ್ರಾಪ್ತವಾಗುತ್ತೇವೆ.

* * *

ಕ್ರಿಯಾಶೀಲ ವ್ಯಕ್ತಿಯ ಬಾಲ್ಯ

ಮೊದಲ ಬಾರಿಯ ಸಂಭಾಷಣೆ ತುಂಬ ಇತ್ತೀಚಿನ ಘಟನೆಗಳನ್ನು ಕುರಿತಾದುದಾಗಿತ್ತು. ತೆಹರಿ ಅಣೆಕಟ್ಟು ವಿರುದ್ಧ ೧೯೯೫ ಮೇ ಮಾಹೆಯಲ್ಲಿ ೪೫ ದಿನಗಳ ಅವಧಿಯ ಉಪವಾಸ ಕೈಗೊಂಡು, ಯೋಜನೆಯ ಬಗ್ಗೆ ಸಮಗ್ರ ಅಧ್ಯಯನ ಕೈಗೊಳ್ಳುವ ಭರವಸೆಯನ್ನು ಅಂದಿನ ಪ್ರಧಾನಿ ಭರವಸೆ ಕೊಟ್ಟಮೇಲೆ ಉಪವಾಸವನ್ನು ನಿಲ್ಲಿಸಿ, ನಂತರ ಆ ಭರವಸೆಯನ್ನು ಸರ್ಕಾರ ಕೈಗೂಡಿಸದೇ ಇದ್ದುದರಿಂದ ಒಂದು ವರ್ಷದ ನಂತರ ಪುನಃ ಏಪ್ರಿಲ್ ೧೯೯೬ರಲ್ಲಿ ಮೊದಲಿನ ಉಪವಾಸದಿಂದ ತಮಗೆ ಅಂತಿಮವಾಗಿ ನ್ಯಾಯ ಮತ್ತು ಭದ್ರತೆ ಒದಗಿಸುವುದೆಂದು ನಂಬಿದ್ದ ಜನರ ಕೈಬಿಟ್ಟಂತಾಯಿತೆಂದು ಭಾವಿಸಿ ೭೪ ದಿನಗಳ ಅವಧಿಯ ಪ್ರಾಯಶ್ಚಿತ್ತ ಉಪವಾಸ ಕೈಗೊಂಡ ಈ ವ್ಯಕ್ತಿಯ ಮನದಾಳದಲ್ಲಿಯ ಪ್ರೇರಣೆ ಎಂಥದೆಂಬುದನ್ನು ತಿಳಿಯ ಬಯಸಿದ್ದೆ. ಪ್ರತಿಷ್ಠಿತ ಪುರುಷ ಮತ್ತು ಮಹಿಳೆಯರ ಉದ್ದೇಶಗಳು ತಂತ್ರಗಾರಿಕೆಯದಾಗಿ ಪರಿವರ್ತನೆಗೊಳ್ಳುವ ಈ ಯುಗದಲ್ಲಿ ಮಾಧ್ಯಮಗಳಲ್ಲಿ ಅಥವಾ ಶೈಕ್ಷಣಿಕ ಅಧ್ಯಯನಗಳಲ್ಲಿ ಹಿಮಾಲಯ ಕುರಿತಾದ ರೈತ ಚಳುವಳಿಗಳ ಬಗ್ಗೆ ಪ್ರಕಟಗೊಂಡಿರುವ ವಿಷಯಗಳಿಗಿಂತ ಹೆಚ್ಚಿನದನ್ನು ನಾನು ಕೇಳಲು ಬಯಸಿದ್ದೆ. "ಈ ಅಣೆಕಟ್ಟು ಮುಂದುವರಿದಲ್ಲಿ ನನ್ನ ಈ ಗುಡಿಸಲು ಮುಳುಗಿ ಹೋಗುವುದು, ಅದೇ ಮೊಟ್ಟ ಮೊದಲನೆಯ ಮಾನವ ನಿರ್ವಾಸವಾಗುವುದು". ಸುಭದ್ರವಾಗಿ ಕಟ್ಟಲಾದ ಅಣೆಕಟ್ಟು ನನ್ನ ಕಣ್ಣಿಗೆ ರಾಚುತ್ತಿತ್ತು. ಆ ಅಣೆಕಟ್ಟಿನ ಅಡಿಪಾಯದಿಂದ ಈ ಗುಡಿಸಲು ನೂರು ಮೀಟರ್‌ಗಳಷ್ಟು ದೂರವಿತ್ತು. "ನಾನಿಲ್ಲಿ ಸತ್ಯಾಗ್ರಹ ಮಾಡುತ್ತಿದ್ದೇನೆ. ಈ ಅಣೆಕಟ್ಟನ್ನು ವಿರೋಧಿಸಿ ನಾನು ಅಹಿಂಸಾತ್ಮಕ ಜೀವನವನ್ನು ನಡೆಸುತ್ತಿದ್ದೇನೆ".

ಬಹುಗುಣರವರು ತಮ್ಮ ವಯಸ್ಸಿನ ೭೦ರ ದಶಕದಲ್ಲಿದ್ದರು. ಅವರಿಗೆ ಸಂದಾಯವಾಗುತ್ತಿದ್ದ ಸಾರ್ವತ್ರಿಕ ವಿಶ್ವಾಸನೀಯತೆ ಬಂದದ್ದು ಅವರ ವಯಸ್ಸು ಮತ್ತು ಅನುಭವದ ಕಾರಣದಿಂದಾಗಿ. ಪರಿಸರದ ವಿಷಯದಲ್ಲಿ ಅವರ ತೊಡಗುವಿಕೆ ಯಾವಾಗಿನಿಂದ ಪ್ರಾರಂಭವಾಯಿತು ಎಂಬುದನ್ನು ತಿಳಿಯಲು ಅವರ ಬಾಲ್ಯದ ಜೀವನದ ಬಗ್ಗೆ ಪ್ರಶ್ನೆಗಳನ್ನು ಕೇಳಲಾರಂಭಿಸಿದೆ. ಸುಂದರ್‌ಲಾಲ್ ಬಹುಗುಣರು ೧೯೨೭ರ ಜನವರಿ ೯ರಂದು ಜನಿಸಿದರು. ತೆಹರಿ-ಘರ್‌ವಾಲ್ ಪ್ರದೇಶದ ಅರಣ್ಯಾಧಿಕಾರಿಯ ಐದನೆಯ ಮಗನಾಗಿ ಜನಿಸಿದರು. ತಮಗೆ ಮರಗಳ ಬಗ್ಗೆ ಮತ್ತು ಹಿಮಾಲಯದ ಕಾಡುಗಳ ಬಗ್ಗೆ ಪ್ರೇಮಭಾವನೆ ಉಂಟಾದದ್ದು ತಮ್ಮ ತಂದೆಯ ಕಾರಣದಿಂದ ಎಂದು ಹೇಳಿದರು. ತಂದೆಯ ಅಪ್ಪುಗೆಯಲ್ಲಿ ಕುದುರೆ ಮೇಲೆ ಕುಳಿತು ಘರ್‌ವಾಲ್ ರಾಜ್ಯದ ಕಾಡುಗಳಲ್ಲಿ ಸಂಚಾರ ಮಾಡಿದ್ದು ಅವರ ಬಾಲ್ಯದ ನೆನಪಿನ ಮುಖ್ಯ ಸಂಗತಿ. ಕಾಡಿನ ಭವ್ಯತೆ ಅನಂತವೆಂದು ತೋರಿತು. ಗಂಗಾನದಿಯ ಬಗ್ಗೆ

ಅವರ ತಂದೆ ತಾಯಿಗಳು ಇಟ್ಟುಕೊಂಡಿದ್ದ ಪ್ರೇಮ ಇವರಲ್ಲಿಯೂ ಉದ್ಭವಿಸಿತು. ತಂದೆ–ತಾಯಿಗಳು ಗಂಗೆಯ ಭಕ್ತರಾಗಿದ್ದರು. ಸುಂದರಲಾಲ್ ಎಂಟು ವರ್ಷದ ಬಾಲಕನಿದ್ದಾಗ ಅವರ ತಂದೆ ತೀರಿಕೊಂಡರು. ತಾಯಿಯವರಿಂದ ದೊರೆತ ಪ್ರೇಮಮಯ ಪೋಷಣೆ ಮತ್ತು ಬೆಂಬಲದಿಂದ ಅವರ ಬಾಲ್ಯ ಕಳೆಯಿತು. "ನಿಮ್ಮ ತಂದೆ ತೀರಿಕೊಳ್ಳಲು ಕಾರಣವೇನು" ಎಂದು ಕೇಳಿದೆ. "ಅವರು ಎಮರೋಯ್ಡ್ಸ್‌ನಿಂದ ಬಳಲುತ್ತಿದ್ದರು. ಶಸ್ತ್ರ ಚಿಕಿತ್ಸೆಗಾಗಿ ಡೆಹರಾಡೂನ್‌ಗೆ ಹೋಗಿದ್ದರು. ಅಲ್ಲಿ ಬೌಚಾರ್ಡ್ ಎಂಬ ತುಂಬ ಒಳ್ಳೆ ವೈದ್ಯರಿದ್ದರು. ನಮ್ಮ ತಂದೆ ಅವರ ಬಳಿ ಡೋಲಿಯಲ್ಲಿ ಕುಳಿತು ಹೋಗಿದ್ದರು. ಆ ಡೋಲಿಯ ಮೇಲೆ ವ್ಯಕ್ತಿ ಕುಳಿತುಕೊಂಡರೆ ನಾಲ್ಕು ಜನರು ಅದನ್ನು ಎತ್ತಿಕೊಂಡು ಹೋಗುತ್ತಿದ್ದರು. ತಂದೆ ಮಸ್ಸೂರಿಯಿಂದ ಹಿಂದಿರುಗುವಾಗ ಆ ಡೋಲಿಯನ್ನು ದಂಡತಿ ಎಂಬಲ್ಲಿ ಕೆಳಗಿಳಿಸಲು ಹೇಳಿದರು. ತಾವು ಸ್ವತಃ ನೆಟ್ಟಿದ್ದ ಮರಗಳನ್ನು ಅವರು ನೋಡಲು ಬಯಸಿದ್ದರು. ಅವರು ಹಿಂತಿರುಗಿ ಬಂದ ನಂತರ ಎರಡು ದಿನಗಳಲ್ಲಿ ತೀರಿಕೊಂಡರು". "ನಿಮ್ಮ ಒಡಹುಟ್ಟಿದವರ ಬಗ್ಗೆ ಹೇಳಿ" ಎಂದು ಕೇಳಿದೆ. "ನನಗೆ ಇಬ್ಬರು ಅಣ್ಣಂದಿರು ಮತ್ತು ಇಬ್ಬರು ಅಕ್ಕಂದಿರು. ಇನ್ನೊಬ್ಬ ಅಣ್ಣನಿದ್ದ ಆತ ಹದಿನೈದನೇ ವಯಸ್ಸಿನಲ್ಲಿ ತೀರಿಕೊಂಡ". "ಅವನು ಹೇಗೆ ತೀರಿಕೊಂಡ" ಎಂದು ನಾನು ವಿಚಾರಿಸಿದೆ. ಸುಂದರಲಾಲರು "ಬಹುಶಃ ಕಾಲರಾದಿಂದ ಸತ್ತಿರಬಹುದು. ಇದನ್ನು ನಾನು ಕೇಳಿ ಮಾತ್ರಬಲ್ಲೆ. ಏಕೆಂದರೆ ಅವನು ಸತ್ತಾಗ ನಾನು ಹುಟ್ಟಿರಲಿಲ್ಲ. ನಾನು ಐದನೆಯವನು ಮತ್ತು ಎಲ್ಲರಿಗಿಂತ ಕಿರಿಯವನು" ಎಂದು ಹೇಳಿದರು. "ತೆಹರಿಯಲ್ಲಿ ವಾಸಿಸಲು ಬಂದಾಗ ನಿಮ್ಮ ವಯಸ್ಸೆಷ್ಟು" ನಾನು ಕೇಳಿದೆ. "ಎಂಟನೆಯ ವಯಸ್ಸಿನಲ್ಲಿ ನನ್ನ ಪ್ರಾಥಮಿಕ ಪರೀಕ್ಷೆ ಮುಗಿಯಿತು. ೧೯೩೫ರಲ್ಲಿ ತೆಹರಿಯಲ್ಲಿ ಐದನೆ ತರಗತಿಗೆ ಸೇರಿದೆ. ೧೯೪೪ರಲ್ಲಿ ಇಂಟರ್ ಮೀಡಿಯಟ್ ತೇರ್ಗಡೆಯಾಗುವವರೆಗೆ ಹಾಗೂ ನನ್ನ ಬಂಧನವಾಗುವವರೆಗೂ ತೆಹರಿಯಲ್ಲೇ ಇದ್ದೆ." –ಬಹುಗುಣ ಹೇಳಿದರು.

(ಮುಂದುವರಿಯುವುದು...)

* * *

ಸನ್ಮಾನ್ಯರಿಂದ...

ಗೋಹತ್ಯೆಯ ಬಗ್ಗೆ ಎದ್ದಿರುವ ವಿವಾದಗಳ ಹಿನ್ನೆಲೆಯಲ್ಲಿ ಗಾಂಧೀಜಿಯವರು ತಮ್ಮ ಯಂಗ್ ಇಂಡಿಯಾ ಪತ್ರಿಕೆಯಲ್ಲಿ 1920ರಲ್ಲಿ ವಿವಿಧ ತಾರೀಖುಗಳಲ್ಲಿ ಬರೆದಿರುವ ವಿಚಾರಗಳನ್ನು ಜನಪದ ವಿಚಾರದಲ್ಲಿ ಪ್ರಕಟಿಸಿದರೆ ಸಕಾಲಿಕವಾಗಿರುತ್ತದೆ.

– ಡಿ.ವಿ.ರಾಮಚಂದ್ರರಾವ್, ಬೆಂಗಳೂರು

ಗೋಹತ್ಯೆ ಕುರಿತಂತೆ ಗಾಂಧೀಜಿ ಚಿಂತನೆ

ಗೋರಕ್ಷಣೆ ಹಿಂದೂ ಧರ್ಮದ ಕೇಂದ್ರ ಬಿಂದು ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಅದು ವಿವಿಧ ವರ್ಗದ ಜನರಿಗೂ ಮತ್ತು ಜನಸಾಮಾನ್ಯರಿಗೂ ಸಂಬಂಧಿಸಿದ್ದಾಗಿದೆ. ಆದರೆ ಆ ಕಾರಣದಿಂದಾಗಿ ಮುಸ್ಲಿಮರ ವಿರುದ್ಧ ಹಗೆ ಏಕೆ ಎಂಬುದು ತಿಳಿಯದುದಾಗಿದೆ. ಇಂಗ್ಲಿಷ್ ಜನರಿಗಾಗಿ ದಿನಾಲೂ ನಡೆಯುವ ಗೋಹತ್ಯೆಯ ಕುರಿತು ಏನನ್ನೂ ಮಾತನಾಡುವುದಿಲ್ಲ. ಆದರೆ ಮುಸಲ್ಮಾನ ಗೋಹತ್ಯೆ ಮಾಡಿದರೆ ನಾವು ಅತಿಯಗಿ ಕೋಪಿಸಿಕೊಳ್ಳುತ್ತೇವೆ. ಗೋವಿನ ಹೆಸರಿನಲ್ಲಿ ನಡೆದಿರುವ ಎಲ್ಲ ದೊಂಬಿಗಳು ಹುಚ್ಚು ಪ್ರಯತ್ನವೆಂದೇ ಹೇಳಬೇಕು. ಆ ದೊಂಬಿಗಳಿಂದಾಗಿ ಒಂದೇ ಒಂದು ಗೋವನ್ನೂ ಉಳಿಸಲಾಗಿಲ್ಲ. ಬದಲಿಗೆ ಮುಸಲ್ಮಾನರನ್ನು ಇನ್ನಷ್ಟು ಬಿಗಿ ನಿಲುವು ತಳೆಯುವಂತೆ ಮಾಡಿದೆ. ಹಾಗಾಗಿ ಹೆಚ್ಚು ಗೋಹತ್ಯೆ ನಡೆಯಲು ಕಾರಣವಾಗಿದೆ. ೧೯೨೧ರಲ್ಲಿ ಮುಸಲ್ಮಾನರ ಸ್ವಯಂ ಪ್ರೇರಣೆಯಿಂದಾಗಿ ಮತ್ತು ಉದಾರತೆಯಿಂದಾಗಿ ಹೆಚ್ಚು ಹಸುಗಳು ರಕ್ಷಿಸಲ್ಪಟ್ಟಿವೆ. ಹೀಗೆ ರಕ್ಷಿತವಾದ ಹಸುಗಳ ಸಂಖ್ಯೆ ಕಳೆದ ೨೦ ವರ್ಷಗಲ್ಲಿ ಹಿಂದೂಗಳ ಪ್ರಯತ್ನದಿಂದ ರಕ್ಷಿತವಾದ ಹಸುಗಳ ಸಂಖ್ಯೆಗಿಂತ ಹೆಚ್ಚಾಗಿದೆ. ಮುಸಲ್ಮಾನರೊಂದಿಗೆ ಸ್ನೇಹ ಬೆಳೆಸಿ ಹಸುಗಳನ್ನು ಉಳಿಸುವುದನ್ನು ಅವರ ವಿವೇಚನೆಗೆ ಬಿಟ್ಟ ವಿಷಯವನ್ನಾಗಿ ಮಾಡಬೇಕೆಂಬುದು ಪರಿಣಾಮಕಾರಿಯಾದ ಕ್ರಮವಾಗಿದೆ. ಮುಸಲ್ಮಾನರಿಂದ ಆಗುವ ಗೋಹತ್ಯೆಯನ್ನು ತಡೆಯಲು ಸಾಧ್ಯವಾಗದಿದ್ದಲ್ಲಿ ಹಿಂದೂಗಳು ಪಾಪ ಮಾಡಿದಂತಾಗುವುದಿಲ್ಲ. ಆದರೆ ಗೋವನ್ನು ರಕ್ಷಿಸುವುದಕ್ಕಾಗಿ ಮುಸಲ್ಮಾನರೊಂದಿಗೆ ಜಗಳ ಕಾಯುವುದರ ಮೂಲಕ ಪಾಪವನ್ನು ಎಸಗುತ್ತಾರೆ

– ಯಂಗ್ ಇಂಡಿಯಾ, ೨೯-೦೫-೧೯೨೪

ಮುಸಲ್ಮಾನರು ಗೋಹತ್ಯೆ ಮಾಡುವುದನ್ನು ನಿಲ್ಲಿಸಬೇಕೆಂದು ಒತ್ತಾಯಿಸಲು ಸಾಧ್ಯವೆಂದು ಹಿಂದೂಗಳು ಯೋಚಿಸಬಾರದು. ಅವರು ಮುಸಲ್ಮಾನರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳುವುದರ ಮೂಲಕ ಅವರನ್ನು ನಂಬಬೇಕು ಹಾಗೂ ಅವರು ಸ್ವಯಂ ಪ್ರೇರಿತರಾಗಿ ತಮ್ಮ ಹಿಂದೂ ನೆರೆಯವರಿಗಾಗಿ ಗೋಹತ್ಯೆಯನ್ನು ನಿಲ್ಲಿಸುತ್ತಾರೆ ಎಂದು ನಂಬಬೇಕು.

– ಯಂಗ್ ಇಂಡಿಯಾ, ೦೫-೦೬-೧೯೨೪

ಹಿಂದೂಗಳು ಬ್ರಾಹ್ಮಣರನ್ನು ಗೌರವಿಸುವಂತೆಯೇ ಗೋವನ್ನು ಗೌರವಿಸುತ್ತಾರೆ. ಆದರೆ ಭಾರತದ ಹೊರಗೆ ಈ ರೀತಿ ಇಲ್ಲ. ನಮ್ಮ ಮುಸಲ್ಮಾನ ಸಹೋದರರ ಧರ್ಮದಲ್ಲಿ ಗೋಹತ್ಯೆ ನಿಷೇಧವಿಲ್ಲ. ಒಂದು ವೇಳೆ ಮುಸಲ್ಮಾನ

ಸಹೋದರನು ಈದ್ ಹಬ್ಬದಲ್ಲಿ ಗೋಹತ್ಯೆ ಮಾಡಿದರೆ ಯಾವ ಆಧಾರದ ಮೇಲೆ ಹಿಂದೂ ಅವನನ್ನು ಹೊಡೆಯಲು ಕೈ ಎತ್ತುವನು? ಒಂದು ಗೋವನ್ನು ಉಳಿಸುವುದಕ್ಕಾಗಿ ತನ್ನ ಸಹಜೀವಿ ವ್ಯಕ್ತಿಯನ್ನು ಕೊಲ್ಲಬೇಕೆಂದು ಶಾಸ್ತ್ರಗಳೇನಾದರೂ ಕಟ್ಟಲೆ ವಿಧಿಸಿವೆಯೇ? ಶಾಸ್ತ್ರಗಳಲ್ಲಿ ಅಂಥ ಆದೇಶವೇನೂ ಇಲ್ಲ. ಬದಲಿಗೆ ಹಾಗೆ ಮಾಡುವುದು ಶಾಸ್ತ್ರಗಳಿಗೆ ವಿರುದ್ಧ. ಗೋರಕ್ಷಣೆಗಾಗಿ ನೀವು ನಿಮ್ಮ ಸ್ವಂತ ಜೀವನವನ್ನು ತ್ಯಾಗ ಮಾಡಬಹುದೇ ಹೊರತು, ನೀವು ಬೇರೆಯವರ ಜೀವವನ್ನು ತೆಗೆದುಕೊಳ್ಳಕೂಡದು. ಅಷ್ಟೇ ಅಲ್ಲ, ಅವನ ಬಗ್ಗೆ ಕೋಪವನ್ನೂ ಬೆಳೆಸಿಕೊಳ್ಳಬಾರದು. ನನ್ನ ಸಹೋದರ ಮೌಲಾನಾ ಮೊಹಮ್ಮದ್ ಅಲಿ ತಮ್ಮ ಒಂದು ಭಾಷಣದಲ್ಲಿ ಈ ಬಗ್ಗೆ ಹೇಳಿರುವ ಮಾತು ಬಹಳ ಸರಿಯೆಂದು ನನಗೆ ಅನ್ನಿಸುತ್ತದೆ. ಅವರ ಪ್ರಕಾರ ಭಾರತದಲ್ಲಿ ಗೋಹತ್ಯೆಯ ಮುಕ್ಕಾಲು ಭಾಗದ ಹೊಣೆ ಹಿಂದೂಗಳದ್ದೇ ಆಗಿದೆ. ಮುಸಲ್ಮಾನರು ಕೇವಲ ಕಾಲು ಭಾಗದಷ್ಟು ತಪ್ಪಿತಸ್ಥರಾಗಿದ್ದಾರೆ. ಏಕೆಂದರೆ ಹತ್ಯೆಗೆ ಒಳಗಾಗುವ ಹಸುಗಳು ಹಿಂದೂಗಳಿಂದಲೇ ಬಂದಂಥವಾಗಿರುತ್ತವೆ. ಬೇರೆ ದೇಶಗಳಲ್ಲಿ ಕಡಿಯುವುದಕ್ಕಾಗಿ ಹಸುಗಳನ್ನು ಹಡಗುಗಳಲ್ಲಿ ತುಂಬಿ ಕಳುಹಿಸುವುದನ್ನು ನಾನು ಮುಂಬಯಿಯಲ್ಲಿ ನೋಡಿದ್ದೇನೆ.

– ಯಂಗ್ ಇಂಡಿಯಾ, ೦೮-೦೯-೧೯೨೧

ಮೌಲಾನಾ ಶೌಕತ್ ಅಲಿಯವರಿಗೆ ಒಂದು ಮಾತನ್ನು ಹೇಳುತ್ತ ಬಂದಿದ್ದೇನೆ. ಅದೇನೆಂದರೆ ಖಿಲಾಫತ್ ಅರ್ಥದಲ್ಲಿರುವ ನಿಮ್ಮ ಹಸುವನ್ನು ರಕ್ಷಿಸುತ್ತಾ ಬಂದಿದ್ದೇನೆ. ಏಕೆಂದರೆ ಹಾಗೆ ಮಾಡುವುದರಿಂದ ನಾನು ನನ್ನ ಹಸುವನ್ನು ಉಳಿಸಬಹುದಾಗಿದೆ. ನನ್ನ ಜೀವವನ್ನು ಮುಸಲ್ಮಾನರ ಕೈಗೆ ಒಪ್ಪಿಸಿ ಅವರ ಸೈರಣೆಗೆ ಒಳಪಟ್ಟು ಬದುಕಲು ಸಿದ್ಧನಿದ್ದೇನೆ. ಏಕೆ? ಗೋವನ್ನು ಉಳಿಸಬೇಕೆಂಬ ಒಂದು ಸಹಜ ಕಾರಣಕ್ಕಾಗಿ. ಈ ಗುರಿಯನ್ನು ನಾನು ಮುಸಲ್ಮಾನರೊಂದಿಗೆ ವ್ಯವಹಾರ ಕುದುರಿಸುವುದರ ಮೂಲಕ ತಲುಪಲಾರೆನೆಂದು ನನಗೆ ಗೊತ್ತು. ಬದಲಿಗೆ ಅವರ ಹೃದಯ ಪರಿವರ್ತನೆ ಮಾಡಿ ಸಿದ್ಧಿಸಲು ಸಾಧ್ಯ. ಇದು ಸಂಭವವಾಗುವವರೆಗೆ ನಾನು ತಾಳ್ಮೆಯಿಂದ ಇರುತ್ತೇನೆ. ನಮ್ಮ ಸ್ವಂತ ನಡವಳಿಕೆಯನ್ನು ತಿದ್ದಿಕೊಳ್ಳುವುದರ ಮೂಲಕ, ನಮ್ಮ ಸ್ವಂತ ಉದಾಹರಣೆಯ ಮೂಲಕ ಹೃದಯ ಪರಿವರ್ತನೆ ತರಲು ಸಾಧ್ಯವೆಂಬುದರ ಬಗ್ಗೆ ನನಗೆ ಸ್ವಲ್ಪವೂ ಅನುಮಾನವಿಲ್ಲ. ಗೋಹತ್ಯೆ ಮತ್ತು ಮಾನವ ಹತ್ಯೆ, ನನ್ನ ಅಭಿಪ್ರಾಯದಲ್ಲಿ ಒಂದೇ ನಾಣ್ಯದ ಎರಡು ಮುಖಗಳು. ಇವೆರಡನ್ನೂ ತಪ್ಪಿಸಲು ಇರುವ ಉಪಾಯ ಒಂದೇ; ಅದೇನೆಂದರೆ ಅಹಿಂಸೆಯ ತತ್ವವನ್ನು ಅಳವಡಿಸಿಕೊಳ್ಳುವುದು ಮತ್ತು ನಮ್ಮ ವಿರೋಧಿಗಳನ್ನು ಪ್ರೀತಿಯಿಂದ ಜಯಿಸಲು ಸಾಧ್ಯವಾಗುವಂತೆ ಮಾಡುವುದು. ಪ್ರೀತಿಯ ಪರೀಕ್ಷೆ ತಪಸ್ಸಿನಲ್ಲಿ. ತಪಸ್ ಎಂದರೆ ನೋವನ್ನು ಅನುಭವಿಸುವುದು. ಮುಸಲ್ಮಾನರ ನೋವನ್ನು ನನ್ನ ಗರಿಷ್ಠ ಶಕ್ತಿಗನುಸಾರವಾಗಿ ಹಂಚಿಕೊಳ್ಳಲು ಸ್ವಪ್ರೇರಣೆಯಿಂದ ಮುಂದೆ ಬಂದೆ. ಏಕೆಂದರೆ ಸ್ವರಾಜ್ಯವನ್ನು ಪಡೆಯುವುದಕ್ಕಾಗಿ ನನಗೆ ಅವರ ಸಹಕಾರ ಬೇಕಿತ್ತು. ಅಲ್ಲದೇ ಗೋವನ್ನು ರಕ್ಷಿಸಬೇಕೆಂಬ ಉದ್ದೇಶ ನನ್ನ ಮನಸ್ಸಿನಲ್ಲಿತ್ತು. ನಾನು

ತಿಳಿದಿರುವಷ್ಟರ ಮಟ್ಟಿಗೆ ಯಾವುದೇ ಕಾರಣ ವಿಲ್ಲದೆ ಯವುದೇ ಪ್ರಾಣಿಯನ್ನು ಹತ್ಯೆ ಮಾಡುವುದು ನಿಷಿದ್ಧವೆಂದು ಪವಿತ್ರ ಖುರಾನ್ ಘೋಷಿಸಿದೆ. ಗೋಹತ್ಯೆ ಮಾಡುವುದೆಂದರೆ ವಸ್ತುತಃ ಸಹಜೀವಿಗಳನ್ನೂ ಮತ್ತು ಮಿತ್ರರನ್ನೂ ಅಂದರೆ ಹಿಂದೂಗಳನ್ನು ಕೊಲೆಮಾಡಿದಂತೆಯೇ ಎಂಬ ವಿಚಾರವನ್ನು ಮುಸಲ್ಮಾನರಿಗೆ ಮನದಟ್ಟು ಮಾಡಿಕೊಡಲು ಬೇಕಾದ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕೆಂದು ನಾನು ಬಯಸಿದ್ದೇನೆ. ಮುಗ್ಧ ನೆರೆಯವನ ರಕ್ತವನ್ನು ಹರಿಸಿದವನಿಗೆ ಸ್ವರ್ಗ ಪ್ರಾಪ್ತಿ ಇಲ್ಲವೆಂದು ಖುರಾನ್ ಹೇಳುತ್ತದೆ. ಅದ್ದರಿಂದ ಮುಸಲ್ಮಾನರೊಂದಿಗೆ ಅತ್ಯಂತ ಉತ್ತಮವಾದ ನೆರೆಹೊರೆಯ ಸಂಬಂಧವನ್ನು ಸ್ಥಾಪಿಸಲು ನಾನು ಕಾಳಜಿ ಹೊಂದಿದ್ದೇನೆ. ಆದ್ದರಿಂದ ಅವರ ಭಾವನೆಗಳಿಗೆ ಧಕ್ಕೆಯನ್ನುಂಟುಮಾಡುವ ಯಾವುದೇ ಕೆಲಸವನ್ನು ಮಾಡದೇ ಇರುವಂತೆ ನಾನು ತುಂಬ ಎಚ್ಚರವುಳ್ಳವನಾಗಿದ್ದೇನೆ. ಅಷ್ಟೇ ಅಲ್ಲ, ಅವರ ಪೂರ್ವಾಗ್ರಹಗಳನ್ನು ಗೌರವಿಸಲು ಕೂಡ ಪ್ರಯತ್ನಿಸುತ್ತೇನೆ. ಆದರೆ ನಾನಿದನ್ನು ವ್ಯಾಪಾರದ ಭಾವನೆಯಿಂದ ಮಾಡುವುದಿಲ್ಲ. ಅವರಿಂದ ಯಾವುದೇ ಫಲಾಪೇಕ್ಷೆ ಇಟ್ಟುಕೊಂಡಿಲ್ಲ. ಫಲಕ್ಕಾಗಿ ನಾನು ಕೇವಲ ಭಗವಂತನ ಕಡೆ ನೋಡುತ್ತೇನೆ ಸದ್ವರ್ತನೆಯಿಂದ ಎಂದೂ ದುಷ್ಪರಿಣಾಮ ಉಂಟಾಗುವುದಿಲ್ಲ ಎಂದು ಗೀತೆ ನನಗೆ ಬೋಧಿಸುತ್ತದೆ. ಆದ್ದರಿಂದ ಶುದ್ಧ ಕರ್ತವ್ಯದ ಭಾವನೆಯಿಂದ ಯಾವುದೇ ಒಪ್ಪಂದ ಮಾಡಿಕೊಳ್ಳದೆ ಮುಸಲ್ಮಾನರಿಗೆ ಸಹಾಯ ಮಾಡಬಯಸುತ್ತೇನೆ. ಇಂದು ಮುಸಲ್ಮಾನರಿಗಿಂತ ಇಂಗ್ಲಿಷರಿಗಾಗಿ ಹೆಚ್ಚು ಗೋಹತ್ಯೆ ನಡೆಯುತ್ತಿದೆ. ಇಂಗ್ಲಿಷರನ್ನೂ ಕೂಡ ನಾನು ಪರಿವರ್ತಿಸಬೇಕೆಂದು ಬಯಸುತ್ತೇನೆ. ನಮ್ಮ ಮಧ್ಯೆಯೇ ಅವರಿರುತ್ತಿರುವಾಗ ನಮ್ಮ ಸಂಸ್ಕೃತಿಗೆ ವ್ಯತಿರಿಕ್ತವಾದ ಕಡೆಗಳಲ್ಲಿ ಅವರು ತಮ್ಮ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಬಿಡುವುದು ಅವರ ಕರ್ತವ್ಯವೆಂದೇ ನಾನು ಅವರಿಗೆ ಮನವರಿಕೆ ಮಾಡಿಕೊಡಲು ಬಯಸುತ್ತೇನೆ. ಹೀಗೆ ನಮ್ಮ ಸ್ವಹಿತದ ದೃಷ್ಟಿಯಿಂದಲೂ ಅಹಿಂಸೆಯನ್ನು ಪಾಲಿಸಬೇಕಾಗುತ್ತದೆ. ಅಹಿಂಸೆಯ ಮೂಲಕ ಗೋವನ್ನು ರಕ್ಷಿಸುವುದಕ್ಕೆ ನಾವು ಸಮರ್ಥರಾಗುತ್ತೇವೆ. ಅಷ್ಟೇ ಅಲ್ಲ, ಇಂಗ್ಲಿಷರ ಸ್ನೇಹವನ್ನು ಸಂಪಾದಿಸಲೂ ಸಮರ್ಥರಾಗುತ್ತೇವೆ. ತ್ಯಾಗದ ಮೂಲಕ ಸಮಸ್ತರ ಸ್ನೇಹವನ್ನು ಗಳಿಸಲು ನಾನು ಬಯಸುತ್ತೇನೆ ಯಾರು ಗೋಹತ್ಯೆಯನ್ನು ಪಾಪವೆಂದು ಭಾವಿಸಿಲ್ಲವೋ ಅಂಥವರ ವಿರುದ್ಧ ಬಲವನ್ನು ಉಪಯೋಗಿಸಿ ಕೆಲವು ಗೋವುಗಳನ್ನು ಉಳಿಸಲು ನಾನು ಯಶಸ್ವಿಯಾದರೆ ಅದರಿಂದೇನು ಲಾಭ? ಗೋರಕ್ಷಣೆಯನ್ನು, ವಿಶ್ವಮೈತ್ರಿಯನ್ನು ಬೆಳೆಸುವುದರ ಮೂಲಕ ಅಂದರೆ ಅಹಿಂಸೆಯ ಮೂಲಕ ಮಾತ್ರ ಮಾಡಬಹುದು.

– ಯಂಗ್ ಇಂಡಿಯಾ, ೨೯-೯-೧೯೨೪

(ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟವಾದ ಬೆಳಗಾವಿಯಲ್ಲಿ ನಡೆದ ಗೋರಕ್ಷಣಾ ಸಮ್ಮೇಳನದಲ್ಲಿ ಮಾಡಿದ ಭಾಷಣದ ವರದಿಯ ಸಾರಾಂಶ)

* * *

ಜನಪದ ವ್ಯಕ್ತಿ

ಕ್ಲೈರ್ ಅಬ್ರಾಮ್ಸ್

ಪಾಶ್ಚಾತ್ಯರಲ್ಲಿ ಪೌರ್ವಾತ್ಯರಿಗಿಂತ ಪ್ರಾಣಿದಯೆ ಹೆಚ್ಚು ಕ್ರಿಯಾಶೀಲವಾಗಿದೆ ಎಂಬ ಮಾತನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇದಕ್ಕೊಂದು ತಾಜಾ ಉದಾಹರಣೆ ಕ್ಲೈರ್ ಅಬ್ರಾಮ್ಸ್. ಇವಳ ವಯಸ್ಸು ಕೇವಲ ಇಪ್ಪತ್ತು. ಈಕೆ ದೂರದ ಅಮೇರಿಕಾದವಳು. ಈಕೆ ತನ್ನ ತಂದೆ ತಾಯಿಯೊಂದಿಗೆ ಪ್ರವಾಸಿಯಾಗಿ ಭಾರತಕ್ಕೆ ಬಂದಾಗ ಇವಳ ವಯಸ್ಸು ಐದು ಮಾತ್ರ. ಪ್ರಾಣಿದಯೆ ಇವಳನ್ನು ರಾಜಸ್ಥಾನದ ಉದಯಪುರದ ಬಳಿಯ ಚೋಟಾ ಹವಾಲಾ ಎಂಬ ಹಳ್ಳಿಯಲ್ಲಿ ೧೯೯೫ರಿಂದಲೂ ಕಟ್ಟಿಹಾಕಿದೆ. ಅಲ್ಲಿ ಅಬ್ರಾಮ್ಸ್ ಕುಟುಂಬ ದಿಕ್ಕಿಲ್ಲದ, ಕೃಶಗೊಂಡ ಮತ್ತು ಅಪಾಯರಹಿತ ಪ್ರಾಣಿಗಳ ಆರೈಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದೆ. ಕ್ಲೇಯರ್ ಅಮೇರಿಕೆಯಲ್ಲಿ ಪ್ರೌಢಶಾಲೆಯವರೆಗೆ ವಿದ್ಯಾಭ್ಯಾಸ ಮಾಡಿದ್ದಾಳೆ. ಅನಂತರ ಅವಳಿಗೆ ಮನೆಯೇ ಶಾಲೆಯಾಯಿತು. ಕ್ಲೈರ್ ತಮ್ಮ ತಂದೆ ತಾಯಿ ಜೊತೆಗೆ ಭಾರತಕ್ಕೆ ಆಗಾಗ್ಗೆ ಭೇಟಿಕೊಡುತ್ತಿದ್ದಳು. ಆಗ ಕ್ಲೈರ್ ಕೇವಲ ನಾಲ್ಕು ವರ್ಷದ ಮಗು. ಅವಳ ತಂದೆ ತಾಯಿಗಳು ಭಾರತವನ್ನು ತುಂಬ ಇಷ್ಟಪಟ್ಟರು ಮತ್ತು ಭಾರತದಲ್ಲಿಯೇ ನೆಲೆಸಬೇಕೆಂದು ತೀರ್ಮಾನಿಸಿದರು. ಆ ಪ್ರಕಾರವಾಗಿ ಅವರು ಉದಯಪುರದಲ್ಲಿ ವಾಸಮಾಡಲು ಪ್ರಾರಂಭಿಸಿದರು. ಏಕೆಂದರೆ ಆಗ ಉದಯಪುರವು ಚಿಕ್ಕದಿತ್ತು ಮತ್ತು ಶಾಂತ ಸ್ಥಳವಾಗಿತ್ತು. ಅಲ್ಲದೇ ಕ್ಲೈರ್ ಯಾವ ಆತಂಕವಿಲ್ಲದೇ ಆ ಊರಿನ ಓಣಿಗಳಲ್ಲಿ ಆಡಿಕೊಂಡಿರಬಹುದಾಗಿತ್ತು. ಬೇರೆ ಮಕ್ಕಳೊಂದಿಗೆ ಸ್ನೇಹ ಬೆಳೆಸಿಕೊಳ್ಳಬಹುದಾಗಿತ್ತು. ಆಗ ಉದಯಪುರದಲ್ಲಿ ವಾರಸುದಾರರಿಲ್ಲದ, ಹಸಿವೆಯಿಂದ ಕಂಗಾಲಾದ, ನಿಃಶಕ್ತಿಯಿಂದ ಬಳಲುವ, ಮೂಳೆ ಮುರಿದ, ಕೀಟಗಳ ಆವಾಸ ಸ್ಥಾನವಾಗಿ ನೋವಿನಿಂದ ನರಳುತ್ತಿದ್ದ ಪ್ರಾಣಿಗಳಿಗೆ ಯಾವುದೇ ಉಪಚಾರ ವ್ಯವಸ್ಥೆ ಇರಲಿಲ್ಲ. ೨೦೦೨ರಲ್ಲಿ ಪ್ರಾಣಿ ಸಹಾಯ ಸಂಸ್ಥೆ ನಮೂದಿತಗೊಂಡಿತು. ಇದೊಂದು ಪರೋಪಕಾರಿ ಸಂಸ್ಥೆ. ಇದರ ಉದ್ದೇಶ ನರಳುತ್ತಿರುವ ಪ್ರಾಣಿಗಳಿಗೆ ನೆಮ್ಮದಿಯನ್ನು ಕೊಡುವುದು. ಈ ಸಂಸ್ಥೆಯ ಸಹಾಯದಿಂದ ಉದಯಪುರದಲ್ಲಿ ಕ್ಲೈರ್ ಮತ್ತು ಅವಳ ತಂದೆ ತಾಯಿ ಒಟ್ಟುಗೂಡಿ ಆ ಪ್ರಾಣಿದಯಾ ಸಂಘ ನಡೆಸುತ್ತಿದ್ದಾರೆ. ಇವರ ಕೇಂದ್ರದಲ್ಲಿ ಇಪ್ಪತ್ತು ಜನ ನಿಷ್ಠಾವಂತ ಪಶು ವೈದ್ಯರಿದ್ದಾರೆ. ಈ ಸಂಸ್ಥೆಯ ಮೂಲಕ ಪ್ರತಿ ವರ್ಷ ಸಾವಿರಾರು ಪ್ರಾಣಿಗಳನ್ನು ರಕ್ಷಿಸುತ್ತಿದ್ದಾರೆ. ಗುಣಹೊಂದಿದ ಮೇಲೆ ಬಹಳಷ್ಟು ಪ್ರಾಣಿಗಳನ್ನು ಅವು ಯಾವ ಹತ್ತಿರದ ಪ್ರದೇಶದಿಂದ ಬಂದಿದ್ದವೋ ಆ ಪ್ರದೇಶಕ್ಕೆ ಮರಳಿ ಕಳುಹಿಸಲಾಗುತ್ತದೆ. ಸ್ವತಂತ್ರವಾಗಿ ಜೀವನ ನಡೆಸಲಾಗದ ಪಶುಗಳು ಕೇಂದ್ರದಲ್ಲಿ ಉಳಿಯುತ್ತವೆ. ಯಾವುದೇ ಒಂದು ದಿನ ಕೇಂದ್ರಕ್ಕೆ ಭೇಟಿ ಕೊಟ್ಟರೆ ನಮಗೆ ಸಾಮಾನ್ಯವಾಗಿ ಅಲ್ಲಿ ೪೫ ನಾಯಿಗಳು, ೨೮ ಹಸು ಕರುಗಳು ಮತ್ತು ೨೦ ಕತ್ತೆಗಳು ಉಪಚಾರಕ್ಕೆ ಬಂದಿರುವುದನ್ನು ಕಾಣಬಹುದು. ಕೇಂದ್ರದ ಸುತ್ತಲೂ ವ್ಯವಸಾಯದ ಭೂಮಿಯಿದ್ದು ಹಕ್ಕಿಗಳ ಧ್ವನಿ ಕೇಳಿಬರುತ್ತದೆ. ಸುತ್ತಲಿನ ಮರಗಳ ಮೇಲೆ ಕೋತಿಗಳು ವಾಸಿಸುತ್ತವೆ. ಹೀಗಾಗಿ ಆ ಸ್ಥಳ ಸಂತಸ

ಇರುವಿಕೆಯ ಸ್ಥಳವಾಗಿದೆ. ಕ್ಲೈರ್ ಅವರಿಗೆ ತಾವು ಉಪಚರಿಸಿದ ಪ್ರಾಣಿಗಳನ್ನು ಹಿಂದಿರುಗಿ ಕಳುಹಿಸುವುದೆಂದರೆ ದುಃಖದ ವಿಚಾರ. ಹೊಸ ಪ್ರಾಣಿಗಳಿಗೆ ಅವಕಾಶ ಕೊಡಲು ಈ ರೀತಿ ಮಾಡಲೇಬೇಕಾಗುತ್ತದೆ. ಉದಯಪುರದಲ್ಲಿರುವ ಸುಮಾರು ೧೨೦ ಶಾಲೆಗಳಲ್ಲಿ ೨೫ ಸಾವಿರ ಮಕ್ಕಳಿಗೆ ಪ್ರಾಣಿದಯೆಯ ಬಗ್ಗೆ ಪರಿಚಯ ಮಾಡಿಕೊಟ್ಟಿದ್ದಾಳೆ. ಸ್ಥಳೀಯ ಜನರು ಬಹಳಷ್ಟು ನೆರವಾಗುತ್ತಾರೆ. ಪ್ರಾರಂಭದಲ್ಲಿ ಕ್ಲೈರ್‌ಳನ್ನು ಯರೂ ನಂಬುತ್ತಿರಲಿಲ್ಲ. ಆದರೆ 'ನಾವು ಪ್ರಾಮಾಣಿಕರಾಗಿದ್ದೇವೆ, ನಂಬುಗೆಗೆ ಯೋಗ್ಯರಾಗಿದ್ದೇವೆ ಹಾಗೂ ನಮ್ಮ ಕೆಲಸ ಪಾರದರ್ಶಕವಾಗಿದೆ' ಎಂದು ಗೊತ್ತಾದಂತೆ ಸ್ಥಳೀಯರು ಕ್ಲೈರ್‌ಳನ್ನು ನಂಬಲು ಆರಂಭಿಸಿದರು. ಕ್ಲೈರ್ ಕಾನೂನಿನ ಪ್ರಕಾರ ಭಾರತದ ಪ್ರಜೆಯಲ್ಲ. ಆದರೆ ಹೃದಯಾಂತರಾಳದಲ್ಲಿ ಭಾರತೀಯ ಪ್ರಜೆ. ಕ್ಲೈರ್ ಅಸ್ಖಲಿತ ಹಿಂದಿ ಮಾತನಾಡುತ್ತಾಳೆ. ಪ್ರಾಣಿಗಳಿಗಾಗಿ ಇಷ್ಟೊಂದು ಸೇವೆ ಮಾಡಲು ಕಾರಣವೇನೆಂದು ವಿಚಾರಿಸಿದರೆ, ಕ್ಲೈರ್ ಕೊಡುವ ಉತ್ತರ ತುಂಬ ಹೃದಯಂಗಮವಾಗಿದೆ. ಅವಳು ಪ್ರತಿಯಾಗಿ ಕೇಳುವ ಪ್ರಶ್ನೆಯೇನೆಂದರೆ,– "ನೀವು ಎಂದಾದರೂ ಕತ್ತೆಯ ಕೆನ್ನೆಯ ಕೆಳಭಾಗವನ್ನು ಸವರಿದ್ದೀರಾ? ನೀವು ಎಂದಾದರೂ ಆಡಿನ ಮರಿಗೆ ಸೀಸೆಯಲ್ಲಿ ಹಾಲು ಕುಡಿಸಿದ್ದೀರಾ? ಕಾಲು ಊನಗೊಂಡು ತೆವಳುತ್ತಿರುವ ನಾಯಿಗೆ ನಡೆಯುವುದನ್ನು ಕಲಿಸಿದ್ದೀರಾ?"

ಈ ಪ್ರಾಣಿ ಜಗತ್ತಿನಲ್ಲಿ ಒಂಟಿತನವೆಂಬುದು ಇಲ್ಲ ಎಂಬುದು ಕ್ಲೈರ್‌ಳ ಉದ್ಗಾರ!.

– ಮೂಲ– ರೇಣು ರಾಕೇಶ್ : ಅನು– ಸುಕೌ

* * *

ಸನ್ಮಾನ್ಯರಿಂದ...

ಇತ್ತೀಚಿನ ದಿನಗಳಲ್ಲಿ ನಡೆಯುತ್ತರುವ ರೈತ ವಿರೋಧಿ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ರೈತರು ತಮ್ಮ ಜಮೀನುಗಳನ್ನು ಮಾರಿಕೊಂಡು 'ಅನ್ನದಾತ' ಎಂಬ ಹೆಸರನ್ನು ಕಳೆದುಕೊಂಡು ತವು ಮಾರಿದ ಜಮೀನಿನಲ್ಲಿ ಯಾವ ಕಟ್ಟಡ ತಲೆಯೆತ್ತುತ್ತದೆಯೋ ಅಲ್ಲಿಯೇ ಶ್ರೀಮಂತರ ಗುಲಾಮರಂತೆ ದುಡಿಯುವ ಪರಿಸ್ಥಿತಿ ಬಂದೊದಗುತ್ತಿದೆ.

'ಉಳುವವನೇ ಭೂಮಿಯ ಒಡೆಯ' ಎಂಬ ಕಾನೂನಿನಡಿಯಲ್ಲಿ ಜಮೀನು ಕಳೆದುಕೊಂಡ ದೇವಸ್ಥಾನಗಳು, ಹಾಸ್ಟೆಲುಗಳು, ವಿಧವೆಯರು ಕಣ್ಣೀರು ಸುರಿಸುತ್ತಾ ಒದ್ದಾಡಿದರು.

ಈ ಕಾನೂನಿನಡಿಯಲ್ಲಿ ಜಮೀನು ಪಡೆದುಕೊಂಡ ರೈತರು ಅನಂತರ ಪಕ್ಕದ ರೈತರಿಗೆ ಅದನ್ನು ಮಾರಿ ಕೈತೊಳೆದುಕೊಳ್ಳುವಂತಹ ಪರಿಸ್ಥಿತಿ ಬಂದೊದಗಿತು. ಈಗ ಪುನಃರೈತರಿಗೆ ಬೇರೆ ಬೇರೆ ರೀತಿಯ ಸಮಸ್ಯೆಗಳು ಎದುರಾಗಿವೆ. ಇವುಗಳ ಕಡೆ ಸರ್ಕಾರ ಕೂಡಲೇ ಗಮನಹರಿಸದಿದ್ದರೆ ಆಹಾರ ಕ್ಷಾಮ ತಲೆದೋರಿ ಜನ ಬರಗಾಲವನ್ನು ಎದುರಿಸಬೇಕಾಗಿ ಬರಬಹುದು.

– ಎಂ.ಜಿ.ಶಿವರಾಮ್, ಬೆಂಗಳೂರು

ಆತ್ಮಕಥೆಯ ಓದುಗರನ್ನು ಬೀಳ್ಕೊಳ್ಳುವೆನು...

– *ಮೋ.ಕ.ಗಾಂಧೀ*

ವಾಚಕರಿಂದ ಬೀಳ್ಕೊಳ್ಳುವುದು ನನ್ನ ಮನಸ್ಸಿಗೆ ನೋವಾಗದೇ ಇಲ್ಲ. ನನ್ನ ಪ್ರಯೋಗಗಳಿಗೆ ನಾನು ಹೆಚ್ಚು ಬೆಲೆಯನ್ನು ಕಟ್ಟುತ್ತೇನೆ. ಅವುಗಳ ಯೋಗ್ಯತೆಗೆ ತಕ್ಕಂತೆ ಅವುಗಳನ್ನು ವರ್ಣಿಸಿದ್ದೇನೆಯೋ ಇಲ್ಲವೋ ನನಗೆ ತಿಳಿಯದು. ಪ್ರಾಮಾಣಿಕ ಇತಿಹಾಸವನ್ನು ಬರೆಯಲು ನಾನು ಸರ್ವ ಪ್ರಯತ್ನವನ್ನೂ ಮಾಡಿದ್ದೇನೆಂದು ಮಾತ್ರ ಹೇಳಬಲ್ಲೆ. ಸತ್ಯವನ್ನು ನನಗೆ ತೋರಿದಂತೆ ನಾನು ಕಂಡುಹಿಡಿದ ಮಾರ್ಗವನ್ನು ವಿವರಿಸುವುದು ನನ್ನ ಅವಿಚ್ಛಿನ್ನ ಪ್ರಯತ್ನವಾಗಿದೆ. ಸಂಶಯಾತ್ಮರಿಗೆ ಸತ್ಯ, ಅಹಿಂಸೆಗಳಲ್ಲಿ ಇದರಿಂದ ನಂಬಿಕೆಯುಂಟಾಗಬಹುದೆಂಬುದು ನನ್ನ ನೆಚ್ಚಿನ ಆಸೆಯಾಗಿದೆ.

ಸತ್ಯವಲ್ಲದೆ ಬೇರೆ ದೇವರಿಲ್ಲ ಎಂಬುದು ಅನೇಕ ಅನುಭವಗಳಿಂದ ನನಗೆ ಮನವರಿಕೆಯಾಗಿದೆ. ಈ ಕಥೆಯ ಪ್ರತಿ ಪುಟವೂ ಅಹಿಂಸೆಯಿಲ್ಲದೆ ಸತ್ಯಸಾಕ್ಷಾತ್ಕಾರ ಸಾಧ್ಯವಿಲ್ಲ ಎಂಬುದನ್ನು ವಾಚಕರಿಗೆ ಸಾರಿ ಹೇಳದಿದ್ದಲ್ಲಿ ಇದನ್ನು ಬರೆಯಲು ಪಟ್ಟ ಶ್ರಮವೆಲ್ಲ ವ್ಯರ್ಥವಾಯಿತೆಂದು ಭಾವಿಸುತ್ತೇನೆ. ಈ ಕಾರ್ಯದಲ್ಲಿ ನನ್ನ ಪ್ರಯತ್ನ ಫಲರಹಿತವಾದರೂ, ದೋಷವು ಅಹಿಂಸೆಯ ಸಾಧಕನದೇ ಹೊರತು ಆತತ್ವದ್ದಲ್ಲವೆಂಬುದನ್ನು ವಾಚಕರು ಅರಿಯಲಿ. ಏಕೆಂದರೆ ಅಹಿಂಸೆಯ ಸಿದ್ಧಿಗಾಗಿ ನನ್ನ ಪ್ರಯತ್ನಗಳು ಎಷ್ಟೇ ಶ್ರದ್ಧಾಪೂರ್ವಕವಾಗಿದ್ದರೂ ಅವು ದೋಷಯುಕ್ತ ಮತ್ತು ಅಪೂರ್ಣವಾಗಿವೆ. ಸತ್ಯದ ಪ್ರಕಾಶ ವರ್ಣನಾತೀತ. ನಿತ್ಯವೂ ನಾವು ನೋಡುವ ಸೂರ್ಯನಿಗಿಂತ ದಶಲಕ್ಷಸಹಸ್ರಮಡಿ ಉಜ್ವಲ. ಅದರ ನೋಟ ಎಲ್ಲಿಯೋ ಒಂದು ಸಲ ನನ್ನ ಕಣ್ಣಿಗೆ ಬಿದ್ದು ತತ್‌ಕ್ಷಣ ಮರೆಯಾಗಿದೆ. ವಾಸ್ತವವಾಗಿ ನಾನು ನೋಡಿರುವುದು ಅದ್ಭುತ ಕೋಟಿ ಸೂರ್ಯ ಪ್ರಕಾಶದ ಒಂದು ಕಿರಣ ಮಾತ್ರ. ಆದರೆ ನನ್ನ ಪ್ರಯೋಗಗಳ ಫಲವಾಗಿ ನಾನು ಇಷ್ಟನ್ನು ಮಾತ್ರ ಹೇಳಬಲ್ಲೆ. ಸತ್ಯದ ನಿಜವಾದ ದರ್ಶನವಾಗುವುದು ಅಹಿಂಸೆಯ ಸಾಕ್ಷಾತ್ಕಾರವಾದ ನಂತರವೇ.

ಸರ್ವವ್ಯಾಪಿಯಾದ ಸರ್ವಾಂತರ್ಯಾಮಿಯಾದ ಸತ್ಯದ ದರ್ಶನವನ್ನು ಸಾಕ್ಷಾತ್ತಾಗಿ ಮಾಡಬೇಕಾದರೆ, ಅತ್ಯಂತ ಅಲ್ಪವಾದ ಪ್ರಾಣಿಯನ್ನೂ ತನ್ನಂತೆ ಪ್ರೀತಿಸಲು ಶಕ್ತನಾಗಬೇಕು. ಈ ಧ್ಯೇಯ ಸಾಧನೆಗಾಗಿ ಪ್ರಯತ್ನಿಸುವವನು ಜೀವನದ ಯಾವ ಕ್ಷೇತ್ರದಿಂದಲೂ ಹೊರಗಾಗಿ ನಿಲ್ಲುವುದು ಸಾಧ್ಯವಿಲ್ಲ. ಆದುದರಿಂದಲೇ ನನ್ನ ಸತ್ಯಪ್ರಿಯತೆ ನನ್ನನ್ನು ರಾಜಕೀಯ ಕ್ಷೇತ್ರಕ್ಕೆ

ಎಳೆದಿದೆ. ಧರ್ಮಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲವೆಂದು ಹೇಳುವವರಿಗೆ ಧರ್ಮವೆಂದರೇನೆಂಬುದು ಗೊತ್ತಿಲ್ಲವೆಂದು ನಾನು ನಿಸ್ಸಂದೇಹವಾಗಿ, ಆದರೂ ಪೂರ್ಣ ನಮ್ರತೆಯಿಂದ ಹೇಳಬಲ್ಲೆ.

ಆತ್ಮಶುದ್ಧಿಯಿಲ್ಲದೆ ಎಲ್ಲಾ ಪ್ರಾಣಿಗಳೊಂದಿಗೂ ಒಂದಾಗುವುದು ಅಸಾಧ್ಯ. ಆತ್ಮಶುದ್ಧಿಯಿಲ್ಲದೆ ಅಹಿಂಸಾ ಧರ್ಮವನ್ನು ಅನುಸರಿಸುತ್ತೇನೆನ್ನುವುದು ಬರಿಯ ಕನಸು. ಹೃದಯ ಶುದ್ಧಿಯಿಲ್ಲದವರಿಗೆ ಎಂದಿಗೂ ಪರಮಾತ್ಮನ ಸಾಕ್ಷಾತ್ಕಾರವಾಗುವುದಿಲ್ಲ. ಆದುದರಿಂದ ಆತ್ಮಶುದ್ಧಿಯೆಂದರೆ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಶುದ್ಧಿ ಎಂದು ಅರ್ಥವಾಗಬೇಕು. ಶುದ್ಧಿಯ ಸ್ವಭಾವ ಎಲ್ಲಡೆಯೂ ಹರಡುವುದಾದುದರಿಂದ, ಒಬ್ಬನು ಆತ್ಮಶುದ್ಧಿಯುಳ್ಳವನಾದರೆ, ಅವನ ಸುತ್ತಲ ವಾತಾವರಣವೆಲ್ಲ ಶುದ್ಧವಾಗುವುದು.

ಆದರೆ ಆತ್ಮಶುದ್ಧಿಯ ಮಾರ್ಗ ಕಠಿಣ, ಕಡಿದು. ಪೂರ್ಣ ಶುದ್ಧತೆಯನ್ನು ಸಾಧಿಸಬೇಕಾದರೆ ಕಾಯಾ, ವಾಚಾ, ಮನಸಾ ಪೂರ್ಣ ನಿರ್ವಿಕಾರರಾಗಬೇಕು. ಪ್ರೀತಿ, ದ್ವೇಷ, ರಾಗ, ತಿರಸ್ಕಾರ ಮುಂತಾದ ದ್ವಂದ್ವಗಳಿಂದ ಮುಕ್ತನಾಗಬೇಕು. ನಾನು ಅವಿಚ್ಛಿನ್ನವಾಗಿ ಪ್ರಯತ್ನಪಡುತ್ತಿದ್ದರೂ ಆ ತ್ರಿಕರಣ ಶುದ್ಧಿಯನ್ನು ಇನ್ನೂ ಸಾಧಿಸಿಕೊಂಡಿಲ್ಲವೆಂಬುದು ನನಗೆ ಗೊತ್ತು. ಆದುದರಿಂದಲೇ ಜಗತ್ತಿನ ಹೊಗಳಿಕೆಯಿಂದ ನನಗೆ ಸಂತೋಷವಾಗುವುದಿಲ್ಲ. ನಿಜವಾಗಿ ಅದು ಅನೇಕ ವೇಳೆ ನನ್ನ ಮನಸ್ಸನ್ನು ನೋಯಿಸುತ್ತದೆ. ಶಸ್ತ್ರಯುದ್ಧದಿಂದ ಬಾಹ್ಯ ಜಗತ್ತನ್ನು ಜಯಿಸುವುದಕ್ಕಿಂತ, ಸೂಕ್ಷ್ಮಗತಿಯ ಅರಿಷಡ್ವರ್ಗಗಳನ್ನು ಗೆಲ್ಲುವುದು ಹೆಚ್ಚು ಕಷ್ಟವೆಂದು ನನಗೆ ತೋರುತ್ತದೆ. ಭಾರತಕ್ಕೆ ನಾನು ಹಿಂದಿರುಗಿದಂದಿನಿಂದ ನನ್ನೊಳಗೆ ಸುಪ್ತವಾಗಿರುವ ವಿಕಾರಗಳು ನನ್ನ ಅನುಭವಕ್ಕೆ ಬಂದಿವೆ. ಈ ಅರಿವು ನನ್ನನ್ನು ಪರಾಜಿತಗೊಳಿಸದಿದ್ದರೂ, ನಮ್ರನನ್ನಾಗಿ ಮಾಡಿದೆ. ಈ ಅನುಭವಗಳೂ, ಪ್ರಯೋಗಗಳೂ ನನಗೆ ಶಕ್ತಿಯನ್ನು ನೀಡಿವೆ. ನನಗೆ ಅತ್ಯಾನಂದವನ್ನು ಕೊಟ್ಟಿವೆ. ಆದರೆ ಇನ್ನೂ ಕ್ರಮಿಸಬೇಕಾದ ಕಠಿಣ ಮಾರ್ಗ ಮುಂದೆ ಇರುವುದು ನನಗೆ ಗೊತ್ತು. ನನ್ನನ್ನು ನಾನು ಶೂನ್ಯವನ್ನಾಗಿ ಮಾಡಿಕೊಳ್ಳಬೇಕು. ಎಲ್ಲಿಯವರೆಗೆ ಮನುಷ್ಯ ತನ್ನ ಸ್ವಂತ ಇಚ್ಛೆಯಿಂದ ತಾನು ಎಲ್ಲರಿಗಿಂತ ಕಿರಿಯ ಎಂದು ಭಾವಿಸುವುದಿಲ್ಲವೋ, ಅಲ್ಲಿಯವರೆಗೆ ಅವನಿಗೆ ಮೋಕ್ಷವಿಲ್ಲ. ನಮ್ರತೆಯ ಅಂತಿಮ ತುದಿಯೇ ಅಹಿಂಸೆ.

ಇನ್ನು ವಾಚಕರಿಂದ ತಾತ್ಕಾಲಿಕವಾಗಿಯಾದರೂ ನಾನು ಬೀಳ್ಕೊಳ್ಳುತ್ತೇನೆ. ಹೀಗೆ ಮಾಡುವಾಗ ಕಾಯಾ, ವಾಚಾ, ಮನಸಾ ನನಗೆ ಅಹಿಂಸೆಯ ವರವನ್ನು ಕರುಣಿಸುವಂತೆ ಸತ್ಯರೂಪನಾದ ದೇವರಿಗೆ ನಾನು ಸಲ್ಲಿಸುವ ಪ್ರಾರ್ಥನೆಯಲ್ಲಿ ಅವರೂ ಸೇರಿಕೊಳ್ಳಲಿ, ಎಂದು ಕೇಳಿಕೊಳ್ಳುತ್ತೇನೆ.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟ್ ಖಾದಿ ಕ್ಷೇತ್ರದಲ್ಲಿ ತನ್ನನ್ನು ತೊಡಗಿಸಿಕೊಂಡು ಅನೇಕ ವರ್ಷಗಳಾದವು. ಈ ವರ್ಷಗಳಲ್ಲಿ ಖಾದಿ ಉದ್ಯಮ ಅದರ ಅನೇಕ ಏರಿಳಿತಗಳನ್ನು ಕಂಡಿದೆ. ಆದರೆ ಗಾಂಧೀ ವಿಚಾರಕ್ಕೆ ಬದ್ಧವಾಗಿ ಎಷ್ಟೇ ಕಷ್ಟ ಬಂದರೂ ಖಾದಿ ಉದ್ಯಮದಿಂದ ವಿಮುಖವಾಗಿಲ್ಲ. ಬದಲಿಗೆ ಕಷ್ಟಗಳು ಗಟ್ಟಿತನವನ್ನು ತಂದು ಕೊಟ್ಟಿವೆ. ಅದರ ಪರಿಣಾಮವಾಗಿ ಈಗ ಹೊಸ ಜೀವನ ದಾರಿ ಕೇಂದ್ರದಲ್ಲಿ ಹೆಗಲು ಚೀಲಗಳ ಉತ್ಪಾದನೆ ಜೊತೆಗೆ ಬಿಳಿ ಸಾದಾ ಖಾದಿ ಬಟ್ಟೆ ಉತ್ಪಾದನೆಯನ್ನೂ ಪ್ರಾರಂಭಿಸಲಾಗಿದೆ. ಈ ಉದ್ಯೋಗದಲ್ಲಿ ಮಹಿಳೆಯರು ತೊಡಗಿಕೊಳ್ಳುತ್ತಿರುವುದು ವಿಶೇಷ. ಖಾದಿ ಸಿದ್ಧ ಉಡುಪು ಘಟಕದಲ್ಲಿ ಒಟ್ಟು ಹನ್ನೆರಡು ಜನ ಮಹಿಳೆಯರು ಉದ್ಯಮದಲ್ಲಿ ತೊಡಗಿದಂತಾಗಿದೆ.

ಸ್ಥಳೀಯ ಪ್ರೌಢಶಾಲೆ ಮಾತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಪರಿಸರ ಮತ್ತು ಕಾಡು ಪ್ರಾಣಿ ರಕ್ಷಣೆ ವಿಷಯದಲ್ಲಿ ಅರಿವು ಮೂಡಿಸಲು ಒಂದು ದಿನದ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ೨೫ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶಿಬಿರದ ಖರ್ಚುವೆಚ್ಚಗಳನ್ನು ಶಿಬಿರಾರ್ಥಿಗಳೇ ವಹಿಸಿಕೊಂಡಿದ್ದರು. ಶಿಬಿರದ ನಂತರ ಅವರೆಲ್ಲ ಸಭೆ ಸೇರಿ 'ಪರಿಸರ ಪ್ರೇಮಿ ಮಿತ್ರ ಕೂಟ'ವನ್ನು ರಚಿಸಿಕೊಂಡರು. ಕ್ರಮೇಣ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಯೋಚಿಸಿದರು.

ಟ್ರಸ್ಟಿನ ಅಧ್ಯಕ್ಷರು ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ 'ಗೋಹತ್ಯೆ ಬೇಕೆ-ಬೇಡವೆ' ಎಂಬ ವಿಚಾರ ಸಂಕಿರಣದಲ್ಲಿ ಭಾಗವಹಿಸಿ, ಈ ವಿಷಯದಲ್ಲಿ ಗಾಂಧೀ ವಿಚಾರಧಾರೆಯನ್ನು ಮಂಡಿಸಿದರು.

ಮೈಸೂರಿನಲ್ಲಿ ಶ್ರೀ ಮಾದಾರ ಚನ್ನಯ್ಯ ಸ್ವಾಮಿಗಳು ನಡೆಸಿದ ಪಾದಯಾತ್ರೆಯಲ್ಲಿ ಭಾಗವಹಿಸಿದರು. ನಂತರ ನಡೆದ ಸಭೆಯಲ್ಲಿ ಸ್ವಾಮಿಗಳ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿದರು. ಟ್ರಸ್ಟಿನ ಅಧ್ಯಕ್ಷರು ಮತ್ತು ಕಾರ್ಯಕರ್ತ ಮಂಜುನಾಥ್ ಮೈಸೂರಿನಲ್ಲಿರುವ 'ಪ್ರಯತ್ನ ಚಾರಿಟೆಬಲ್ ಟ್ರಸ್ಟ್'ಗೆ ಭೇಟಿಕೊಟ್ಟರು. ಅಲ್ಲಿ ನಡೆಯುತ್ತಿರುವ ಶೈಕ್ಷಣಿಕ ಕಾರ್ಯಕ್ರಮ ನೋಡಿ ಅನೇಕ ವಿಷಯ ತಿಳಿದುಕೊಂಡರು.

೨೦೧೦ ಸೆಪ್ಟಂಬರ್ ಮಾಹೆಯ ದಾನಿಗಳು

ಶ್ರೀ ಎಂ.ವಿ.ದೇಶಪಾಂಡೆ; ಶ್ರೀ ಟಿ.ಆರ್.ಗಾಯಕ್‌ವಾಡ್; ಶ್ರೀ ಆರ್.ಆರ್.ಅನವಟ್ಟಿ - ಬೆಂಗಳೂರು: ಶ್ರೀ ಎಂ.ಎಸ್.ವೆಂಕಟೇಶ್ - ಮಂಡ್ಯ: ಶ್ರೀಮತಿ ಕ್ಷಮಾ ಕತ್ವಾರ್-ಮೈಸೂರು ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೮೩

– ಸುರೇಂದ್ರ ಕೌಲಗಿ



ರತ್ನ ಟ್ರಸ್ಟಿನ ಮುಖ್ಯ ವಾಹಿನಿಯೊಂದಿಗೆ ಸೇರಿದಾಗ ಹನ್ನೆರಡು ವರ್ಷದ ಬಾಲಕಿ. ಈಗ ಅವಳು ಒಂದು ಗಂಡು, ಒಂದು ಹೆಣ್ಣು ಮಕ್ಕಳ ತಾಯಿ. ಬಾಲ್ಯಾವಸ್ಥೆಯಿಂದ ತಾಯಿಯಾಗುವವರೆಗಿನ ಅವಳ ಸಮಯ ಟ್ರಸ್ಟಿನಲ್ಲೇ ಕಳೆದಿದೆ. ಈಗ ಅವಳ ಮಕ್ಕಳೂ ಕೂಡ ಟ್ರಸ್ಟಿನ ಚಟುವಟಿಕೆಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಭಾಗವಹಿಸುತ್ತಾ ಟ್ರಸ್ಟಿನ ಮಕ್ಕಳಾಗಿ ಬೆಳೆಯುತ್ತಿದ್ದಾರೆ. ರತ್ನ ಪ್ರಾಥಮಿಕ ಮೂರನೇ ತರಗತಿಯವರೆಗೆ ಮಾತ್ರ ಓದಿದಂಥ ಮಹಿಳೆ. ಅವಳ ಮನೆಯವರು ವೃತ್ತಿಯಿಂದ ಕಲ್ಲು ಒಡೆಯುವ ಕೆಲಸ ಮಾಡುವಂಥವರು. ಕುಟುಂಬವು ಶಿಕ್ಷಣದ ಪರಿಸರವೇ ಇಲ್ಲದಂಥದ್ದು. ಜೊತೆಗೆ ಬಡತನ. ಇದಕ್ಕಿಂತ ಮಿಗಿಲಾಗಿ ಆ ವೃತ್ತಿಯಲ್ಲಿ ತೊಡಗಿರುವಂಥವರಿಗೆ ಇರುವ ದೊಡ್ಡ ದೌರ್ಬಲ್ಯ ಮದ್ಯಪಾನ. ಇವೆಲ್ಲ ಕಾರಣಗಳಿಂದಾಗಿ ರತ್ನ ತನ್ನ ಮುಗ್ಧಾವಸ್ಥೆಯಲ್ಲಿಯೇ ಮನೆಯ ವೃತ್ತಿಯಲ್ಲಿ ತೊಡಗಬೇಕಾದುದರಿಂದ ಶಾಲಾ ಶಿಕ್ಷಣ ಅನಿವಾರ್ಯವಾಗಿ ಮೊಟಕುಗೊಂಡಿತು. ಇಂಥ ವೇಳೆಯಲ್ಲಿ ಅವಳಿಗೆ ಆಸರೆಯಾಗಿ ಸಿಕ್ಕಿದ್ದು ಜನಪದ ಸೇವಾ ಟ್ರಸ್ಟ್. ಆದರೆ ದುರದೃಷ್ಟವಶಾತ್ ರತ್ನಳಿಗೆ ವಿದ್ಯಾಭ್ಯಾಸದ ಭಾಗ್ಯ ದೊರೆಯಲಿಲ್ಲ. ಕುಟುಂಬಕ್ಕೆ ಅವಳ ಸಂಪಾದನೆ ಅಗತ್ಯವಾಗಿದ್ದುದರಿಂದ ಅವಳು ಸಹಜವಾಗಿ ಟ್ರಸ್ಟಿನಲ್ಲಿ ವಿವಿಧ ಕೆಲಸ ಮಾಡಿಕೊಂಡು ಇರಬೇಕಾಯಿತು. ಅವಳದು ಬೆಳೆಯುತ್ತಿರುವ ವಯಸ್ಸಾದುದರಿಂದ ಟ್ರಸ್ಟಿನ ವಾತಾವರಣ ಅವಳಿಗೆ ಒಳ್ಳೆಯ ಸಂಸ್ಕಾರವನ್ನು ಕೊಟ್ಟಿತು. ಅವಳದು ಮೊದಲಿನಿಂದಲೂ ಶ್ರಮನಿಷ್ಠ ಸ್ವಭಾವ. ಪ್ರಾಮಾಣಿಕತೆ ಮತ್ತು ಶಾಂತ ಸ್ವಭಾವ ಅವಳನ್ನು ಟ್ರಸ್ಟಿನ ಒಳ್ಳೆಯ ಕೆಲಸಗಾರಳನ್ನಾಗಿ ರೂಪಿಸಿತು. ಅವಳ ಸೇವೆ ಪ್ರಾರಂಭವಾದದ್ದು ಮೀನಾಕ್ಷಮ್ಮನವರ ಸೇವೆಯೊಂದಿಗೆ. ಮೀನಾಕ್ಷಮ್ಮನವರು ಗಿರಿಜಮ್ಮನವರ ತಾಯಿ. ಅವರಿಗೆ ವಯಸ್ಸಾಗಿತ್ತು. ರತ್ನ ಮೀನಾಕ್ಷಮ್ಮನವರ ಸೇವೆಯನ್ನು ಅದ್ಭುತವಾಗಿ ನೆರವೇರಿಸಿದಳು. ಅವಳ ಸೇವೆಯನ್ನು ಇಂದಿಗೂ ನೆನೆಯಲಾಗುತ್ತದೆ. ಇಡೀ ಟ್ರಸ್ಟ್ ಪರಿವಾರ ಅವಳಿಗೆ ಕೃತಜ್ಞವಾಗಿದೆ. ಮುಂದೆ ಟ್ರಸ್ಟಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಗಿರಿಜಮ್ಮನವರಿಗೆ ಸಹಾಯಕಳಾಗಿ ಕೆಲಸ ಮಾಡುತ್ತಾ ಬಂದಿದ್ದಾಳೆ. ಶ್ರೀ ಕೃಷ್ಣ ಶಿಶುವಿಹಾರದ ಮಕ್ಕಳ ಸೇವೆಯಲ್ಲೂ ತೊಡಗಿದ್ದು ರತ್ನಳ ವಿವಿಧ ಕೆಲಸಗಳಲ್ಲಿ ಒಂದಾಗಿತ್ತು. ಈಗ ಸುಘೋಷ್‌ರವರ ಎರಡು ವರ್ಷದ ಮಗಳು ಗೌರಿ ಮತ್ತು ರತ್ನಳ ಸಂಬಂಧ ತುಂಬ ಅನನ್ಯ. ಗೌರಿಗೆ ತಾನು ತಿನ್ನುವ ಯಾವುದೇ ತಿಂಡಿಯ ಮೊದಲ ಹಂಚಿಕೆ ರತ್ನಳೊಂದಿಗೆ ಆಗಲೇಬೇಕು. ರತ್ನ ಬರುವುದು ನಿಧಾನವಾದರೆ ಮತ್ತು ಕೆಲಸ ಮುಗಿಸಿ ಮನೆಗೆ ಹೋಗುವುದಾದರೆ ಗೌರಿಯ ಮನಸ್ಸು ತುಂಬ ವಿಚಲಿತಗೊಳ್ಳುತ್ತದೆ. ಹೀಗೆ ಟ್ರಸ್ಟಿನೊಂದಿಗೆ ಒಂದಾಗಿರುವ ರತ್ನ ಟ್ರಸ್ಟಿನಲ್ಲಿರುವ ಮಹಿಳಾ ಸ್ವಸಹಾಯ ಸಂಘದ ಸದಸ್ಯಳಾಗಿದ್ದಾಳೆ. ಅವಳ ಮಗಳು ಸುಪ್ರಿಯಾ ಟ್ರಸ್ಟಿನಲ್ಲಿ ನಡೆಯುವ ಭರತನಾಟ್ಯ ತರಗತಿಯಲ್ಲಿ ಭರತನಾಟ್ಯ ಕಲಿಯುತ್ತಿದ್ದಾಳೆ. ರತ್ನಳಂಥ ಕಾರ್ಯಕರ್ತೆಯನ್ನು ಪಡೆದ ಟ್ರಸ್ಟಿಗೂ ರತ್ನಳ ಬಗ್ಗೆ ಅಭಿಮಾನವಿದೆ.

* * *

ಸರ್ವೋದಯ ಆಂದೋಲನದ ಮುನ್ನಡೆ

ಸರ್ವೋದಯ ಸಮಾಜದ ಸಂಯೋಜಕರಾಗಿ ಕರ್ನಾಟಕದ ಡಾ.ಎಸ್.ಎನ್.ಸುಬ್ಬರಾವ್ ಆಯ್ಕೆಯಾಗಿದ್ದಾರೆ. ದೇಶದ ಎಲ್ಲಾ ರಾಜ್ಯಗಳಲ್ಲಿ ಸುಬ್ಬರಾವ್‌ರವರ ಪರಿಚಯ ಹೊಂದಿರುವ ಯುವಕರು ಕಡ್ಡಾಯವಾಗಿ ಇದ್ದಾರೆ. ಸುಬ್ಬರಾವ್‌ರವರು ತಮ್ಮ ಜೀವನವನ್ನು ಸರ್ವೋದಯ ಆಂದೋಲನಕ್ಕೆ ಮುಡಿಪಾಗಿಟ್ಟಿದ್ದಾರೆ. ಅವರು ರಾಷ್ಟ್ರ ಸೇವಾದಳದ ಮೂಲಕ ತಮ್ಮ ಜೀವನ ಆರಂಭಿಸಿದರು. ಇಂದಿಗೂ ಸೇವಾದಳದ ಸೈನಿಕನಂತೆ ಖಾದಿ ಪೋಷಾಕು ಧರಿಸಿ ತಮ್ಮ ೮೧ನೇ ವರ್ಷದಲ್ಲಿಯೂ ಸರ್ವೋದಯ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಮುಂಬಯಿಯಿಂದ ಕಲ್ಕತ್ತೆವರೆಗೂ ದೇಶದ ಉದ್ದಗಲಕ್ಕೂ ರಾಷ್ಟ್ರ ಮಟ್ಟದ ಯುವ ಶಿಬಿರ ನಡೆಸುತ್ತಾ ಬಂದಿದ್ದಾರೆ. ಚಂಬಲ್‌ಕಣಿವೆಯ ಡಕಾಯಿತರ ಪುನರ್ವಸತಿಗಾಗಿ ಕೆಲಸ ಮಾಡಿ ಅಹಿಂಸಾ ಶಕ್ತಿ ಮೆರೆಯುವಂತೆ ಮಾಡಿದ್ದಾರೆ. ಡಾಕಾಯಿತರ ಪುನರ್ವಸತಿಗಾಗಿ ಮಧ್ಯಪ್ರದೇಶ ಜವಾರ ಎಂಬಲ್ಲಿ ಮಹಾತ್ಮಾ ಗಾಂಧೀ ಆಶ್ರಮ ಸ್ಥಾಪಿಸಿದ್ದಾರೆ. ಯುವಕರಲ್ಲಿ ಸರ್ವೋದಯ ಬಗ್ಗೆ ಪ್ರೀತಿ ಹುಟ್ಟಿಸುವುದಕ್ಕಾಗಿ ರಾಷ್ಟ್ರೀಯ ಯುವ ಸೇವಾ ಯೋಜನೆ ಸ್ಥಾಪಿಸಿದ್ದಾರೆ. ಅಮೇರಿಕೆಯ ಚಿಕ್ಯಾಗೊನಲ್ಲಿರುವ ವಿಶ್ವ ಧರ್ಮ ಸಂಸತ್ ಅವರನ್ನು ೧೯೯೩ರಲ್ಲಿ ಆಹ್ವಾನಿಸಿತ್ತು. ಸುಬ್ಬರಾವ್‌ರವರ ವಿವಿಧ ಮುಖಿ ಸಕಾರ್ಯಗಳನ್ನು ಗಮನಿಸಿ ಅನೇಕ ಪುರಸ್ಕಾರಗಳು ಅವರಿಗೆ ಲಭಿಸಿವೆ. ಅವುಗಳಲ್ಲಿ ಮುಖ್ಯವಾದ ಕೆಲ ಪುರಸ್ಕಾರಗಳು ಇಂತಿವೆ. ಮಹಾತ್ಮಾ ಗಾಂಧೀ ಪುರಸ್ಕಾರ, ರಾಷ್ಟ್ರೀಯ ಸದ್ಭಾವನಾ ಪುರಸ್ಕಾರ, ಜಮನಲಾಲ್ ಬಜಾಜ್ ಪುರಸ್ಕಾರ, ವಿಶ್ವಮಾನವತಾಧಿಕಾರ ಪ್ರೊತ್ಸಾಹಕ ಪುರಸ್ಕಾರ, ರಾಷ್ಟ್ರೀಯ ಯುವ ಪುರಸ್ಕಾರ, ಅಣುವ್ರತ ಅಹಿಂಸಾ ಅಂತರಾಷ್ಟ್ರೀಯ ಪುರಸ್ಕಾರ. ಇಂಥ ಒಬ್ಬ ಸರ್ವೋಧಯ ಸೇವಕನನ್ನು ಸರ್ವೋದಯ ಸಮಾಜದ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಲಾಗಿದೆ. ಸುಬ್ಬರಾವ್‌ರವರು ದೇಶದ ಅನೇಕ ಭಾಷೆಗಳನ್ನು ಬಲ್ಲವರಾಗಿದ್ದಾರೆ. ಅ ಎಲ್ಲಾ ಭಾಷೆಗಳಲ್ಲಿ ಚೇತೋಹಾರಿಯಾಗಿ ಹಾಡಬಲ್ಲವರಾಗಿದ್ದಾರೆ. ಈ ಸರ್ವೋದಯ ಸೇವಕ ಇದೇ ಸೆಪ್ಟಂಬರ್ ೨೮,೨೯,೩೦ ಈ ದಿನಾಂಕಗಳಲ್ಲಿ ಆದಿಚುಂಚನಗಿರಿ ಕ್ಷೇತ್ರದಲ್ಲಿ ನಡೆಯುವ ಅಖಿಲಭಾರತ ಸರ್ವೋದಯ ಕಾರ್ಯಕರ್ತರ ಚಿಂತನ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಕಳೆದ ಜೂನ್ ೧ನೇ ತಾರೀಖಿನಿಂದ ೫ನೇ ತಾರೀಖಿನ ವರೆಗೆ ವಾರಣಾಸಿಯಲ್ಲಿ ಸರ್ವ ಸೇವಾ ಸಂಘವು ಒಂದು ರಾಷ್ಟ್ರೀಯ ಪ್ರಶಿಕ್ಷಣ ಶಿಬಿರವನ್ನು ಆಯೋಜಿಸಿತ್ತು. ಶಿಬಿರದ ಉದ್ಘಾಟನೆಯನ್ನು ಸರ್ವ ಸೇವಾ ಸಂಘದ ಕಾರ್ಯದರ್ಶಿಯಾದ ಮಹದೇವ್ ವಿದ್ರೋಹಿ ಮಾಡಿದರು. ಈ ಶಿಬಿರದಲ್ಲಿ

ಸಂಪನ್ಮೂಲ ವ್ಯಕ್ತಿಗಳಾಗಿ ಡಾ॥ ಪ್ರಸಾದ್, ಡಾ॥ ಎ.ಕೆ.ಅರುಣ್, ಡಾ॥ ರಾಮಜ್ ಸಿಂಹ, ಪ್ರೊ॥ ಭೀಮನ್ ಕುಮಾರ್, ಆಶೋಕ್ ಭಾರತ್ ಮುಂತಾದವರು ಭಾಗವಹಿಸಿದ್ದರು.

ಶಿವಮೊಗ್ಗ ಜಿಲ್ಲೆಯ ಹೆಗ್ಗೋಡಿನಲ್ಲಿ ಚರಕಾ ಮತ್ತು ದೇಸಿ ಎಂಬ ಹೆಸರಿನಲ್ಲಿ ದೇಶದ ಪ್ರಮುಖ ಗ್ರಾಮೋದ್ಯೋಗವಾದ ನೇಕಾರಿಕೆಯನ್ನು ಉಳಿಸಲು ಹೋರಾಡುತ್ತಿರುವವರು ಪ್ರಸನ್ನರವರು. ನೇಕಾರರು ಉಳಿದರೆ ಮಾತ್ರ ನೇಕಾರಿಕೆ ಉಳಿಯುತ್ತದೆ ಎಂಬ ಧ್ಯೇಯದೊಡನೆ ಆ ವೃತ್ತಿಯನ್ನು ಉಳಿಸಲು ಹೋರಾಡುತ್ತಿರುವ ವ್ಯಕ್ತಿ ಪ್ರಸನ್ನ. ಮಹಾತ್ಮಾ ಗಾಂಧೀಯವರು ಆಫ್ರಿಕಾದಿಂದ ಸ್ವದೇಶಕ್ಕೆ ಮರಳಿದ ಮೇಲೆ ಚರಕಾವನ್ನು ಮತ್ತು ನೂಲುಗಾರರನ್ನು ಹುಡುಕಲು ಎಷ್ಟೊಂದು ಕಷ್ಟಪಟ್ಟರೆಂದು ಅವರೇ ಸ್ವತಃ ತಮ್ಮ ಆತ್ಮಚರಿತ್ರೆಯಲ್ಲಿ ಬರೆದಿದ್ದಾರೆ. ಇಂದಿನ ಕೈಗಾರೀಕರಣದ ಕಾಲದಲ್ಲಿ ಗ್ರಾಮೋದ್ಯೋಗಗಳನ್ನು ಉಳಿಸುವುದು ಒಂದು ದೊಡ್ಡ ಸವಾಲಾಗಿದೆ. ಪಕ್ಕದ ಹಾಸನ ಜಿಲ್ಲೆಯಲ್ಲಿ ಎನ್.ಟಿ.ಸಿ. ಪ್ರಾರಂಭಿಸಲಿರುವ ಅತ್ಯಾಧುನಿಕ ಜವಳಿ ಕೈಗಾರಿಕೆಯ ಮುಂದೆ ಹೆಗ್ಗೋಡಿನ ಚರಕಾ ನಿಲ್ಲುವುದೇ ಎಂಬುದು ಚಿಂತೆಯ ವಿಷಯವಾಗಿದೆ. ಎಂಥ ಅಡಚಣೆಗಳ ಮಧ್ಯೆಯೂ ಗಾಂಧೀಜಿ ಖಾದಿಯನ್ನು ಉಳಿಸಿ ಬೆಳಸಿದಂತೆ ಪ್ರಸನ್ನರವರು ಸಹ ತಮ್ಮ ಕ್ರಿಯಾಶೀಲ ಸಂಘಟನಾ ಚಾತುರ್ಯ ಮತ್ತು ನೈತಿಕ ಪ್ರಭಾವ ಇತ್ಯಾದಿಗಳ ಮೂಲಕ ಹೆಗ್ಗೋಡಿನಲ್ಲಿರುವ ಚರಕಾ ಮತ್ತು ಮಗ್ಗದ ಧ್ವನಿ ದೇಶವಾಸಿಗಳಿಗೆ ಕೇಳುತ್ತದೆಂದು ಹಾರೈಸಬೇಕು. ಈ ಸಂಬಂಧದಲ್ಲಿ ಪ್ರಸನ್ನರವರು ಮುಖ್ಯಮಂತ್ರಿಗಳಿಗೆ ಬರೆದ ಸಾರ್ವಜನಿಕ ಪತ್ರದ ಒಕ್ಕಣೆ ಈ ರೀತಿ ಇದೆ.–

'ಇತ್ತೀಚಿನ ದಿನಗಳಲ್ಲಿ ಹತ್ತಿ ನೂಲಿನ ಏರಿಕೆ ವಿಪರೀತವಾಗಿ ಕೈಮಗ್ಗ ಉದ್ದಿಮೆಯು ಮತ್ತೊಮ್ಮೆ ತೀವ್ರ ಸಂಕಷ್ಟದ ಸ್ಥಿತಿ ಎದುರಿಸುತ್ತಿದೆ. ಇದೇ ಪರಿಸ್ಥಿತಿ ಮುಂದುವರೆದರೆ ರಾಜ್ಯದ ಲಕ್ಷಾಂತರ ನೇಕಾರರು ಬೀದಿಪಾಲಾಗಲಿದ್ದಾರೆ. ಇದೆಂತಹ ವಿಪರ್ಯಾಸವೆಂದರೆ, ಒಂದು ಕಡೆ ಮಾರುಕಟ್ಟೆಯಲ್ಲಿ ಹತ್ತಿ ಕೈಮಗ್ಗದ ಬಟ್ಟೆಗೆ (ಅದರಲ್ಲೂ ನೈಸರ್ಗಿಕ ಬಣ್ಣ ಹಾಕಿದ ಬಟ್ಟೆಗೆ) ಬೇಡಿಕೆ ಏರುತ್ತಿರುವ ಸಂತಸದ ಸುದ್ದಿ ಬಂದಿದೆ. ಆದರೆ ಕೈಮಗ್ಗ ನೇಕಾರ ಮಾತ್ರ ಇನ್ನೂ ಹೀನಾಯ ಸ್ಥಿತಿ ತಲುಪಲಿದ್ದಾನೆ! ಕೈಮಗ್ಗ ಎಂಬುದು ಒಂದು ಉದ್ದಿಮೆ. ಬೆಳವಣಿಗೆಯ ಅಪಾರವಾದ ಸಾಧ್ಯತೆಯಿರುವ ಉದ್ದಿಮೆ. ಮೊದಲನೆಯದಾಗಿ ಈ ಉದ್ದಿಮೆಯನ್ನು ಗೆಲ್ಲಿಸಬಲ್ಲೆವು ಎಂಬ ನಂಬಿಕೆ ನಮ್ಮ ಸರ್ಕಾರ ಹಾಗೂ ಸಾರ್ವಜನಿಕರಿಗೆ ಬರಬೇಕಿದೆ. ಆದರೆ ಇತ್ತೀಚಿನ ದಿನಗಳಲ್ಲಿ ನೇಕಾರಿಕೆ ಎಂಬ ಗ್ರಾಮೀಣ ಉದ್ದಿಮೆ ಬಗ್ಗೆ ಮೂಗು ಮುರಿಯುವುದೇ ಹೆಚ್ಚಾಗಿದೆ. ಮುಖ್ಯಮಂತ್ರಿಗಳೇ ಹತ್ತಿ ನೂಲಿನ ಬೆಲೆಯನ್ನು ಸ್ಥಿರಗೊಳಿಸಿ ನೇಕಾರರಿಗೆ ಕಡಿಮೆ ಬೆಲೆಯಲ್ಲಿ ನೂಲು ಸರಬರಾಜಗುವಂತೆ ನೋಡಿಕೊಳ್ಳಿ. ಅದೇ ರೀತಿ ಕೇಂದ್ರ ಸರ್ಕಾರವೂ ನೇಕಾರರ ಸಹಾಯಕ್ಕೆ ಮುಂದಾಗುವಂತೆ ಮಾಡಬೇಕಿದೆ'.

– ಪ್ರಸನ್ನ ಹೆಗ್ಗೋಡು
ಸಾಗರ ತಾಲ್ಲೂಕು

* * *

ಖಾದಿ ವಿಚಾರ

ಪ್ರೊ॥ ಫೆನರ್ ಪ್ರಖ್ಯಾತ ವಿಜ್ಞಾನಿ. ಅವರು ಚಿಕೂನ್‌ಗುನ್ಯಾವನ್ನು ದೂರ ಇಟ್ಟವರು. ಅವರ ಪ್ರಕಾರ ಮುಂಬರುವ ನೂರು ವರ್ಷಗಳಲ್ಲಿ ಮಾನವ ಜೀವಿಯೇ ಇಲ್ಲದಂತಾಗುವುದು. ಎರಡು ದಶಕಗಳ ಜಗತೀಕರಣ ಮಾನವ ಸಂಸ್ಕೃತಿಯನ್ನು ರೋಬೋಟ್‌ಕರಣಗೊಳಿಸಿದೆ. ಇನ್ನು ಅದು ಹಿಂದಕ್ಕೆ ಬರದಂಥ ಸ್ಥಿತಿಯನ್ನು ತಲುಪಿದೆ. ಯಾವುದೇ ಸಾಧನಗಳ ಮೂಲಕ ಗರಿಷ್ಠ ಲಾಭ ಪಡೆಯುವುದು ಅರ್ಥಿಕ ನೀತಿಗಳನ್ನು ನಿರ್ದೇಶಿಸುವ ತತ್ವವಾಗಿದೆ. ಮನುಷ್ಯನನ್ನು ಬೃಹತ್ ಉತ್ಪಾದನೆಯ ಸಾಧನವನ್ನಾಗಿ ಅವು ಪರಿಗಣಿಸಿವೆ. ಆರ್ಥಿಕ ಹಿಂಜರಿತ, ಹವಾಮಾನ ಬದಲಾವಣೆ, ಸಂತೋಷದ ನಷ್ಟ ಮತ್ತು ಭಯೋತ್ಪಾದಕತೆ ನರಳುತ್ತಿರುವ ನಾಗರಿಕತೆಯ ಸಂಕೇತಗಳಾಗಿವೆ. ಇಂದು ಜಗತ್ತಿನಾದ್ಯಂತ ರಾಜಕೀಯ ಮುಖಂಡರು ವಸ್ತುಗಳ ಮಾರಾಟದ ಬಗ್ಗೆ ಹೆಚ್ಚು ಸಮಯ ಕೊಡುತ್ತಾರೇ ವಿನಾ ಜೀವನದ ಗುಣಮಟ್ಟವನ್ನು ಸುಧಾರಿಸುವ ಬಗ್ಗೆ ಕೊಡುವುದಿಲ್ಲ. ಸಾಮಾಜಿಕ ನಡವಳಿಕೆಯ ಬದಲಾವಣೆ ಮೂಲಕ ವಸ್ತುಗಳನ್ನು ಮಾರಾಟ ಮಾಡುವ ಪ್ರಯತ್ನವನ್ನು ವ್ಯವಸ್ಥಿತವಾಗಿ ಭಾರತದಲ್ಲಿ ಮಾಡಲಾಗಿದೆ. ೧೮೫೦ರಷ್ಟು ಹಿಂದೆ ಬ್ರಿಟಿಷರು ಚಹಾವನ್ನು ಪರಿಚಯಿಸಿದಾಗ ಅದನ್ನು ಜನರಿಗೆ ಉಚಿತವಾಗಿ ಹಂಚಿದ್ದರಲ್ಲದೆ ಒಂದು ಕಪ್ ಚಹಾಕ್ಕೆ ಅರ್ಧಕಾಸು ನಾಣ್ಯವನ್ನು ಪ್ರೋತ್ಸಾಹ ಧನವಾಗಿ ಕೊಟ್ಟರು. ಸ್ವಲ್ಪ ಸಮಯದಲ್ಲಿಯೇ ಪೌಷ್ಟಿಕ ಪೇಯಗಳಾಗಿದ್ದ ನಿಂಬೆ ಹಣ್ಣಿನ ರಸ, ಎಳೆನೀರು, ಮಜ್ಜಿಗೆ ಮತ್ತು ಇತರ ಸಸ್ಯರಸಗಳು ಮಾಯವಾದವು. ೧೮೫೭ ರಿಂದ ೧೯೪೭ರ ವರೆಗೆ ಬ್ರಿಟಿಷ್ ಮಿಲ್‌ಗಳು ತಯಾರಿಸಿದ ಬಟ್ಟೆ ಭಾರತದ ಶ್ರೇಷ್ಠ ದರ್ಜೆಯ ಕೈಮಗ್ಗ ಬಟ್ಟೆಗಳನ್ನು ನುಂಗಿಹಾಕಿತು. ಗಾಂಧೀಯವರು ತಮ್ಮ ಸ್ವದೇಶಿ ಚಳುವಳಿಯನ್ನು ಪ್ರಾರಂಭಿಸದೆ ಹೋಗಿದ್ದರೆ ಭಾರತೀಯ ಗ್ರಾಮೋದ್ಯೋಗಗಳು ಕಣ್ಮರೆಯಾಗುತ್ತಿದ್ದವು. 'ಸ್ವದೇಶಿ' ಬ್ರಿಟಿಷರನ್ನು ಹಳಿಯುವುದಾಗಿರಲಿಲ್ಲ. ಬದಲಿಗೆ ಸ್ವಾವಲಂಬಿತ ಸಮಾಜದ ಗುರಿಹೊಂದಿತ್ತು. ಅಂದರೆ ಆ ಸಮಾಜವು ದೊರೆಯುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಮೂಲಭೂತ ಅಗತ್ಯತೆಗಳನ್ನು ಪೂರೈಸಿಕೊಳ್ಳುವುದಾಗಿತ್ತು. ಇಂದು ಭಾರತೀಯ ಕುಶಲಕರ್ಮಿಗಳು ೧.೮ ಬಿಲಿಯನ್ ಡಾಲರ್ ಬೆಲೆಯಷ್ಟು ಪದಾರ್ಥಗಳನ್ನು ಉತ್ಪಾದಿಸುತ್ತಾರೆ. ಆಗ್ನಸ್ ಮಡಿಸನ್ ಓರ್ವ ಆರ್ಥಿಕ ಇತಿಹಾಸತಜ್ಞ. ಅವರು ಒಂದು ಪುಸ್ತಕ ಬರೆದಿದ್ದಾರೆ. ಅದರ ಹೆಸರು 'ಸಹಸ್ರಮಾನದ ಜಾಗತೀಕ ಅರ್ಥಶಾಸ್ತ್ರದ ಸಮಗ್ರದೃಷ್ಟಿ' ಅದರಲ್ಲಿ ಆಗ್ನಸ್ ಪ್ರಕಾರ ಕ್ರಿ.ಶ.೧ನೇ ಶತಮಾನದಿಂದ ೧೫ನೇ ಶತಮಾನದವರೆಗೆ ಭಾರತವು ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಆರ್ಥಿಕವಲಯವನ್ನು ಹೊಂದಿತ್ತು. ಅಂದರೆ ಜಾಗತಿಕ ಒಟ್ಟು ಜೆಡಿಪಿಯ ಶೇ.೩೨.೯ರಷ್ಟು ಭಾಗವಿತ್ತು. ೧ನೇ ಶತಮಾನದಲ್ಲಿ ಭಾರತದ ಮಸ್ಲಿನ್ ಬಟ್ಟೆಗಳು ರೋಮನ್ ಮಹಿಳೆಯರಿಗೆ ಪ್ರಿಯವಾಗಿತ್ತು. ರೋಮನ್ ಸೆನೇಟ್ ಭಾರತದ ಬಟ್ಟೆಗಳ ಆಮದು ಮೇಲೆ ನಿಷೇಧ ಹೇರಿತ್ತು. ಭಾರತದ ಜವಳಿಯ ಬಗ್ಗೆ ಇದ್ದ ಜನಪ್ರಿಯತೆಯ ಕಾರಣವಾಗಿ ಇಂಗ್ಲೆಂಡಿನ ೩ನೇ ವಿಲಿಯಮ್‌ನು ೧೭೦೦ರಲ್ಲಿ ಭಾರತೀಯ ಬಟ್ಟೆಗಳ ಮಾರಾಟ ನಿಷೇಧಿಸುವಂತೆ ಒತ್ತಾಯ ಉಂಟುಮಾಡಿದನು. ಆಗ ಕ್ಲೈವ್‌ನ ಸಮಿತಿಯಲ್ಲಿದ್ದ ನೂ ಲ್ಯೂಕ್ ಸ್ಕ್ರಾಪೆಟೂನ್ ತನ್ನ 'ಹಿಂದುತ್ವವಾದಿ ಸರ್ಕಾರದ ಬಗ್ಗೆ ಚಿಂತನೆ' ಎಂಬ

ಪುಸ್ತಕದಲ್ಲಿ ಉತ್ಪಾದಕರು, ವಾಣಿಜ್ಯ ಮತ್ತು ವ್ಯವಸಾಯ ಬಹು ಉನ್ನತವಾಗಿ ಬೆಳೆದಿದ್ದವು. ಅಲ್ಲಿ ಎಲ್ಲಿಯೂ ಶೋಷಣೆಯ ಕೈವಾಡವಿರಲಿಲ್ಲ. ವ್ಯಾಪಾರಿಗಳಿಗೆ ಸಾಕಷ್ಟು ಲಾಭವಿತ್ತು ಎಂದು ಬರೆದಿದ್ದಾನೆ. ಮುಂದಿನಕಾಲದಲ್ಲಿ ಭಾರತೀಯ ವಸ್ತುಗಳು ತನ್ನ ಸ್ಪರ್ಧಾತ್ಮಕ ಗುಣಗಳನ್ನು ಕಳೆದುಕೊಂಡವು. ಏಕೆಂದರೆ ಗುಣಮಟ್ಟದ ಬಗ್ಗೆ ಸಂಶೋಧನೆ ಮತ್ತು ಅಭಿವೃದ್ಧಿ ಇರಲಿಲ್ಲ. ಅಲ್ಲದೇ ಜಾಗತಿಕ ವ್ಯಾಪಾರಿಗಳ ತೀವ್ರತಮವಾದ ಮಾರುಕಟ್ಟೆ ರಣನೀತಿಯ ಕಾರಣದಿಂದ ಉಂಟಾದ ಸಾಮಾಜಿಕ ನಡವಳಿಕೆಯಲ್ಲಿಯ ಬದಲಾವಣೆ. ಬಹಳಷ್ಟು ನಗರ ಪ್ರದೇಶಗಳಲ್ಲಿ ಸೆಲ್ವಾರ್ ಕಮೀಜ್, ಕುರ್ತಾ, ಪೈಜಾಮ, ಸೀರೆಗಳ ಬದಲಾಗಿ ಜೀನ್ಸ್, ಬರ್ಮುಡಾ ಮತ್ತು ಚಿಕ್ಕ ಶರ್ಟ್‌ಗಳು ಬಳಕೆಗೆ ಬಂದಿವೆ. ಅದರಿಂದಾಗಿ ಬಹಳಷ್ಟು ಕೆಲಸಗಳು ಕಣ್ಮರೆಯಾಗಿವೆ. ಬಹಳ ಜನ ದರ್ಜಿಗಳು ಬೀದಿಪಾಲಾಗಿದ್ದಾರೆ ಮತ್ತು ಪಾರಂಪರಿಕ ಅಂಗಡಿಗಳು ಮುಚ್ಚಿವೆ. ಸಾಮಾಜಿಕ ನಡತೆಯಲ್ಲಿಯ ಬದಲಾವಣೆಯ ಕಾರಣದಿಂದಾಗಿಯೇ ಭಾರತದಲ್ಲಿ ೫.೧೫ಳ ದಶಲಕ್ಷ ಹೆಚ್.ಐ.ವಿ. ಪೀಡಿತ ರೋಗಿಗಳಿದ್ದಾರೆ. ವಲಸೆ ಬಂದಿರುವುದರಿಂದ ಈ ರೋಗವನ್ನು ತಡೆಯದೇ ಹೋದರೆ ಇದು ಉಲ್ಬಣಗೊಳ್ಳುವ ಸಾಧ್ಯತೆಯಿದೆ. ಅದರಿಂದಾಗಿ ಬಹುದೊಡ್ಡ ಪ್ರಮಾಣದ ಶ್ರಮ ನಷ್ಟವಾಗುವುದು. ಇದಕ್ಕೆಲ್ಲ ಕಾರಣ ಬೇರೆ ದೇಶಗಳಲ್ಲಿಯ ಕ್ರೌರ್ಯ ಮತ್ತು ಲೈಂಗಿಕ ಸ್ವಚ್ಛಂದತೆ ಇತ್ಯಾದಿ ತೋರಿಸುವ ನಕಲಿ ಡಿ.ವಿ.ಡಿಗಳು ಬಹಳಷ್ಟು ಕಾರಣವಾಗಿವೆ. ಇವು ಅಶಿಕ್ಷಿತ ಜನರಿಗೂ ಮತ್ತು ಮುಗ್ಧ ಮಕ್ಕಳಿಗೂ ಸುಲಭವಾಗಿ ಭಾರತದಲ್ಲಿ ಸಿಗುತ್ತವೆ. ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ ಪ್ರಕಾರ ದೇಶದಲ್ಲಿ ಪ್ರತಿ ಇಪ್ಪತ್ತೊಂದು ನಿಮಿಷಕ್ಕೊಬ್ಬಳಂತೆ ಹೆಂಗಸಿನ ಮೇಲೆ ಬಲಾತ್ಕಾರವಾಗುತ್ತಿದೆ. ಬಹುಸಂಖ್ಯಾತ ಭಾರತೀಯ ಸಿನಿಮಾಗಳು ಸಾಮಾಜಿಕ ನಡತೆ ಮೇಲೆ ದುಷ್ಪರಿಣಾಮ ಬೀರುತ್ತವೆ. ಏಕೆಂದರೆ ಅವೆಲ್ಲವೂ ಕೊಳ್ಳುಬಾಕ ಸಂಸ್ಕೃತಿಯನ್ನು ಪ್ರಚಾರ ಮಾಡುತ್ತವೆ. ನಗರ ಜೀವನ ಪದ್ಧತಿಯನ್ನು ಕೂಡ ಜನಪ್ರಿಯಗೊಳಿಸುತ್ತವೆ. ಭಾರತೀಯ ಸಿನೆಮಾಗಳು ಕಲಾತ್ಮಕವಾಗಿ ರಚನೆಗೊಂಡಿದ್ದರೆ ಕೋಟ್ಯಾವಧಿ ಜನರನ್ನು ಬಡತನ ರೇಖೆಗಿಂತ ಮೇಲೆತ್ತಬಹುದಾಗಿತ್ತು. ಮಹಾರಾಷ್ಟ್ರದ ಪಶ್ಚಿಮ ಭಾಗದಲ್ಲಿ ಕೃಷಿ ಭೂಮಿಯ ಆದಾಯವು ಭಾರತದಲ್ಲಿಯೇ ಅತಿ ಹೆಚ್ಚಾಗಿದೆ ಏಕೆಂದರೆ ಅ ಪ್ರದೇಶದಲ್ಲಿ ಇದ್ದ ವಿವಿಧ ಸಂತ ಪರಂಪರೆಗಳ ಕಾರಣದಿಂದ ಅಲ್ಲಿಯ ಜನರ ಸಾಮಾಜಿಕ, ಸಾಂಸ್ಕೃತಿಕ ಜೀವನವು ಬೇರೆ ಪ್ರದೇಶಕ್ಕಿಂತ ಕಡಿಮೆ ಹಾಳಾಗಿದೆ. ಭಾರತದ ಬೇರೆ ಪ್ರದೇಶಗಳ ಜೊತೆ ಹೋಲಿಕೆ ಮಾಡಿದರೆ ಮಹಾರಾಷ್ಟ್ರದ ಹಳ್ಳಿಗಳಲ್ಲಿ ಕಳ್ಳತನವಾಗುವುದು ಕಡಿಮೆ. ಅಲ್ಲದೇ ಹಳ್ಳಿಗರಲ್ಲಿರುವ ಸಹಕಾರದ ಭಾವನೆ ಮಾದರಿಯಾಗಿದೆ. ನಲವತ್ತು ವರ್ಷಗಳ ಹಿಂದೆ ಒರಿಸ್ಸಾದ ಪ್ರತಿಯೊಂದು ಹಳ್ಳಿಯಲ್ಲಿ ನೈತಿಕ ವಿಜ್ಞಾನ ಸಾಮೂಹಿಕ ಕೇಂದ್ರಗಳಿದ್ದವು. ಅಲ್ಲಿಗೆ ಬಂದು ಹಳ್ಳಿಗರು ಧಾರ್ಮಿಕ ಪ್ರವಚನಗಳನ್ನು ಕೇಳುತ್ತಿದ್ದರು. ಇಂದು ಅವುಗಳ ಸ್ಥಾನದಲ್ಲಿ ಹೆಂಡದಂಗಡಿಗಳು, ಬ್ಯೂಟಿ ಪಾರ್ಲರ್‌ಗಳು, ವೀಡಿಯೋ ಅಂಗಡಿಗಳು ಬಂದಿವೆ. ದಿಕ್ಕು ದೆಸೆಯಿಲ್ಲದ ರಿಯಾಯ್ತಿ ಹಣದ ಪ್ರಭಾವ ಮತ್ತು ಶ್ರೀಮಂತ ಕುಟುಂಬಗಳಿಗೂ ಆಹಾರ ಧಾನ್ಯಗಳ ವಿತರಣೆಯಿಂದಾಗಿ ಸಾಹಸ ಪ್ರವೃತ್ತಿ ನಷ್ಟವಾಗಿದೆ. ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರ ಕೊರತೆಯುಂಟಾಗಿದೆ. ಇದರಿಂದಾಗಿ ದೇಶದಾದ್ಯಂತ ಸಾಮಾಜಿಕ ನಡತೆಯ ಬದಲಾವಣೆ ಅವನತಿಗೊಂಡಿದೆ. ಈ ಸಾಮಾಜಿಕ ಬದಲಾವಣೆಯನ್ನು ತಪ್ಪಿಸಲು ಶೀಘ್ರ ಕ್ರಮ ಕೈಗೊಳ್ಳದಿದ್ದರೆ ದೊಡ್ಡ ಪ್ರಮಾಣದಲ್ಲಿ ಆರ್ಥಿಕ ವಿನಾಶಕ್ಕೆ ಕಾರಣವಾಗುವುದು. ಗಾಂಧೀಜಿಯವರ ಖಾದಿ ಅರ್ಥಶಾಸ್ತ್ರಾಧಾರಿತ ಸ್ವರಾಜ್ಯವನ್ನು ಸ್ಥಾಪಿಸುವುದೇ ಇಂಥ ದುರಂತಕ್ಕೆ ಪರಿಹಾರ.

(ಸಾಭಾರ : ಡೆಕ್ಕನ್ ಹೆರಾಲ್ಡ್; ಮೂಲ–ಸುಧಾಂಶು ಆರ್.ದಾಸ್; ಅನು–ಸುಕೌ)

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಸಿ.ಎಸ್.ಕೃಷ್ಣರಾವ್– ಮೈಸೂರು
ಶ್ರೀ ಶಂಭೂನಹಳ್ಳಿ ಕೃಷ್ಣೇಗೌಡ – ಶಂಭೂನಹಳ್ಳಿ
ಶ್ರೀ ಶಂಕರಪ್ಪ – ಮೈಸೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಬಸವರಾಜ ಹೂಗಾರ – ಮಂಡ್ಯ
ಡಾ॥ ಸುಜಯ್‌ಕುಮಾರ್ – ಶ್ರೀರಂಗಪಟ್ಟಣ
ಶ್ರೀ ಕಾಂಚನಾ ಕದಿರೇಶನ್ – ಮೈಸೂರು
ಶ್ರೀಮತಿ ವಿಶಾಲಾಕ್ಷಿ ಶರ್ಮ – ಬೆಂಗಳೂರು
ಸರ್ಕಾರಿ ಪ್ರಥಮದರ್ಜೆ ಕಾಲೇಜು – ತೀರ್ಥಹಳ್ಳಿ

ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.